# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜೂನ್, ೨೦೧೯ ಸಂಪಾದಕ : ಡಿ.ಎಸ್. ನಾಗಭೂಷಣ ಸಂಪುಟ: ೮ ಸಂಚಿಕೆ: ೫

ಚಂದಾ: ರೂ. ೩೫೦/– (೨೦೧೯ರ ಮೇ ಯಿಂದ ಸೆಪ್ಟಂಬರ್, ೨೦೨೦ರವರೆಗೆ) ಬೆಲೆ : ಬಿಡಿ ಪ್ರತಿ: ರೂ. ೨೫/– ಪುಟ: ೨೦

ವಿಳಾಸ: ಎಚ್.ಐ.ಜಿ–೫, 'ನುಡಿ', ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ–೫೭೭ ೨೦೪

ದೂ: ೦೮೧೮೨–೨೪೮೫೭೪ ಸಂಚಾರಿ: ೯೪೪೯೭ ೪೨೨೮೪ ಈ ಮೇಲ್: dsnagabhushana@gmail.com

## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೇ,

ಬಹುದಿನಗಳ ಕೌತುಕ ಕೊನೆಗೊಂಡಿದೆ. ೧೭ನೇ ಲೋಕಸಭಾ ಚುನಾವಣಾ ಫಲಿತಾಂಶಗಳು ಹೊರಬಿದ್ದು ಮುಂದಿನ ಐದು ವರ್ಷಗಳ ಕಾಲ ಈ ದೇಶವನ್ನಾಳುವವರಾರು ಎಂಬುದು ನಿರ್ಧಾರವಾಗಿದೆ. ಹೀಗಾಗಿ ಸುಮಾರು ಎರಡು ತಿಂಗಳ ಕಾಲ ನಡೆದ ಚುನಾವಣಾ ಪ್ರಚಾರ ಎಂಬ ಗಲಭೆ–ಗದ್ದಲ, ಪರಸ್ಪರ ಕೆಸರೆರಚಾಟ ಅಂತ್ಯ ಕಂಡಿದೆ. ಜನ ನರೇಂದ್ರ ಮೋದಿಯವರೇ ದೇಶವನ್ನು ಆಳಲು ಸಮರ್ಥರು ಎಂಬ ನಿರ್ಣಾಯಕ ಆದೇಶ ನೀಡಿದ್ದಾರೆ. ಪ್ರಜಾತಂತ್ರ ಅಪಾಯದಲ್ಲಿದೆ ಎಂದು ಹೇಳುತ್ತಾ ಮೋದಿಯವರನ್ನು ವಿರೋಧಿಸುತ್ತಿದ್ದವರೂ, ಅದೇ ಪ್ರಜಾತಂತ್ರದ ಹಿತದೃಷ್ಟಿಯಿಂದ ಈ ಜನಾದೇಶವನ್ನು ಸದ್ಯಕ್ಕಾದರೂ ಸದ್ದಿಲ್ಲದೆ ಒಪ್ಪಿಕೊಳ್ಳಬೇಕಿದೆ. ಹಾಗೆ ಒಪ್ಪಿಕೊಂಡ ನಂತರವೇ ಇವರು ತಮ್ಮೆಲ್ಲ ಅಂಕಿ–ಅಂಶ, ವಾದ–ಪ್ರತಿವಾದ–ಪ್ರತಿಪಾದನೆಗಳನ್ನೆಲ್ಲ ಏಕೆ ಬಹುಸಂಖ್ಯಾತ ಜನ ನಿರ್ಲಕ್ಷಿಸಿದ್ದಾರೆ ಎಂಬುದರ ಬಗ್ಗೆ ಆತ್ಮಾವಲೋಕನ ಅಥವಾ ಬಹಿರಂಗ ಚರ್ಚೆಗಳನ್ನು ಆರಂಭಿಸಬಹುದು. ಮೊದಲಿಗೆ ಮೋದಿ ಮತ್ತವರ ಬಿಜೆಪಿ ಪಕ್ಷಕ್ಕೆ ನಮ್ಮ ಪತ್ರಿಕೆಯ ಶುಭ ಹಾರೈಕೆಗಳು.

ಆದರೆ ಚುನಾವಣಾ ವಿಜಯ ವಾಸ್ತವಾಂಶಗಳನ್ನು ಅಳಿಸಿಹಾಕಲಾರದು. ನಮ್ಮ ಪತ್ರಿಕೆಯೂ ಪ್ರತಿಪಾದಿಸುತ್ತಾ ಬಂದಿರುವಂತೆ ಕಳೆದ ಐದು ವರ್ಷಗಳ ಮೋದಿ ಆಡಳಿತ ಅವರು ೨೦೧೪ರ ಚುನಾವಣೆಗಳ ಸಂದರ್ಭದಲ್ಲಿ ಆಡಿದ್ದ ಮಾತುಗಳು ಹುಟ್ಟಿಸಿದ್ದ ನಿರೀಕ್ಷೆಗಳ ಹಿನ್ನೆಲೆಯಲ್ಲಿ ಅಷ್ಟೇನೂ ಪರಿಣಾಮಕಾರಿಯಾಗಿ ಇರಲಿಲ್ಲ. ನಿರುದ್ಯೋಗ ಹೆಚ್ಚಿತ್ತು, ಕೈಗಾರಿಕಾ ಉತ್ಪಾದನೆ ಕುಸಿದಿತ್ತು, ಕೃಷಿ ವಲಯ ಕಂಗೆಟ್ಟು ರೈತರ ಆತ್ಮಹತ್ಯೆ ಮತ್ತು ಅಶಾಂತಿ ಹೆಚ್ಚಿತ್ತು. ಜೊತೆಗೆ ಕೋಮು ಸಾಮರಸ್ಯ ಕೆಡಿಸುವ ಅನೇಕ ಅನಾಗರಿಕ ಘಟನೆಗಳು ಆಡಳಿತ ಪಕ್ಷದ ನಾಯಕರ ಕುಮ್ಮಕ್ಕುಗಳಿಂದಲೇ ನಡೆದಿದ್ದವು. ಆದರೂ ಮೋದಿಯವರಿಗೆ ಜನ ಕಳೆದ ಬಾರಿಗಿಂತ ಕೊಂಚ ಹೆಚ್ಚು ಸ್ಥಾನ ನೀಡಿ ಪ್ರೋತ್ಸಾಹಿಸಿದ್ದಾರೆಂದರೆ, ನಮ್ಮ ಚುನಾವಣಾ ರಾಜಕೀಯದ ಬಗ್ಗೆಯೇ ನಾವು ಆಳವಾಗಿ ಯೋಚಿಸುವ ಕಾಲ ಬಂದಿದೆ ಎನಿಸುತ್ತದೆ. ಜಗತ್ತಿನಾದ್ಯಂತ ಪ್ರಜಾತಂತ್ರದ ಕಲ್ಪನೆಯನ್ನೇ ಕುಬ್ಜಗೊಳಿಸಿ ವಿರೂಪ ಮಾಡುತ್ತಾ ನಿಧಾನವಾಗಿ ಹರಡುತ್ತಿರುವ 'ಚುನಾವಣೀಯ ಪ್ರಜಾತಂತ್ರ ' ಎಂಬುದು ನಮ್ಮ ದೇಶಕ್ಕೂ ಕಾಲಿಟ್ಟಂತಿದೆ. ಅಂದರೆ ಪ್ರಜಾತಂತ್ರವೆಂದರೆ, ಚುನಾವಣೆಗಳಲ್ಲಿ ಗೆಲ್ಲಬಲ್ಲ ಪಕ್ಷ ಸಂಘಟನೆಯ ದಕ್ಷತೆ ಮತ್ತು ಕೌಶಲ್ಯಗಳನ್ನು ಕರಗತಮಾಡಿಕೊಳ್ಳುವುದುಎಂಬ ಭಾವನೆಯನ್ನು ಉಂಟು ಮಾಡಿ ಅದರಡಿ 'ಬಲಿಷ್ಠ' ರಾಷ್ಟ್ರದ ಹೆಸರಿನಲ್ಲಿ ಸರ್ವಾಧಿಕಾರ ಸ್ಥಾಪಿಸುವುದು. ಇದನ್ನು 'ಪ್ರಜಾಸತ್ತಾತ್ಮಕ ಸರ್ವಾಧಿಕಾರ'ವೆಂದೂ ವ್ಯಂಗ್ಯವಾಗಿ ಕರೆಯಬಹುದು.

ದುರ್ಬಲ ರಾಜಕೀಯ ನಾಯಕತ್ವದ ಅಡಿ ಬಹಳ ಕಾಲ ದಿಕ್ಕೆಟ್ಟಿರುವ ದೇಶಗಳಲ್ಲಿ (ಉದಾ: ಭಾರತದಲ್ಲಿ ಮನಮೋಹನ ಸಿಂಗ್ ಅವರ ಪ್ರಧಾನ ಮಂತ್ರಿತ್ವದ ಕಾಲ) ಇದು ಸುಲಭವಾಗಿ ಜನರ ಮನ್ನಣೆಯನ್ನೂ ಪಡೆದುಬಿಡುತ್ತದೆ. ಹೊಸ ನಾಯಕನ ಬಗ್ಗೆ ಭರವಸೆ ತಾಳಿರುವ ಜನತೆಗೆ ಆತನ ಯಾವುದೇ ಆಡಳಿತ ಕ್ರಮಗಳನ್ನು ಪ್ರಜಾತಾಂತ್ರಿಕ ಪರಿಶೀಲನೆಗೆ ಒಡ್ಡುವ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಪ್ರಯತ್ನಗಳು ಅನಗತ್ಯ ಅಡ್ಡಿ ಆತಂಕಗಳಂತೆಯೇ ಕಾಣುತ್ತವೆ. ಆಗ ಹೊಸ ನಾಯಕನಿಗೆ ಈ ಸಂಸ್ಥೆಗಳನ್ನು ಅಧಿಕಾರದ ಒಳಸುಂಠಿಗಳ ಮೂಲಕ ಉಪಾಯವಾಗಿ ದಾಟಿಹೋಗುವ ಧೈರ್ಯ ಪ್ರಾಪ್ತವಾಗುತ್ತದೆ. ಭಾರತದಲ್ಲಿ, ಮೋದಿಯವರ ಅಧಿಕಾರಾವಧಿಯಲ್ಲಿ ಆದದ್ದೂ ಇದೇನೇ. ಈ ಚುನಾವಣೆಗಳ ಮುನ್ನ ಮತ್ತು ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಇಂತಹ ಅನೇಕ ಒಳಸುಂಠಿಗಳ ರಾಜಕಾರಣ ನಡೆದದ್ದನ್ನು ನಾವು ಗಮನಿಸಿದ್ದೇವೆ.

ಇದೇನೇ ಇದ್ದರೂ ನರೇಂದ್ರ ಮೋದಿಯವರು ಇನ್ನೂ ಐದು ವರ್ಷ ನಮ್ಮ ಪ್ರಧಾನ ಮಂತ್ರಿಗಳು ಎಂಬುದು ವಾಸ್ತವಾಂಶ. ಹಾಗಾಗಿ ಈ ವಾಸ್ತವಾಂಶವನ್ನು ಗಮನದಲ್ಲಿಟ್ಟುಕೊಂಡೇ ಈ 'ಚುನಾವಣೀಯ ಪ್ರಜಾತಂತ್ರ' ಬಲಿಯದಂತೆ ಹೇಗೆ ಎಚ್ಚರ ವಹಿಸಬಹುದೆಂಬುದನ್ನು ನಾವು ಯೋಚಿಸಬೇಕು. ಈ ದೃಷ್ಟಿಯಿಂದ ಗಮನಿಸಬೇಕಾದ ಒಂದು ಮುಖ್ಯ ಅಂಶವೆಂದರೆ ಈ ಬಾರಿ ಮೋದಿಯವರು ಪಡೆದಿರುವ ಜಯ ಅವರ ಪಕ್ಷ ಮತ್ತು ಅದರ ಬಾಲಬಡುಕ ಮಾಧ್ಯಮಗಳು ಹೇಳುತ್ತಿರುವಂತೆ 'ಪ್ರಚಂಡ'ವಾದದ್ದೇ? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾದುದು. ಫಲಿತಾಂಶಗಳನ್ನು ದಿಟ್ಟಿಸಿ ನೋಡಿದಾಗ ಇದಕ್ಕೆ ಖಂಡಿತ ಇಲ್ಲ ಎಂಬುದೇ ಉತ್ತರ.. ಮೋದಿ ಹೆಚ್ಚೆಂದರೆ ರಾಷ್ಟ್ರದ ಬಹುಮತದ ನಾಯಕ. ಖಂಡಿತ ಸರ್ವ ಸಮ್ಮತ ನಾಯಕನಂತೂ ಅಲ್ಲ. ಏಕೆಂದರೆ ರಾಷ್ಟ್ರದ ಮೂರು ದೊಡ್ಡ ರಾಜ್ಯಗಳಲ್ಲಿ–ತಮಿಳ್ನಾಡು, ಕೇರಳ, ಆಂಧ್ರಪ್ರದೇಶಗಳಲ್ಲಿ–ಮೋದಿಯವರ ಪಕ್ಷ ಖಾತೆಯನ್ನೇ ತೆರೆದಿಲ್ಲ! ಇನ್ನು ತೆಲಂಗಾಣ ಮತ್ತು ಪಂಜಾಬ್‌ಗಳಲ್ಲಿ ಸಾಂಕೇತಿಕವೆಂಬಂತೆ ಒಂದು ಸ್ಥಾನವನ್ನು ಮಾತ್ರ ಗಳಿಸಿದೆ. ಇನ್ನು ಒರಿಸ್ಸಾ ಮತ್ತು ಪ. ಬಂಗಾಳಗಳಲ್ಲದೆ, ಪುದಚೇರಿ, ಗೋವಾ ಮತ್ತು ನಾಗಾಲ್ಯಾಂಡ್‌ಗಳಂತಹ ಪುಟ್ಟ ರಾಜ್ಯಗಳಲ್ಲಿ ಭಾಜಪದ ಸಾಧನೆ ಅಷ್ಟಕ್ಕಷ್ಟೆ. ಜೊತೆಗೆ ರಾಷ್ಟ್ರದಲ್ಲಿ ಈ ಪಕ್ಷದ ಒಟ್ಟು ಮತ ಶೇ. ನಲವತ್ತಕ್ಕಿಂತ ಸ್ವಲ್ಪ ಹೆಚ್ಚಷ್ಟೆ,

ನಮ್ಮ ಸಂವಿಧಾನದ ಆಧಾರ ತತ್ವಗಳಲ್ಲೊಂದಾದ ಸಂಸದೀಯ ಪ್ರಜಾಪ್ರಭುತ್ವದ ಪ್ರಕಾರ ಚುನಾವಣೆಗಳ ನಂತರ ಗೆದ್ದ ಪಕ್ಷ ಅಥವಾ ಮೈತ್ರಿಕೂಟ ದೇಶದ ಪ್ರಧಾನಿಯನ್ನು ಆರಿಸುವ ಬದಲು ಚುನಾವಣೆಗೆ ಮುನ್ನವೇ ಪ್ರಧಾನಿ ಅಭ್ಯರ್ಥಿಯನ್ನು ಘೋಷಿಸಿ ಅವರಿಗೆ ಬೆಂಬಲ ಕೋರುವುದು ಆಧ್ಯಕ್ಷೀಯ ಪದ್ಧತಿಯ ಅನುಕರಣೆ ಎನ್ನಿಸುತ್ತದೆ. ಇದು ರಾಜ್ಯಗಳ ಒಕ್ಕೂಟದ ಸ್ವರೂಪ ಹೊಂದಿರುವ ಭಾರತದ ರಾಜಕಾರಣವನ್ನು ಅಪ್ರಾತಿನಿಧಿಕಗೊಳಿಸಿ ವಿರೂಪಗೊಳಿಸುವ ಪ್ರಯತ್ನವೇ ಆಗಿದೆ. ಹಾಗೆ ನೋಡಿದಾಗ, ಈ ಚುನಾವಣೆಗಲ್ಲಿ ಮೋದಿಯವರು ಪ್ರಧಾನಿಯಾಗಲು ಕರ್ನಾಟಕವೊಂದರ ಹೊರತಾಗಿ ಇಡೀ ದಕ್ಷಿಣ ಭಾರತದಿಂದ ಇಡಿಯಾಗಿ ತಿರಸ್ಕೃತರಾಗಿರುವ ವ್ಯಕ್ತಿಯಾಗಿದ್ದಾರೆ. ಈ ದೃಷ್ಟಿಯಿಂದ ಮೋದಿಯವರ ವಿಜಯ ಭಾರತ ಒಂದು ರಾಷ್ಟ್ರವಾಗಿ ಅದರ ಜೀವಂತಿಕೆಗೆ ಕಾರಣವಾಗಿರುವ ಪ್ರಾದೇಶಿಕ ವ್ಯತ್ಯಾಸ–ವೈವಿಧ್ಯತೆಗಳನ್ನು ಗುಡಿಸಿಹಾಕುವಂತಹ ರಾಜಕೀಯ ವಿಜಯವಾಗಿದೆ. ಇದು ಇನ್ನೊಂದು ಅರ್ಥದಲ್ಲಿ ಇಡೀ ಭಾರತದ ಮೇಲಿನ ಹಿಂದಿ ಭಾರತದ ದಿಗ್ವಿಜಯವಾಗಿದೆ. ಕರ್ನಾಟಕ ಹೇಗೂ ಇತಿಹಾಸದುದ್ದಕ್ಕೂ ಆರ್ಯ ಭಾರತ ದಕ್ಷಿಣಕ್ಕೆ ಲಗ್ಗೆ ಇಡಲು ದಿಡ್ಡಿಬಾಗಿಲು ತೆರೆದ ನಾಡೇ ಆಗಿದೆ. (ಇದರ ವಿವರಕ್ಕಾಗಿ ನೋಡಿ: ಡಾ. ಷ ಶೆಟ್ಟರ್ ಅವರ ' ಶಂಗಂ ತಮಿಳಗಂ')

ಮೋದಿ, ಕೆಲವರು ಬಿಂಬಿಸುತ್ತಿರುವಂತೆ ಈ ಚುನಾವಣೆಗಳಲ್ಲಿ ರಾಷ್ಟ್ರದ ಪ್ರಶ್ನಾತೀತ ನಾಯಕರಾಗೇನೂ ಹೊರಹೊಮ್ಮಿಲ್ಲ. ಅವರು ಗೆದ್ದಿರುವುದು ಪ್ರಮುಖವಾಗಿ ಅವರಿಗೆ ರಾಷ್ಟ್ರಮಟ್ಟದಲ್ಲಿ ಸವಾಲೊಡ್ಡಬಹುದಾಗಿದ್ದ ಕಾಂಗ್ರೆಸ್ ಒಂದು ಪಕ್ಷವಾಗಿ ತಲುಪಿರುವ ದಯನೀಯ ಸ್ಥಿತಿಯಿಂದಾಗಿ. ಎಲ್ಲಿ ಪ್ರಾದೇಶಿಕ ನಾಯಕತ್ವ ಗಟ್ಟಿಯಾಗಿದೆಯೋ ಅಲ್ಲೆಲ್ಲ ಭಾಜಪದ ಈ ರಾಷ್ಟ್ರೀಯ ನಾಯಕತ್ವದ ನಾಗಾಲೋಟಕ್ಕೆ ತಡೆ ಬಿದ್ದಿರುವುದನ್ನು ನಾವು ಗಮನಿಸಬಹುದು. ಆದರೆ ಪಂಜಾಬ್‌ನ ಹೊರತಾಗಿ( ಕೇರಳದ್ದು ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟವಷ್ಟೆ) ಎಲ್ಲಿಯೂ ಕಾಂಗ್ರೆಸ್ ತನ್ನ ರಾಜಕೀಯ ಬಲವನ್ನು ತೋರಿಸಲಾಗಿಲ್ಲ ಅದಕ್ಕೇನು ಕಾರಣವೆಂಬುದನ್ನು ತಿಳಿಯಲು ವಿಶೇಷ ರಾಜಕೀಯ ಪರಿಣಿತಿಯೇನೂ ಬೇಕಿಲ್ಲ. ಸುಲಭ ಅಧಿಕಾರಕ್ಕೆ ಒಗ್ಗಿ ಹೋಗಿ ಸುಖ ಜೀವನದಲ್ಲಿ ದದ್ದು ಬಿದ್ದು ಹೋಗಿರುವ ನಾಯಕರಿಂದ ತುಂಬಿರುವ ಈ ಪಕ್ಷ ಮೋದಿ ನೇತೃತ್ವದ ಬಹುಮುಖ ಸವಾಲನ್ನು ಎದುರಿಸಲಾಗದೆ ತತ್ತರಿಸಿದೆ. ಭಾಜಪಕ್ಕೆ ಮೂಲಾಧಾರವಾದ ಆರೆಸೆಸ್ಸಿನಲ್ಲಿ ಹಲವು

ವರ್ಷಗಳ ಕಾಲ ಕಲಿತು ದುಡಿದು, ಮೂರು ಬಾರಿ ಗುಜರಾತ್‌ನ ಮುಖ್ಯಮಂತ್ರಿಯಾಗಿ 'ಹೆಸರು' ಮಾಡಿದ ಮೋದಿಯವರ ಮುಂದೆ, ಯಾವ ರಾಜಕೀಯ ಹೋರಾಟದ ಶಿಕ್ಷಣವಾಗಲೀ, ಅನುಭವವಾಗಲೀ ಇಲ್ಲದ ರಾಹುಲ್ ಗಾಂಧಿ ಸುಲಭದ ತುತ್ತಾಗಿದ್ದು ಸಹಜವೇ. ರಾಜಕೀಯ ಗಾಳಿ ಬೀಸುವ ದಿಕ್ಕು ಬದಲಾಗಿದೆ ಎಂಬ ಪರಿವೆಯೇ ಇಲ್ಲದೆ ಇನ್ನೂ ನೆಹರು ಕುಟುಂಬದ ಬಾಲಂಗೋಚಿಯಾಗಿಯೇ ಉಳಿಯಬಯಸಿರುವ ಕಾಂಗ್ರೆಸ್ ಇಂದು ಒಂದು ಬೆನ್ನೆಲುಬಿಲ್ಲದವರ ಪಕ್ಷವಾಗಿದೆ. ಅದು ಮೋದಿ ನಾಯಕತ್ವಕ್ಕೆ ತಾನೂ ಸಮರ್ಥ ಪರ್ಯಾಯ ಒದಗಿಸಲಾರದು. ಇತರರಿಗೂ ಅವಕಾಶ ನೀಡದು.

ಬಿಹಾರದಲ್ಲಿ ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ಕುಶಲ ಮತ್ತು ನಿಷ್ಕಳಂಕ ಆಡಳಿತಗಾರರೆಂದು ಹೆಸರಾಗಿರುವ ನಿತೀಶ್ ಕುಮಾರ್‌ರನ್ನು ಯುಪಿಎನಲ್ಲಿ ಉಸಿರುಗಟ್ಟಿಸಿ ಹೊರತಳ್ಳಿದ್ದೂ , ರಾಜಸ್ಥಾನ ಮತ್ತು ಮಧ್ಯಪ್ರದೇಶಗಳಲ್ಲಿ ಕ್ರಮವಾಗಿ ಸಚಿನ್ ಪೈಲಟ್ ಮತ್ತು ಮಾಧವರಾವ್ ಸಿಂಧ್ಯಾರಂಥ ಸಮರ್ಥ ಯುವ ನಾಯಕರನ್ನು ಮುಖ್ಯಮಂತ್ರಿಗಳನ್ನಾಗಿ ಮಾಡದಿದ್ದುದೂ ಕಾಂಗ್ರೆಸ್ಸಿನ ಈ ಕುಟುಂಬ ರಾಜಕಾರಣದ ಕಾರಣದಿಂದಲೇ. ಅತಿಯಾಗಿ ಕೆಟ್ಟ ಮೇಲೆ ಬುದ್ಧಿ ಬಂತು ಎಂಬಂತೆ ರಾಹುಲ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನೀಡಿರುವ ರಾಜೀನಾಮೆಯನ್ನು ಅದು ಒಪ್ಪಿ ನೆಹರೂ ಕುಟುಂಬದ ಆಸರೆಯಿಂದ ಈಗಲಾದರೂ ಹೊರಬಂದು ತನ್ನ ನಿಜ ರಾಜಕೀಯ ಛಾತಿಯನ್ನು ಪರೀಕ್ಷೆಗೊಡ್ಡಿ ಬೆಳೆಯಬೇಕಿದೆ. ಇದಕ್ಕಾಗಿ ಈಗ ಜಾತಿ ವೋಟು ಮತ್ತು ಹಣದ ಮೂಟೆಗಳನ್ನು ಹೊತ್ತುಕೊಂಡು ಬರುವ ಲಫಂಗರಿಗೆಲ್ಲ ಬಿಡಾರವಾಗಿ ಯುವಜನರನ್ನು ಸೆಳೆಯಬಲ್ಲ ಯಾವುದೇ ಆದರ್ಶವನ್ನು ಉಳಿಸಿಕೊಳ್ಳಲಾಗದಿರುವ ಅದು ಬುಡದಿಂದ ತುದಿವರೆಗೆ ತನ್ನನ್ನು ಪುನರ್‌ನಿರ್ಮಿಸಿಕೊಳ್ಳದಿದ್ದರೆ ಅದಕ್ಕೆ ರಾಜಕೀಯ ಮುಕ್ತಿ ಕಷ್ಟ.

ಈ ಚುನಾವಣೆಗಳು ಕಾಂಗ್ರೆಸ್ಸೂ ಸೇರಿದಂತೆ ಎಲ್ಲ ವಿಪಕ್ಷಗಳಿಗೆ ಕಲಿಸಿರುವ ಒಂದು ದೊಡ್ಡ ಪಾಠವೆಂದರೆ ಸಾಮಾಜಿಕ ನ್ಯಾಯ ಎಂಬ ಘನ ಹೆಸರಿನಲ್ಲಿ ನಡೆಸಲಾಗುತ್ತಿದ್ದ ಅಗ್ಗದ ಜಾತಿ ಮತ್ತು ಕುಟುಂಬ ರಾಜಕಾರಣ ಬಹುಕಾಲ ನಡೆಯದೆಂಬುದು. ಜಾತಿ ಮೀರಿದ ದೊಡ್ಡ ಸಂಗತಿಗಳಿವೆ ಎಂಬ ನಂಬಿಕೆಯನ್ನು ಹುಟ್ಟಿಸುವುದಾದರೆ ಜನ ತಮ್ಮ ಜಾತಿಗಳಾಚೆಗೆ ಬರಬಲ್ಲರು ಎಂಬುದನ್ನು ಜಾತಿ ರಾಜಕಾರಣದ ತಿಪ್ಪೆಗಳಂತಾಗಿರುವ ಬಿಹಾರ, ಉ.ಪ್ರ ಮತ್ತು ಕರ್ನಾಟಕಗಳಲ್ಲಿ ಈಗ ಸಾಬೀತಾಗಿದೆ. ಇದು ನಮ್ಮ ರಾಜಕಾರಣ ಹಲವು ರೀತಿಗಳಲ್ಲಿ ಸ್ವಚ್ಛವಾಗಲು ಕಾರಣವಾಗಬಹುದು.

ಅದೇನೇ ಇರಲಿ, ಮೋದಿಯವರು ಚುನಾವಣಾ ವಿಜಯದ ನಂತರದ ಭಾಷಣಗಳಲ್ಲಿ ಸ್ವಲ್ಪ ರಾಜಕೀಯ ಸಮತೋಲನ ಪಡೆದವರಂತೆ ಮಾತನಾಡುತ್ತಿದ್ದಾರೆ. ತಾವು ತಮಗೆ ಮತ ಕೊಟ್ಟವರಿಗಷ್ಟೇ ಅಲ್ಲ, ಮತ ಕೊಡದವರ ಪ್ರಧಾನಮಂತ್ರಿಯಾಗಿ ಕೆಲಸ ಮಾಡುವ 'ಹೊಸ' ಮಾತನ್ನಾಡಿದ್ದಾರೆ. ಗಾಂಧಿ ಲೋಹಿಯಾ ಅಂಬೇಡ್ಕರರ ಆದರ್ಶಗಳನ್ನು ಉಲ್ಲೇಖಿಸಿದ್ದಾರೆ. ಮಾತಿನ ಮಲ್ಲರಾದ ಮೋದಿಯವರ ಮಾತುಗಳು ಆಚರಣೆಗೆ ಬಂದಾಗಲೇ ನಿಜವೆನ್ನಿಸುವುದು. ಅಂದಹಾಗೆ ಗಾಂಧಿ ಕೊಲೆಯನ್ನು ಆರಾಧಿಸುವ ಜನರನ್ನು ತನ್ನೊಳಗಿಟ್ಟುಕೊಂಡ ಪಕ್ಷ ಗಾಂಧಿ–ಲೋಹಿಯಾರ ಆದರ್ಶಗಳ ಮಾತಾಡುವುದಾದರೂ ಹೇಗೆ? ಮೋದಿಯವರ ಮಾತಿನ ಮೋಡಿ ಅಂದರೆ ಇದೇ ಇರಬೇಕು!

**–ಸಂಪಾದಕ**

# ಚುನಾವಣಾ ಫಲಿತಾಂಶಗಳು : ನಮ್ಮ ಕೆಲ ಓದುಗರ ಅನ್ನಿಸಿಕೆಗಳು

**ಜಾ**ತೀಯತೆ ಮತ್ತು ಕೋಮುವಾದಗಳೆಂಬ ಎರಡು ಅಧರ್ಮಗಳ ನಡುವಣ ಸ್ಪರ್ಧೆಯಲ್ಲಿ ಒಂದು ಅಧರ್ಮ ಗೆದ್ದಿದೆ. ಇದು ಏಕಚಕ್ರಾಧಿಪತ್ಯಕ್ಕೆ ದಾರಿ ಮಾಡಿಕೊಡಬಹುದು. ಹಾಗಾಗಿ ಪ್ರತಿಪಕ್ಷಗಳು ತಮ್ಮ ಅಹಂಕಾರಗಳನ್ನು ತೊರೆದು ತಮ್ಮನ್ನು ತಾವು ಸ್ವಚ್ಛಗೊಳಿಸಿಕೊಳ್ಳಲು ಆರಂಭಿಸಬೇಕು.

**–ಎಚ್.ಎಸ್. ದೊರೆಸ್ವಾಮಿ,** ಸ್ವಾತಂತ್ರ್ಯ ಹೋರಾಟಗಾರರು, ಬೆಂಗಳೂರು

ಬದುಕಿಗೆ ಸಂಬಂಧಪಟ್ಟ ವಿಷಯಗಳು ನಗಣ್ಯವಾಗಿ ಭಾವನಾತ್ಮಕ ವಿಷಯಗಳ ಮೇಲೆ ಜನರ ಈ ತೀರ್ಪು ಬಂದಂತಿದೆ. ಬಿಜೆಪಿಯೇತರ ಪಕ್ಷಗಳು ಜಾತಿ–ಕುಟುಂಬ ಆಧಾರಿತ ರಾಜಕಾರಣ ತೊರೆದು ಶಿಸ್ತು, ಸಿದ್ಧಾಂತ ಆಧಾರಿತ ಪ್ರತಿಭೆ, ಅನುಭವ, ಪ್ರಾಮಾಣಿಕತೆ, ಬದ್ಧತೆಯಿಂದ ಪರ್ಯಾಯ ಕಟ್ಟುವಲ್ಲಿ ನಿಸ್ವಾರ್ಥದಿಂದ ಹೋರಾಡಲು ಆರಂಭಿಸುವವರೆಗೆ ಇದೇ ಸ್ಥಿತಿ.

**–ಬಿ.ಎಲ್ ಶಂಕರ್,** ಹಿರಿಯ ಕಾಂಗ್ರೆಸ್ ನಾಯಕರು, ಬೆಳಗೋಡು

ಜನಹಿತ, ರಾಷ್ಟ್ರಹಿತಗಳನ್ನು ದೂರ ತಳ್ಳಿ ಸ್ವಾರ್ಥ ಹಿತಗಳನ್ನು ಪಾಲಿಸಿದವರಿಗೆ ತಕ್ಕ ಪಾಠ. ಭಾರತದ ಎಲ್ಲ ರಾಜಕೀಯ ಪಕ್ಷಗಳು ಪ್ರಧಾನಿ ಹುದ್ದೆ ಇರುವುದೊಂದೇ ಎಂದು ತಿಳಿದರೆ ಮತ್ತು ಅಲ್ಲಿಗೆ ಹೋಗಲು ಎಲ್ಲರೂ ಒಟ್ಟಾಗಿ ಶ್ರಮ ಹಾಕುವುದೊಂದೇ ಮಾರ್ಗ. ಇವರಿಗೆ ಯಾವುದೇ ಆರ್ಥಿಕ ಸಮಸ್ಯೆಗಳನ್ನು ವಿವರಿಸದೆ ಕೇವಲ ಜಾತಿ–ಕೋಮು ದ್ವೇಷದ ಭಾವನಾತ್ಮಕ ವಿಷಯಗಳನ್ನೇ ಹರಡಿದ ಮೋದಿ, ಷಾ ಮಾದರಿಯಾಗಬೇಕಿಲ್ಲ.

**–ಪ್ರೊ. ಬಿ.ಎನ್.ಶ್ರೀರಾಮ,** ಹಿರಿಯ ಸಮಾಜವಾದಿ, **ಮೈಸೂರು**

ಈ ಫಲಿತಾಂಶ ನಮ್ಮೆಲ್ಲರ ನಿರೀಕ್ಷೆಗಳನ್ನೂ ತಲೆಕೆಳಗು ಮಾಡಿದೆ. ಈ ಸೋಲಿನ ಕ್ಷಣದಲ್ಲೂ ನಾವು ಧೃತಿಗೆಡದೆ ನಿರಾಶೆಯ ನಡುವೆಯೇ ನಮ್ಮ ನಮ್ಮ ಕರ್ತವ್ಯಗಳಿಗೆ ಬದ್ಧರಾಗಿರಬೇಕು; ಎಷ್ಟು ಮಾತ್ರಕ್ಕೂ 'ಗೆದ್ದವರ ನ್ಯಾಯಕ್ಕೆ' ಜೈ ಎನ್ನದೆ ಹಿಂಸೆಗೆ ಶರಣಾಗದೆ ಆಳುವವರ ಅಕ್ರಮಗಳನ್ನು ಪ್ರತಿಭಟಿಸಬೇಕು.

**– ಜಿ. ರಾಜಶೇಖರ,** ರಾಜಕೀಯ ಚಿಂತಕರು, ಉಡುಪಿ

ಪ್ರಗತಿ, ಧರ್ಮ, ರಾಷ್ಟ್ರೀಯತೆ ಮತ್ತು ಸಾಮಾಜಿಕ ನ್ಯಾಯ ಎಂಬ ಪರಿಕಲ್ಪನೆಗಳನ್ನು ಕುರಿತು ಜನರ ಆಲೋಚನೆಗಳ ರೀತಿಯಲ್ಲೇ ಒಂದು ದೊಡ್ಡ ಪಲ್ಲಟವಾಗಿರುವುದನ್ನು ಮತ್ತು ಅಲ್ಪಸಂಖ್ಯಾತರ ಮತಗಳಿಲ್ಲದೆ ರಾಷ್ಟ್ರಮಟ್ಟದಲ್ಲಿ ಚುನಾವಣೆಗಳನ್ನು ಗೆಲ್ಲಬಹುದೆಂಬುದನ್ನು ಈ ಚುನಾವಣಾ ಫಲಿತಾಂಶಗಳು ಸೂಚಿಸುತ್ತಿವೆ. ಹಾಗಾಗಿ ಈ ಸಂಗತಿಗಳ ಬಗ್ಗೆ ಸಂಬಂಧಪಟ್ಟವರೆಲ್ಲರೂ ಆಳವಾಗಿ ಯೋಚನೆ ಮಾಡಿ ಕಾರ್ಯಪ್ರವೃತ್ತರಾಗುವ ಕಾಲವೀಗ ಬಂದಿದೆ.

**–ಕೆ. ಸತ್ಯನಾರಾಯಣ,** ನಿವೃತ್ತ ವರಮಾನ ತೆರಿಗೆ ಆಯುಕ್ತರು, ಬೆಂಗಳೂರು

ಮಾತಿನಲ್ಲಿ ಮೈಮರೆಸುವವರು, ಸಣ್ಣಮಕ್ಕಳಿಗಿಂತ ಕಡೆಯಾಗಿ ಅಪ್ರಬುದ್ಧ ಕಚ್ಚಾಟದಲ್ಲಿ ಮೈ ಮರೆಯುವವರು ಇವರ ನಡುವೆ ಏನಾಗುತ್ತದೆಯೋ ಅದೇ ಆಗಿದೆ... ದೇವ ರಕ್ಷಿಸು ನಮ್ಮನನವರತ.

**–ವೈದೇಹಿ,** ಗೃಹಿಣಿ ಮತ್ತು ಹಿರಿಯ ಲೇಖಕಿ, ಮಣಿಪಾಲ

ಭಾಜಪದ ವಿರುದ್ಧ ಮತ ಹಾಕಿದವರೆಲ್ಲ ಈ ದಿನದಿಂದಲೇ ಪ್ರತಿಪಕ್ಷಗಳ ಪಾತ್ರ ನಿರ್ವಹಿಸುತ್ತ ಲಭ್ಯ ಮಾಧ್ಯಮಗಳ ಮೂಲಕ ದನಿ ಎತ್ತುತ್ತಿರಬೇಕು.

**–ನಾಗೇಶ ಹೆಗಡೆ,** ವಿಜ್ಞಾನ ಬರಹಗಾರರು, ಬೆಂಗಳೂರು

ಕಾಂಗ್ರೆಸ್ ತನ್ನನ್ನು ತಾನು ಪೂರ್ಣ ಮುರಿದು ಕಟ್ಟಿ ಕೊಳ್ಳದ ಹೊರತು ಅದಕ್ಕೆ ಭವಿಷ್ಯವಿಲ್ಲವೆಂಬುದನ್ನು, ರಾಜಕೀಯ ಉದ್ದೇಶ ಪ್ರಾಮಾಣಿಕವಾಗಿದ್ದು ನಡೆನುಡಿಯಲ್ಲಿ ಸ್ವಲ್ಪ ವ್ಯತ್ಯಾಸ ಆದರೂ ಜನ ಕ್ಷಮಿಸಬಲ್ಲರು ಎಂಬುದನ್ನು, ಯುವ ಜನಾಂಗದ ಆಶೋತ್ತರಗಳಿಗೆ ಸ್ಪಂದಿಸದ ಹಳೆ ತಲೆಮಾರಿನ ಹಳೆ ವರಸೆಯ ರಾಜಕಾರಣಕ್ಕೆ ಇನ್ನು ಮುಂದೆ ಆಸ್ಪದ ಇಲ್ಲ ಎಂಬುದನ್ನು ಈ ಚುನಾವಣೆಗಳು. ತೋರಿಸಿ ಕೊಟ್ಟಿವೆ.

**–ವೆಂಕಟೇಶ ಮಾಚಕನೂರ,** ನಿವೃತ್ತ ಶಿಕ್ಷಣ ಆಯುಕ್ತರು, ಧಾರವಾಡ

ವಿದ್ಯಾವಂತ ಮಧ್ಯಮ ವರ್ಗ ತನ್ನ ಇಂದಿನ ಮುಖ್ಯ ಕಾಳಜಿಗಳಾದ ಆರ್ಥಿಕ ಭದ್ರತೆ ಮತ್ತು ದೇಶ ರಕ್ಷಣೆಗಳ ಭರವಸೆಯನ್ನು ಈ ಹಿಂದಿನ ಪಕ್ಷಗಳ ಮತ್ತು ಅವುಗಳ ನಾಯಕರಿಗೆ ಹೋಲಿಸಿದರೆ ದೊಡ್ಡ ಪ್ರಮಾಣದಲ್ಲೇನೂ ಕಳಂಕಿತರಾಗದ ಮೋದಿಯವರ ಭಾಷಣ ವೈಖರಿಯಲ್ಲಿ ಕಂಡಿದೆ. ಪ್ರಸಕ್ತ ತಲೆಮಾರಿನ ಆಶೋತ್ತರಗಳನ್ನು ಅರಿತ ಮತ್ತು ಅವರಲ್ಲಿ ಮೌಲ್ಯಗಳನ್ನು ಬಿತ್ತಬಲ್ಲ ಸ್ವಚ್ಛ ಚಾರಿತ್ರ್ಯದ ರಾಜಕಾರಣಿಗಳು ಮಾತ್ರ ಮೋದಿಯವರ ರಾಜಕಾರಣವನ್ನು ಎದುರಿಸಬಲ್ಲರು.

**–ರವಿಕೃಷ್ಣಾರೆಡ್ಡಿ,** ಲಂಚಮುಕ್ತ ಕರ್ನಾಟಕ ನಿರ್ಮಾಣ ವೇದಿಕೆ, ಬೆಂಗಳೂರು

ಮೋದಿಯವರು ಪ್ರತಿಪಾದಿಸುತ್ತಿದ್ದ ಹಾಗೆ ಕೇಂದ್ರ ಮತ್ತು ರಾಜ್ಯ ಶಾಸನಸಭೆಗಳಿಗೆ ಒಟ್ಟಿಗೇ ಚುನಾವಣೆಗಳು ನಡೆದಿದ್ದರೆ ಅವರಿಗೆ ಈ ಮಟ್ಟದ ಜಯ ಲಭಿಸುತ್ತಿರಲಿಲ್ಲ. ಪ್ರತಿಪಕ್ಷಗಳು ಜನರ ಸಂಕಷ್ಟಗಳಿಗೆ ದನಿ ಕೊಡುವಂತಹ ಹೋರಾಟಗಳನ್ನು ಮಾಡಬಲ್ಲರಾದರೆ ಮಾತ್ರ ಅವರ ಕಣ್ಣ ಮುಂದಲ ಕತ್ತಲು ಹರಿಯತೊಡಗೀತು.

**–ಗಿರೀಶ್ ವಿ. ವಾಘ್,** ಹಿರಿಯ ನಿವೃತ್ತ ಪತ್ರಕರ್ತರು, ಬೆಂಗಳೂರು

ಮೋದಿ ಏನು ಕಡಿದು ಕಟ್ಟೆ ಹಾಕಿದರೆಂದು ಈ ಪಾಟಿ ಅವರಿಗೆ ಈ ವೋಟು? ಮೋದಿಯ ಬರೀ ಮೋಡಿ ಇದು. ಅವರನ್ನೆದುರಿಸಲು ಈಗಲಾದರೂ ಎಲ್ಲ ಜನಹೋರಾಟದ ವೇದಿಕೆಗಳು ತಮ್ಮೆಲ್ಲ ಅಹಂಕಾರಗಳನ್ನು ತೊರೆದು ಒಟ್ಟಾಗುವ ಗಂಭೀರ ಪ್ರಯತ್ನ ಮಾಡಬೇಕಿದೆ.

**–ಅನಸೂಯಮ್ಮ,** ರೈತ ನಾಯಕರು, ಅರಳಾಳುಸಂದ್ರ

ವಿರೋಧ ಪಕ್ಷಗಳ ಅನೈಕ್ಯತೆ ಮತ್ತು ಸಮಯಸಾಧಕತನ ಹಾಗೂ ಪ್ರಾದೇಶಿಕ ಪಕ್ಷಗಳ ಅತಿಯಾಸೆ ಮೋದಿಯವರಿಗೆ ವರವಾಯ್ತು! ಈ ಪಕ್ಷಗಳು ಈ ದೌರ್ಬಲ್ಯಗಳನ್ನು ಮೀರಿ ಮೋದಿಯವರನ್ನು ಮಾತಿನಲ್ಲಿಯೇ ಕಟ್ಟಿಹಾಕಬಲ್ಲ ಮಾತಿನ ಮಾಟಗಾರನನ್ನು ಕಂಡುಕೊಳ್ಳುವವರೆಗೆ ಅವಕ್ಕೆ ಜಯವಿಲ್ಲವೆಂದು ಕಾಣುತ್ತದೆ.

**–ಪ್ರೊ. ಎಂ.ಜಿ. ಚಂದ್ರಶೇಖರಯ್ಯ,** ನಿವೃತ್ತ ಪ್ರಾಧ್ಯಾಪಕರು, ದೊಡ್ಡಬಳ್ಳಾಪುರ

ಸಾರಾಂಶದಲ್ಲಿ ಹೇಳುವುದಾದರೆ, ಈ ಚುನಾವಣೆ ಗಾಂಧಿ ಇಲ್ಲದ ಭಾರತಕ್ಕೆ ಅಡಿಪಾಯ ಹಾಕಿದೆ ಎನ್ನಬಹುದು.

**–ಅಜ್ಜಪ್ಪ ಬಿರಡಿ,** ರೈತರು, ಗೋಕಾಕ

ಯುವ ಲಹರಿ

# ಸ್ಥಳೀಯ ಸರ್ಕಾರಗಳೂ; ದಲಿತರ ದಲಿತ ರಾಜಕಾರಣವೂ

–ಗೋವಿಂದರಾಜು ಎಂ ಕಲ್ಲೂರು



ಗ್ರಾಮಗಳಲ್ಲಿ ದಲಿತ ರಾಜಕಾರಣವೆಂದರೆ ದಲಿತನೊಬ್ಬ ತನ್ನ ಸಮುದಾಯದ ಜನರಿಂದ ಆಯ್ಕೆಯಾಗಿ ಅವರನ್ನೇ ಅವಕಾಶದಿಂದ ವಂಚಿಸುವುದೇ? ಸಮಾಜದ ಮುಖ್ಯವಾಹಿನಿಗೆ ತಾನು ಮತ್ತು ತನ್ನ ಮನೆಯವರನ್ನು ಮಾತ್ರ ತಂದು ಸಮುದಾಯದ ಉಳಿದ ಜನರನ್ನು ನೇಪತ್ಯಕ್ಕೆ ಸರಿಸುವುದೇ? ಪಂಚಾಯ್ತಿಯ ಎಸ್.ಸಿ/ಎಸ್.ಟಿ ಕೋಟಾದಡಿ ಇರುವ ಎಲ್ಲ ಸೌಲಭ್ಯಗಳಲ್ಲಿ ಶೇ. ೯೦ರಷ್ಟನ್ನು ತನ್ನ ಮನೆಗೆ ಮಾತ್ರ ಪಡೆದು, ಮನೆಯವರನ್ನು ಪಂಚಾಯ್ತಿಯ ಕೆಲಸಗಳಿಗೆ ಸೇರಿಸುವುದೇ? ಇತ್ಯಾದಿ ಪ್ರಶ್ನೆಗಳನ್ನು ಅರಿಯುವ ಸಲುವಾಗಿ ಕೆಲವು ನಿದರ್ಶನಗಳನ್ನು ನಿಮ್ಮ ಮುಂದಿಡುತ್ತೇನೆ.

**ಘಟನೆ–೧** ಇತ್ತೀಚಿನ ಸುತ್ತಾಟದಲ್ಲಿ ಪಾವಗಡ ತಾಲೋಕಿನ ಬೂದಿಬೆಟ್ಟ ಎಂಬ ಹಳ್ಳಿಗೆ ಹೋಗಿದ್ದೆ. ಪಾವಗಡ ಲೋಕಸಭಾ ಮತ್ತು ವಿಧಾನ ಸಭೆಗಳಲ್ಲಿ ದಲಿತ ಮೀಸಲು ಕ್ಷೇತ್ರ. ಈ ಬೂದಿಬೆಟ್ಟ ಗ್ರಾಮದ ಸದ್ಯದ ಅಧ್ಯಕ್ಷರೂ ಕೂಡಾ ದಲಿತರೇ, ಇಂಥಾ ಹಿನ್ನೆಲೆಯ ಗ್ರಾಮದಲ್ಲಿ ಈ ವರ್ಷವೇ ಪ್ರಥಮವಾಗಿ ಅಂಬೇಡ್ಕರ್ ಜಯಂತಿ ಆಚರಿಸಲಾಗಿದೆ. ಇಷ್ಟು ವರ್ಷಗಳಿಂದ ಹೋಟೆಲ್, ಕಟಿಂಗ್ ಶಾಪ್‌ನಿಂದ ಹೊರಗುಳಿದಿದ್ದವರು ಸಂಘಟನೆ ಆಗುವುದು ಇತರರಲ್ಲಿ ತಲ್ಲಣವನ್ನು ಉಂಟುಮಾಡಿದೆ. ಯಾವ್ಯಾವುದೋ ಕಾರಣಗಳಿಂದ ಅವರಿಗೂ–ಇವರಿಗೂ ಮಾತು–ಕೈಗಳು ಮಿಲಾಯಿಸಿವೆ. ಬಹುಸಂಖ್ಯಾತರಾದ ಸವರ್ಣೀಯರು ದಲಿತರನ್ನು ಸದೆಬಡಿದಿದ್ದಾರೆ. ಈಗ ಇಡೀ ಊರೇ ಒಂದು ದಲಿತರೇ ಒಂದು. ದಲಿತ ಗ್ರಾ.ಪಂ ಅಧ್ಯಕ್ಷರದೇ ಅಸಹಾಯಕ ಸ್ಥಿತಿ. ಅಧ್ಯಕ್ಷರಾದರೂ ಊರಿನಲ್ಲಿ ಕಟಿಂಗ್ ಆಗಲಿ ದೇವಾಲಯಗಳ ಮತ್ತು ಹೋಟೆಲ್‌ಗಳ ಪ್ರವೇಶವಾಗಲೀ ಸಿಕ್ಕಿಲ್ಲ.

**ಘಟನೆ–೨:** ಇದು ನನ್ನೂರಿನ ಕಥೆ. ಪ್ರತಿ ವರ್ಷ ಗ್ರಾಮ ಪಂಚಾಯ್ತಿಯು ತನ್ನ ಹಣಕಾಸಿನಲ್ಲಿ ಶೇ೨೫%ರಷ್ಟು ಹಣವನ್ನು ಎಸ್.ಟಿ/ಎಸ್.ಟಿ ಮೀಸಲು ಅನುದಾನವಾಗಿ ಎತ್ತಿಡುತ್ತವೆ. ಇದನ್ನು ದಲಿತರ ಅಭಿವೃದ್ಧಿ ಕಾರ್ಯಗಳಿಗೆ ಬಳಸುತ್ತವೆ. ಈ ಹಣದಲ್ಲಿ ಸ್ವಲ್ಪ ಹಣವನ್ನು ಉನ್ನತ ವ್ಯಾಸಂಗ ಪಡೆಯುತ್ತಿರುವ ತಳ ಸಮುದಾಯಗಳ ವಿದ್ಯಾರ್ಥಿಗಳಿಗೂ ಪ್ರೋತ್ಸಾಹಕವಾಗಿ ನೀಡುತ್ತವೆ.

ಎರಡು ವರ್ಷಗಳ ಹಿಂದೆ ಈ ಮೀಸಲು ಅನುದಾನವನ್ನು ನಮ್ಮೂರ ಪಂಚಾಯ್ತಿಯು ಬಳಸಲಿಲ್ಲ. ನಾವೆಲ್ಲ ಹುಡುಗರು ಸೇರಿ ಪ್ರತಿಭಟಿಸಿದೆವು. ಸುದ್ದಿಯಾಯಿತು ಅದಾದ ವಾರದೊಳಗೆ ಅನುದಾನವೂ ಬಳಕೆಯಾಗಿ ವಿದ್ಯಾಥಿಗಳಿಗೆ ಪ್ರೋತ್ಸಾಹಕ ಹಣವೂ ಬಂತು. ಆದರೆ ಆ ಪ್ರೋತ್ಸಾಹಕ ಹಣದ ಪಟ್ಟಿಯಿಂದ ಹೋರಾಟ ರೂಪಿಸಿದ್ದ ನನ್ನ ಹೆಸರನ್ನು ಕೈಬಿಡಲಾಗಿತ್ತು. ನಮ್ಮ ಬ್ಲಾಕಿನಲ್ಲಿ ನಾವೇ ಆರಿಸಿದ್ದ ದಲಿತ ಸದಸ್ಯರನ್ನು ಕಾರಣ ಕೇಳಿದೆ. "ಎರಡನೇ ಸುತ್ತಿನಲ್ಲಿ ಕೊಡುವೆ ಅಪ್ಪು" ಎಂದರು. ಅವರ ಮನೆಯ ನಾಲ್ಕು ಮಕ್ಕಳ ಪ್ರೋತ್ಸಾಹಕ ಹಣವನ್ನು ಇಡುಗಂಟಾಗಿ ಪಡೆದಿದ್ದ ಆ ಸದಸ್ಯರು ನನಗೆ ಹಣ ಬರದಂತೆ ಎಚ್ಚರ ವಹಿಸಿದ್ದರು. ಈ ಕುರಿತು ನಾನು ಮತ್ತೆ ಮತ್ತೆ ಕೇಳಿದಾಗೆಲ್ಲಾ ಅವರು ಏನೇನೋ ಕಥೆ ಹೇಳುತ್ತಿದ್ದರು. ಅವರಿಗೆ ಮುಜುಗರ ತಪ್ಪಿಸಲು ನಾನೀಗ ಆ ಹಣವನ್ನು ಕೇಳೋದು ಬಿಟ್ಟಿದ್ದೇನೆ.

**ಘಟನೆ ೩:** ಹತ್ತಿರದ ಗೆಳೆಯನೊಬ್ಬನಿಗೆ ಮನೆ ಕಟ್ಟಿಸಲು ಸರ್ಕಾರದಿಂದ ನೀಡಲಾಗುವ ಲೋನ್ ತಾಂತ್ರಿಕ ಕಾರಣದಿಂದ ಕೈ ತಪ್ಪಿತಂತೆ. ಅದೇ ವರ್ಷ ಆ ಊರಿನ ಗ್ರಾಮ ಪಂಚಾಯ್ತಿಯ ದಲಿತ ಸದಸ್ಯರೊಬ್ಬರು ಮನೆ ಕಟ್ಟಿಸುವಾಗ ಹಿಂದೊಂದು ಮುಂದೊಂದು ಬಾಗಿಲು ಇಟ್ಟು ಇಬ್ಬರ ಹೆಸರಿಗೆ ಎರಡು ಲೋನ್ ಪಡೆದರಂತೆ. ಅವರು ಚುನಾವಣೆಗೆ ನಿಲ್ಲುವ ಸಮಯದಲ್ಲಿ ದಲಿತರ ಅಭಿವೃದ್ಧಿಯೇ ನನ್ನ ಗುರಿ ಎಂದು ಪ್ರಮಾಣವನ್ನೂ ಮಾಡಿದ್ದರಂತೆ.

**ಘಟನೆ ೪:** ಇದೊಂದು ಕನಸು, ರಾಯವಾರದ ಗೆಳೆಯ ಅವಿರೋಧವಾಗಿ ಆಯ್ಕೆಯಾಗಿ ಗ್ರಾಮ ಪಂಚಾಯ್ತಿ ಸದಸ್ಯನಾಗಿದ್ದಾನೆ. ಅಲ್ಲಿನ ದಲಿತರಿಗೆ ಆತ ವಿಧವಾ ವೇತನ, ಅಂಗವಿಕಲರ ವೇತನ, ರೇಶನ್ ಕಾರ್ಡ್, ಜಾತಿ ಆದಾಯ

**ದೀರ್ಘ ಕಾಲದಿಂದಲೂ ಒಂದು ರಾಜಕೀಯ ಪಕ್ಷದ ನೆರವು ಪಡೆದು ಬದುಕು ಕಟ್ಟಿಕೊಂಡ ದಲಿತ ರಾಜಕಾರಣಿಗಳು ಈ ಮೈತ್ರಿ ಚುನಾವಣೆಯಲ್ಲಿ ಏನೂ ಗಿಟ್ಟಲಿಲ್ಲವೆಂದೂ ತಮಗೆ ಹಣ ನೀಡದ ಪಕ್ಷ ಸೋಲಬೇಕೆಂದೂ ತಮ್ಮ ಸೈದ್ಧಾಂತಿಕ ವಿರೋಧಿ ಪಕ್ಷಕ್ಕೆ ಮತ ಹಾಕುವಂತೆ ದಲಿತರಲ್ಲಿ ಕೈ ಮುಗಿದು ಬೇಡಿದ್ದಾರೆ. ದಲಿತರ ಅಸ್ಮಿತೆಯನ್ನು ಅಡವಿಟ್ಟು ಅವಕಾಶವಾದಿ ರಾಜಕಾರಣ ನಡೆಸುವವರ ಬಗ್ಗೆ ಅದೆಷ್ಟು ಜಾಗೃತಿವಹಿಸಬೇಕು, ಅದೆಷ್ಟು ಯೋಚಿಸಬೇಕು!**

ಪ್ರಮಾಣ ಪತ್ರಗಳನ್ನು ಮಾಡಿಸಿಕೊಡುತ್ತಾನೆ. ತಿಳುವಳಿಕೆಯ ಕೊರತೆ ಇರುವ ಫಲಾನುಭವಿಗಳಿಂದ ಮುಲಾಜಿಲ್ಲದೆ ಹತ್ತು ರೂಪಾಯಿಯ ಕೆಲಸಕ್ಕೆ ಸಾವಿರ ರೂಗಳನ್ನು ವಸೂಲಿ ಮಾಡುತ್ತಿದ್ದಾನೆ. ಕೇಳಿದವರಿಗೆ ನಾನು ಓಡಾಡಿ ಮಾಡಿಸುತ್ತೇನೆ. ತಿನ್ನುತ್ತೇನೆ ತಪ್ಪೇನು ಎಂದು ಜಗಳಕ್ಕೆ ಇಳಿಯುತ್ತಾನೆ. ಈ ಕನಸು ನನ್ನ ನಿದ್ದೆಯನ್ನು ಕದ್ದಿತ್ತು. ಅದು ಬೆಳಗಿನ ಜಾವದ ಕನಸು. ನನ್ನ ಗೆಳೆಯ ಅಂತಹವನಲ್ಲ. ಅದು ಕನಸೇ ಇರಬಹುದು ಆದರೆ ಆ ಘಟನೆ ಬರೀ ಕನಸಲ್ಲ. ಇದು ಅನೇಕ ಊರುಗಳಲ್ಲಿ ನಿಜವಾಗಿಯೂ ಘಟಿಸುತ್ತಿದೆ. ಇದನ್ನು ತಪ್ಪಿಸುವ ಮತ್ತು ಅವಕಾಶಗಳನ್ನು ಹಂಚುವುದನ್ನು ಈ ರಾಜಕಾರಣಕ್ಕೆ ಕಲಿಸುವ ಬಗೆ ಹೇಗೆ.

ರಾಜ್ಯ ರಾಷ್ಟ್ರಮಟ್ಟದ ದಲಿತ ನಾಯಕರು ದಲಿತರ ಸಂಕಟಗಳನ್ನು ಕೇಳುವುದು ಅವರ ಧರ್ಮವೇ ಆಗಿದ್ದರೂ ಅವರ ವ್ಯಾಪ್ತಿಯ ಎಲ್ಲ ಸಮುದಾಯಗಳನ್ನೂ ಒಳಗೊಳ್ಳಬೇಕಾದ, ನೈತಿಕ ರಾಜಕಾರಣವೊಂದನ್ನು ಚಲಾವಣೆಗೆ ತರಬೇಕಾದ ಜವಾಬ್ದಾರಿಯೊಂದು ಅವರ ಬೆನ್ನಿಗಿರುತ್ತದೆ. ಆದರೆ ಗ್ರಾಮ ಮಟ್ಟದ ಸರ್ಕಾರಗಳು ಇದಕ್ಕಿಂತ ಭಿನ್ನ. ಅಕ್ಕ–ಪಕ್ಕದ ಮನೆಯ ಜನರೇ ತಮ್ಮಲ್ಲೇ ಒಬ್ಬ ಪ್ರತಿನಿಧಿಯನ್ನು ಆರಿಸಿರುತ್ತಾರೆ. ನಮ್ಮವರೊಬ್ಬರು ನಮ್ಮ ಕಷ್ಟ ಕೇಳುತ್ತಾರೆಂದು ಭಾವಿಸಿರುತ್ತಾರೆ. ಆದರೆ ಅಧಿಕಾರ ಅವರನ್ನು ಕುಬ್ಜವಾಗಿಸುತ್ತದೆ. ಹೃದಯದ ಪ್ರೀತಿಯನ್ನು ಕಡಿಮೆ ಮಾಡುತ್ತದೆ. ದಲಿತ ಕೋಟಾದಡಿ ಸಿಗುವ ಪಂಚಾಯ್ತಿಯ ಎಲ್ಲಾ ಸವಲತ್ತುಗಳನ್ನೂ ತನ್ನ ಮನೆಗೆ, ಮಕ್ಕಳಿಗೆಂದು ಬಾಚಿಕೊಳ್ಳಲು ಹಾತೊರೆಯುವಂತೆ ಮಾಡುತ್ತದೆ. ತಮಗಿಂತ ಇತರರು ಕೆಳಗಿರಬೇಕೆಂಬ ಹೊಟ್ಟೆ ಕಿಚ್ಚಿನ ರಾಜಕಾರಣಕ್ಕೆ ಅವರನ್ನು ತಯಾರು ಮಾಡುತ್ತದೆ. ಇದನ್ನು ಬದಲಾಯಿಸಲು ನೀಡಬೇಕಾದ ತರಬೇತಿ ಯಾವುದು?

ದೀರ್ಘ ಕಾಲದಿಂದಲೂ ಒಂದು ರಾಜಕೀಯ ಪಕ್ಷದ ನೆರವು ಪಡೆದು ಬದುಕು ಕಟ್ಟಿಕೊಂಡ ದಲಿತ ರಾಜಕಾರಣಿಗಳು ಈ ಮೈತ್ರಿ ಚುನಾವಣೆಯಲ್ಲಿ ಏನೂ ಗಿಟ್ಟಲಿಲ್ಲವೆಂದೂ ತಮಗೆ ಹಣ ನೀಡದ ಪಕ್ಷ ಸೋಲಬೇಕೆಂದೂ ತಮ್ಮ ಸೈದ್ಧಾಂತಿಕ ವಿರೋಧಿ ಪಕ್ಷಕ್ಕೆ ಮತ ಹಾಕುವಂತೆ ದಲಿತರಲ್ಲಿ ಕೈ ಮುಗಿದು ಬೇಡಿದ್ದಾರೆ. ದಲಿತರ ಅಸ್ಮಿತೆಯನ್ನು ಅಡವಿಟ್ಟು ಅವಕಾಶವಾದಿ ರಾಜಕಾರಣ ನಡೆಸುವವರ ಬಗ್ಗೆ ಅದೆಷ್ಟು ಜಾಗೃತಿವಹಿಸಬೇಕು, ಅದೆಷ್ಟು ಯೋಚಿಸಬೇಕು!

ಇಂದಿಗೂ ಎಷ್ಟೋ ಊರುಗಳಲ್ಲಿ ದಲಿತ ರಾಜಕಾರಣಿಗಳು ಸರ್ಕಾರದ ಸವಲತ್ತುಗಳಿಗಾಗಿ ನಕಲಿ ಬೀಡಿ ಕಾರ್ಮಿಕರೂ, ಕಟ್ಟಡ ಕಾರ್ಮಿಕರೂ ಆಗಿರುತ್ತಾರೆ. ಅದ್ಯಾವುದೂ ಅವರ ಕೆಲಸವೇ ಅಲ್ಲ. ಸೋಲಾರ್ ದೀಪಗಳು ನೀರಿನ ನಲ್ಲಿಗಳೂ ಸಹ ಅಧಿಕಾರ ಹಿಡಿದವರ ಮನೆಗೆ ಹೊಂದಿಕೊಂಡಂತೆಯೇ ಇರುವಂತೆ ನೋಡಿಕೊಳ್ಳುತ್ತಾರೆ. ಇವೆಲ್ಲವೂ ಕಂಡಿರುವ ನಿದರ್ಶನಗಳು ಕೇವಲ ಆಪಾದನೆಗಳಲ್ಲ.

ಗ್ರಾಮಗಳಲ್ಲಿ ದಲಿತ ರಾಜಕಾರಣವೆಂದರೇನು? ಇದರ ಕ್ರಿಯಾಚರಣೆ ಹೇಗೆ> ಇದು ಸಾಧಿಸಬೇಕಾದ ಗುರಿ ಯಾವುದು? ಇತ್ಯಾದಿ ಚಿಂತನೆಗಳು ಮುನ್ನೆಲೆಗೆ ಬರುವ ಸಮಯವಾದರೂ ಯಾವುದು? ಈ ನಿಟ್ಟಿನಲ್ಲಿ ಸ್ಥಳೀಯ ಸರ್ಕಾರದ ಚುನಾವಣಾ ಸಮಯದಲ್ಲಿ ದಲಿತರು ತಮ್ಮದೇ ಮೀಸಲು ಪ್ರತಿನಿಧಿಯನ್ನು ಆರಿಸುವಾಗ ಹೆಚ್ಚು ಆಲೋಚಿಸಬೇಕು ಎನಿಸುತ್ತದೆ.



**(ಲೇಖಕ ಗೋವಿಂದರಾಜು ಎಂ.ಕೆ. ಅವರು ತುಮಕೂರು ವಿಶ್ವವಿದ್ಯಾನಿಲಯದ ಡಿವಿಜಿ ಕನ್ನಡ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸಂಶೋಧನಾ ಸಹಾಯಕರಾಗಿದ್ದಾರೆ)**

ಜೂನ್ ೫: ವಿಶ್ವ ಪರಿಸರ ದಿನ

# 'ಈಗಲ್ಲದಿದ್ದರೆ ಇನ್ನೆಂದೂ ಇಲ್ಲ!'

## ಹವಾಮಾನ ಬದಲಾವಣೆ ಕುರಿತ ಒಂದು ಎಚ್ಚರಿಕೆ!!

ಇಂಗ್ಲಿಷ್ ಮೂಲ: **ಸಾಹಿಲ್ ವರ್ಮಾ**
ಕನ್ನಡಕ್ಕೆ: **ರೇಖಾಂಬ ಟಿ.ಎಲ್.**



**ಜಗತ್ತು ಮತ್ತೊಂದು ಪರಿಸರ ದಿನದ ಆಚರಣೆಗೆ ಸಜ್ಜಾಗುತ್ತಿದೆ. ಆದರೆ ಇದು ಇಂದಿನ ಸ್ಪರ್ಧಾತ್ಮಕ ವ್ಯಾಪಾರಿ ದಿನಗಳಲ್ಲಿ ತಾಯಿ ದಿನ, ನಗುವಿನ ದಿನ, ವಲೆಂಟೀನ್ ದಿನ ಇತ್ಯಾದಿ ದಿನಗಳ ಆಚರಣೆಗಳಂತೆಯೇ, ಮನುಷ್ಯನ ವರ್ತನೆಯಲ್ಲಿ ಏನೂ ಬದಲಾವಣೆ ತರದೆ ಬಂದು ಹೋಗುವ ಔಪಚಾರಿಕ ಆಚರಣೆಗಳ ದಿನವೇ ಆಗತೊಡಗಿದೆ. ಪರಿಸರ ನಾಶ ಎಂಬುದೀಗ ಮಾಧ್ಯಮಗಳಲ್ಲಿ ಮಾರಾಟವಾಗುವ ಸುದ್ದಿ ಮಾತ್ರವಾಗಿ ಅದು ಯಾರಲ್ಲೂ ಯಾವ ತೀವ್ರ ಭಾವನೆಯನ್ನೂ ಹುಟ್ಟಿಸಗಾಗಿದೆ. ಅದು ಇಂತಹ ತೀವ್ರ ಭಾವನೆಯನ್ನು ಹುಟ್ಟಿಸಿದ್ದೇ ಆಗಿದ್ದಲ್ಲಿ ನಮ್ಮ ಊರುಗಳ ಅಂಗಡಿಗಳು ದಿನ ದಿನವೂ ಹೊಸ ಹೊಸ ಗ್ರಾಹಕ ಬಳಕೆಯ ವಸ್ತುಗಳಿಂದ ತುಂಬಿ ತುಳುಕುತ್ತಾ ಜನರಿಂದ ಕಿಕ್ಕಿರಿದಿರುತ್ತಿರಲಿಲ್ಲ. ನಮ್ಮ ಊರುಗಳಲ್ಲಿ ಝುಗಝುಗಿಸುವ ಹವಾ ನಿಯಂತ್ರಿತ ಹೊಸ ಮಾಲ್‌ಗಳು ಬಂದು ನಮ್ಮನ್ನು ಆಹ್ವಾನಿಸುತ್ತಿರಲಿಲ್ಲ. ದಿನ ನಿತ್ಯ ಹೊಸ ಹೊಸ ಭವ್ಯ ಕಾರುಗಳು ನಮ್ಮ ರಸ್ತೆಗಳನ್ನು ತುಂಬುತ್ತಿರಲಿಲ್ಲ, ದಿನ ನಿತ್ಯ ನಮ್ಮ ರಸ್ತೆಗಳ ಅಗಲೀಕರಣಗಳ ನೆಪದಲ್ಲಿ ಸಾವಿರಾರು ಮರಗಳು ಕತ್ತರಿಸಿ ಬೀಳುತ್ತಿರಲಿಲ್ಲ. ನಮ್ಮ ರಾಜಕಾರಣಿಗಳು ತಮ್ಮ ಸರ್ಕಾರಗಳ ವಾರ್ಷಿಕ ಅಭಿವೃದ್ಧಿ ದರ ದಾಪುಗಾಲಿಟ್ಟು ಮುನ್ನಡೆಯುತ್ತಿದೆ ಎಂದು ಜನರಿಗೆ ಸಾಬೀತು ಮಾಡಲು ಇನ್ನಿಲ್ಲದ ಕಸರತ್ತುಗಳನ್ನು ಮಾಡುತ್ತಿರಲಿಲ್ಲ.**

**ಈ ಬೇಸಿಗೆಯ ಕಡುಬಿಸಲಾಗಲೀ, ನದಿ, ಕೆರೆ ಬಾವಿಗಳು ಬತ್ತಿ, ಅಂತರ್ಜಲವೆಲ್ಲ ಇಂಗಿ ಹೋಗಿ ಸೃಷ್ಟಿಯಾಗಿರುವ ನೀರಿನ ಹಾಹಾಕಾರವಾಗಲೀ, ಬೆಳೆ ನಾಶಗಳಾಗಲೀ ಇವನ್ನೆಲ್ಲ ಬಂದು ಹೋಗುವ ಅನಾಹುತಗಳೆಂಬಂತೆ, ಸರ್ಕಾರ ಹಣದ ಮಂಜೂರುಗಳ ಮೂಲಕ ಪರಿಹರಿಸಬಹುದಾದ ಆಕಸ್ಮಿಕಗಳೆಂಬಂತೆ ಭಾವಿಸಿ ನಮ್ಮ ಬದುಕಿನ ಗತಿ ಮತ್ತು ಶೈಲಿಯನ್ನು ಬದಲಾಯಿಸಿಕೊಳ್ಳುವ ಅಗತ್ಯವೇ ಇಲ್ಲದಂತೆ ನಾವು ನಡೆದಿರುವುದೆತ್ತ? ನಮ್ಮ ಸರ್ಕಾರಗಳು ವರ್ತಿಸುತ್ತಿರುವ ರೀತಿ ಎಷ್ಟು ಬೇಜವಾಬ್ದಾರಿತನದಿಂದ ಕೂಡಿದೆ? ದಯವಿಟ್ಟು ಈ ಲೇಖನ ಓದಿ. ನಿಜ, ಈ ಲೇಖನದಲ್ಲಿ ಹೊಸದೇನಿಲ್ಲ. ಆದರೆ ಮುಖ್ಯವಾದ ಸಂಗತಿಗಳಲ್ಲಿ ಏನೂ ಹೊಸದಿರುವುದಿಲ್ಲ. ಹೊಸದು ಸೃಷ್ಟಿಯಾಗಬೇಕಿರುವುದು ನಮ್ಮೊಳಗೆ. ಅದಕ್ಕಾಗಿ ಈ ಲೇಖನವನ್ನು ಪ್ರಕಟಿಸುತ್ತಿದ್ದೇವೆ. ನೀವು ನಿಮ್ಮ ಮಕ್ಕಳು ಮತ್ತು ಮೊಮ್ಮಕ್ಕಳ ಭವಿಷ್ಯಕ್ಕಾಗಿ, ಅವರ ಸುಖ ಸಂಪತ್ತಿಗಾಗಿ ಸಂಪಾದನೆಗಳಲ್ಲಿ ತೊಡಗಿದ್ದೀರಾ? ಈ ಲೇಖನ ಓದಿ-ಸಂ**

**ಹೌ**ದು, ನಿಜವಾಗಿಯೂ ಹವಾಮಾನ ತೀವ್ರವಾಗಿ ಬದಲಾಗುತ್ತಿದೆ. ಇದಿನ್ನೂ ಆರಂಭವಷ್ಟೇ. ಮುಂಬರುವ ದಿನಗಳಲ್ಲಿ ಪರಿಸ್ಥಿತಿ ಮತ್ತಷ್ಟು ಹದಗೆಡಲಿದೆ. ಏಕೆಂದರೆ ನಾವು ನಮ್ಮ ತಪ್ಪುಗಳಿಂದ ಪಾಠ ಕಲಿಯುತ್ತಿಲ್ಲ. ಇಂಗಾಲ ವಿಸರ್ಜನೆಯ ಪ್ರಮಾಣ ಸತತವಾಗಿ ಏರುತ್ತಲೇ ಇದ್ದರೂ ನಾವು ಇದರ ವಿರುದ್ಧ ಏನನ್ನೂ ಮಾಡುತ್ತಿಲ್ಲ. ಈ ಬಗ್ಗೆ ನಿಮಗೊಂದು ಕಲ್ಪನೆ ಸಿಗಲಿಕ್ಕಾಗಿ ಹೇಳುತ್ತೇನೆ; ಕಳೆದ ೧೦,೦೦೦ ವರ್ಷಗಳಲ್ಲಿ ಭೂಮಿಯ ಮೇಲಿನ ತಾಪಮಾನವು ಸ್ಥಿರವಾಗಿಯೇ ಉಳಿದಿತ್ತು. ಆದರೆ ೧೯ನೇ ಶತಮಾನದ ಕೈಗಾರಿಕಾ ಕ್ರಾಂತಿ ಪೂರ್ವ ಕಾಲದಿಂದ ಈಚೆಗೆ, ಭೂಮಿಯ ತಾಪಮಾನವು ೧ ಡಿಗ್ರಿ ಸೆಲ್ಸಿಯಸ್‌ಗಿಂತ ಹೆಚ್ಚು ಏರಿಕೆಯಾಗಿದೆ ಮತ್ತು ಅದೀಗ ಅತ್ಯಂತ ವೇಗವಾಗಿ ೧.೫ ಡಿಗ್ರಿ ಸೆಲ್ಸಿಯಸ್ಸನ್ನು ಸಮೀಪಿಸುತ್ತಿದೆ. ಈ ಏರಿಕೆಯ ಮಟ್ಟವೇನಾದರೂ ೨ ಡಿಗ್ರಿ ಸೆಲ್ಸಿಯಸ್ ಮುಟ್ಟಿದರೆ ನಿಜವಾಗಿಯೂ ಭೂಮಿ ವಿನಾಶದಂಚಿಗೆ ಸರಿದಂತೆಯೇ. ಕೇವಲ ೦.೫ ಡಿಗ್ರಿ ಸೆಲ್ಸಿಯಸ್, ಏನು ಮಹಾ? ಏಕೆ ಆತಂಕಪಡಬೇಕು? ಅಂತ ನೀವು ಯೋಚಿಸುತ್ತಿರಬಹುದು.

### ಪ್ರಾಣಿ ಪಕ್ಷಿಗಳ ಬದುಕುವ ಹಕ್ಕಿಗೆ ಕುತ್ತು: ಮುಂದೇನು?

ಈ ವಿಚಾರ ಹೆಚ್ಚು ಸ್ಪಷ್ಟವಾಗಲು ಕೆಲ ಅಂಕಿ–ಅಂಶಗಳನ್ನು ನಿಮ್ಮ ಮುಂದಿಡುತ್ತೇನೆ: ಭೂಮಿಯ ತಾಪಮಾನ ಏರಿಕೆ ೧.೫ ಡಿಗ್ರಿ ಸೆಲ್ಸಿಯಸ್ ಮುಟ್ಟಿದಾಗಲೂ ಧೃವ ಪ್ರದೇಶಗಳಲ್ಲಿ ಬೇಸಿಗೆ ಕಾಲದ ಬಹುತೇಕ ದಿನಗಳಲ್ಲಿ ಹಿಮ ಕವಚ ಇರುತ್ತದೆ. ಆದರೆ ತಾಪಮಾನ ಏರಿಕೆಯ ಪ್ರಮಾಣ ಅದಕ್ಕಿಂತ ಕೇವಲ ಅರ್ಧ ಡಿಗ್ರಿ ಹೆಚ್ಚಾದರೂ ಅಲ್ಲಿನ ಬೇಸಿಗೆಗಳು ಹಿಮರಹಿತವಾಗಿಬಿಡುತ್ತವೆ. ಅಂದರೆ ಹಿಮ ಕರಡಿಗಳು, ತಿಮಿಂಗಿಲಗಳು, ನೀರುನಾಯಿಗಳು ಮತ್ತು ಸಮುದ್ರ ಹಕ್ಕಿಗಳು ತಮ್ಮ ಆವಾಸಸ್ಥಾನಗಳನ್ನು ಕಳೆದುಕೊಳ್ಳುತ್ತವೆ. ಹೆಚ್ಚಿನಂಶ ಹಸಿವಿನಿಂದ ಸಾಯುತ್ತವೆ ಮತ್ತು ಈ ಜೀವಪ್ರಭೇದಗಳು ಬಹುಬೇಗ ನಶಿಸಿಹೋಗುತ್ತವೆ. ನಗರ ಪ್ರದೇಶಗಳಲ್ಲಿ ನೀರಿಗೆ ತೀವ್ರ ಕೊರತೆಯುಂಟಾಗುತ್ತದೆ. ರಾಷ್ಟ್ರದ ಮಲೆನಾಡುಗಳ್ಳಿನ ಊರುಗಳು ಈಗಾಗಲೇ ನೀರಿನ ಕೊರತೆ ಎದುರಿಸುತ್ತಿವೆ. ಒಂದು ಕಡೆ, ತೀವ್ರ ಬರವುಂಟಾದರೆ, ಮತ್ತೊಂದೆಡೆ ಸಮುದ್ರಮಟ್ಟದ ಏರಿಕೆಯಿಂದಾಗಿ ಕರಾವಳಿ ತೀರಗಳಲ್ಲಿ ಪ್ರವಾಹವುಂಟಾಗುತ್ತದೆ. ಸಣ್ಣ ಸಣ್ಣ ದ್ವೀಪ ರಾಷ್ಟ್ರಗಳು ಭೂಪಟದಿಂದಲೇ ಮಾಯವಾಗುತ್ತವೆ. ಜಾಗತಿಕ ತಾಪಮಾನ ಏರಿಕೆಯಿಂದಾಗಿ ಭಾರತ ಮತ್ತು ಮಾಲ್ಡೀವ್ಸ್ ಈಗಾಗಲೇ ಕೆಲವು ಸಣ್ಣ ಸಣ್ಣ ದ್ವೀಪಗಳನ್ನು ಕಳೆದುಕೊಂಡಿದೆ.

ತಾಪಮಾನ ಏರಿಕೆ ೧.೫ ಡಿಗ್ರಿಯಷ್ಟು ಹೆಚ್ಚಾದಾಗ, ಶೇ.೬ರಷ್ಟು ಕೀಟಗಳು, ಶೇ.೮ರಷ್ಟು ಸಸ್ಯಗಳು ಮತ್ತು ಶೇ.೪ರಷ್ಟು ಕಶೇರುಕ (ಬೆನ್ನುಮೂಳೆ ಇರುವ) ಜೀವಿಗಳು ಈ ಭೂಮಿಯಿಂದ ಸಂಪೂರ್ಣವಾಗಿ ಕಾಣೆಯಾಗುತ್ತವೆ. ತಾಪಮಾನ ಏರಿಕೆಯು ಮುಂದುವರಿದು ೦.೫ ಡಿಗ್ರಿಯಷ್ಟು ಮತ್ತೆ ಹೆಚ್ಚಾದರೆ, ಈ ಅಂಕಿ–ಸಂಖ್ಯೆಗಳು ಊಹಾತೀತವಾಗಿ ಹೆಚ್ಚುತ್ತವೆ. ನಮಗೆಲ್ಲ ತಿಳಿದಿರುವಂತೆ ಕೀಟಗಳು, ಬೆಳೆಗಳ ಪರಾಗಸ್ಪರ್ಶ ಕ್ರಿಯೆಯಲ್ಲಿ ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಹೀಗಾಗಿ ಕೀಟಗಳು ನಶಿಸಿಹೋಗುವ ಪ್ರಕ್ರಿಯೆಯು ನಮ್ಮ ಬೆಳೆಗಳ ಮೇಲೆ ಬೃಹತ್ ಪರಿಣಾಮವನ್ನು ಬೀರುತ್ತವೆ. ಜಗತ್ತಿನಾದ್ಯಂತ ತೀವ್ರವಾದ ಆಹಾರ ಕೊರತೆ ಉಂಟಾಗುತ್ತದೆ. ಹವಾಮಾನ ವೈಪರೀತ್ಯದ ಕಾರಣದಿಂದ ಈಗಾಗಲೇ ರೈತರ ಆತ್ಮಹತ್ಯೆಗಳು ಹೆಚ್ಚುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

### ಹವಳಗಳ ದಿಬ್ಬಗಳ ನಾಶ ಎಂದರೇನು?

ಮತ್ತೊಂದು ಅಂಶವನ್ನು ಗಮನಿಸಬೇಕು. ಭೂ ತಾಪಮಾನವು ೧.೫ ಡಿಗ್ರಿ ಸೆಲ್ಸಿಯಸ್ ಏರಿಕೆಯಾದಾಗ ಸುಮಾರು ಶೇ.೭೦–೯೦ರಷ್ಟು ಹವಳದ ದಿಬ್ಬಗಳು ಸಾಯುತ್ತವೆ. ಈ ಏರಿಕೆಯು ೨ ಡಿಗ್ರಿ ಸೆಲ್ಸಿಯಸ್ ಮುಟ್ಟಿದರೆ, ನಮ್ಮ ಎಲ್ಲ ಸಮುದ್ರಗಳಲ್ಲಿರುವ ಎಲ್ಲ ಹವಳದ ದಿಬ್ಬಗಳೂ ಸಂಪೂರ್ಣವಾಗಿ ನಾಶವಾಗುತ್ತವೆ. ಇದರ ಪರಿಣಾಮವು ಹವಳದ ದಿಬ್ಬಗಳಲ್ಲಿ ವಾಸಿಸುವ ಸೂಕ್ಷ್ಮಾಣುಜೀವಿಗಳಿಂದ ಹಿಡಿದು ಇಡೀ ಮಾನವ ಸಂಕುಲದ ತನಕ ಎಲ್ಲದರ ಮೇಲೂ ಆಗುತ್ತದೆ. ಜಗತ್ತಿನಾದ್ಯಂತ ಸುಮಾರು ೫೦ ಕೋಟಿ ಜನರಿಗೆ ಆಹಾರ ಮತ್ತು ಕರಾವಳಿ ತೀರಗಳಿಗೆ ರಕ್ಷಣೆ ಒದಗಿರುವುದು ಈ ಹವಳದ ದಿಬ್ಬಗಳಿಂದಲೇ. ಇವುಗಳ ನಾಶದಿಂದ, ಬಿರುಗಾಳಿಗಳು, ಚಂಡಮಾರುತಗಳು ಮತ್ತು ವಾಯುಭಾರ ಕುಸಿತಗಳಿಂದುಂಟಾಗುವ ಪ್ರವಾಹಗಳಿಗೆ ಕರಾವಳಿ ತೀರಗಳು ಸುಲಭವಾಗಿ ತುತ್ತಾಗುತ್ತವೆ ಮತ್ತು ಅಪಾರ ಪ್ರಮಾಣದ ಹಾನಿಗೊಳಗಾಗುತ್ತವೆ.

ಈ ನಡುವೆ, ನಾವೆಲ್ಲ ನಮಗೆ ರೂಢಿಯಗಿರುವಂತೆ ಒಂದು ಬಾರಿಗೆ ಒಂದು ರೀತಿಯ ಬದಲಾವಣೆಗೆ ಹೊಂದಿಕೊಳ್ಳಬೇಕಾಗುವುದರ ಬದಲು ಇದ್ದಕ್ಕಿದ್ದ ಹಾಗೆ ಆಕಸ್ಮಿಕವಾಗಿ ವಿವಿಧ ರೀತಿಯಲ್ಲಿ ಆಗುವ ಎಲ್ಲ ಬದಲಾವಣೆಗಳಿಗೆ ಒಮ್ಮೆಲೇ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಒತ್ತಡಕ್ಕೆ ಸಿಲುಕಿಕೊಳ್ಳುತ್ತೇವೆ. ಈ ವಿಷಯಗಳನ್ನೆಲ್ಲ ಸುಮ್ಮನೇ ಹೀಗೇ ಲೋಕಾಭಿರಾಮವಾಗಿ ಹೇಳುತ್ತಿಲ್ಲ. ಇವ್ಯಾವುವೂ ಬರೀ ಕಾಲ್ಪನಿಕ ಸನ್ನಿವೇಶಗಳೂ ಅಲ್ಲ. ಇವೆಲ್ಲವೂ ಈಗ ವಾಸ್ತವವಾಗಿ ಸಂಭವಿಸುತ್ತಿರುವ ವಿದ್ಯಮಾನಗಳಾಗಿವೆ. ಪ್ರಸ್ತುತ

ಪರಿಸ್ಥಿತಿಯು ಹೇಗಿದೆಯೆಂದರೆ, ೨೦೧೫ ರಲ್ಲಿ ಮಾಡಿಕೊಂಡ ಪ್ಯಾರಿಸ್ ಒಪ್ಪಂದದ ಪ್ರಕಾರವೇ (ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡಲು) ಎಲ್ಲ ದೇಶಗಳೂ ಅದಕ್ಕೆ ಬದ್ಧವಾಗಿ ನಡೆದುಕೊಂಡರೂ ಈ ಶತಮಾನದ ಹೊತ್ತಿಗೆ ಭೂ ತಾಪಮಾನವು ಸುಮಾರು ೩ ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆಯಾಗುವ ಸಂಭವವಿದೆ ಮತ್ತು ಈ ಜಗತ್ತು ಯಾವ ರೀತಿಯಲ್ಲೂ ಅದಕ್ಕೆ ಸಿದ್ಧವಾಗಿಲ್ಲ!

### ಅಪಾಯದ ಸ್ಥಿತಿಯಲ್ಲಿ ಭಾರತ

ವಿಶ್ವಸಂಸ್ಥೆಯ ಇತ್ತೀಚಿನ ವರದಿಯ ಎಚ್ಚರಿಕೆಯಂತೆ, ಮುಂದಿನ ಸುಮಾರು ೧೨ ವರ್ಷಗಳಲ್ಲಿ, ಜಾಗತಿಕ ಹಸಿರುಮನೆ ಅನಿಲ ಹೊರಸೂಸುವಿಕೆಯು ಇಂದಿನದಕ್ಕಿಂತ ಅರ್ಧದಷ್ಟು ಪ್ರಮಾಣದಲ್ಲಿ ತಗ್ಗಲೇಬೇಕಾಗಿದೆ. ಮತ್ತು ಈ ಹೊರಸೂಸುವಿಕೆಯು ೨೦೫೦ರ ಹೊತ್ತಿಗೆ ಸಂಪೂರ್ಣವಾಗಿ ಶೂನ್ಯವಾಗಿರಬೇಕು. ಇಲ್ಲವಾದರೆ, ನಮ್ಮ ಕತೆ ಮುಗಿದಂತೆಯೇ. ಅದರಲ್ಲೂ ಈ ವರದಿಯು ಭಾರತಕ್ಕೆ ವಿಶೇಷವಾಗಿ ಸೂಚನೆಯನ್ನು ಕೊಡುತ್ತಿದೆ. ಜಗತ್ತಿನಾದ್ಯಂತ ಅತಿ ಹೆಚ್ಚು ಹವಾಮಾನ ಬದಲಾವಣೆಯ ಹೊಡೆತಕ್ಕೆ ಸಿಕ್ಕುವ ದೇಶಗಳಲ್ಲಿ ಭಾರತವೂ ಒಂದು ಎನ್ನುವ ಅಂಶವನ್ನು ಈ ವರದಿ ಮುಂದಿಟ್ಟಿದೆ. ಹಿಂದೆಂದೂ ತೆಗೆದುಕೊಂಡಿಲ್ಲದಂಥ ಕ್ರಮಗಳನ್ನು ಸರ್ಕಾರಗಳು ತೆಗೆದುಕೊಳ್ಳಲೇಬೇಕಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಭೂ ಗ್ರಹದ ಮೇಲಿನ ಎಲ್ಲಾ ಕಲ್ಲಿದ್ದಲು ಆಧಾರಿತ ಘಟಕಗಳೂ ಮತ್ತು ಪೆಟ್ರೋಲಿಯಂ ಇಂಧನ ಆಧಾರಿತ ವಾಹನಗಳೂ ಆದಷ್ಟು ಬೇಗನೇ ಇಂಗಾಲ ರಹಿತ ಪರ್ಯಾಯಗಳಿಗೆ ಬದಲಿಸಿಕೊಳ್ಳುವ ಅಗತ್ಯವಿದೆ. ಇಷ್ಟೇ ಅಲ್ಲ, ಈ ವರದಿಯ ಪ್ರಕಾರ, ಪ್ರತಿವರ್ಷವೂ ಕೋಟ್ಯಾನುಕೋಟಿಗಟ್ಟಲೆ ಟನ್ನುಗಳಷ್ಟು ದೊಡ್ಡ ಪ್ರಮಾಣದಲ್ಲಿ ಇಂಗಾಲದ ಡೈಆಕ್ಸೈಡನ್ನು ಭೂ ವಾತಾವರಣದಿಂದ ತೆಗೆದು ಹಾಕಲು ತಂತ್ರಜ್ಞಾನವನ್ನು ಆದಷ್ಟು ಬೇಗನೇ ಅಭಿವೃದ್ಧಿಪಡಿಸಬೇಕಿದೆ ಮತ್ತು ಅದನ್ನು ಸೂಕ್ತವಾಗಿ ನಿಯೋಜಿಸಬೇಕಿದೆ. ನಾವು ಹಾಗೆ ಮಾಡಲು ವಿಫಲವಾದಲ್ಲಿ, ೨೦೪೦ರ ಹೊತ್ತಿಗೆ ಭಾರತ, ಚೀನಾ, ಬಾಂಗ್ಲಾದೇಶ, ಜಪಾನ್, ಅಮೆರಿಕಾ, ಇಂಡೊನೇಶಿಯಾ, ಈಜಿಪ್ಟ್, ಫಿಲಿಪೈನ್ಸ್ ಮತ್ತು ವಿಯೆಟ್ನಾಮ್ ದೇಶಗಳಲ್ಲಿನ ಸುಮಾರು ೫೦ ಕೋಟಿ ಜನರು ಕರಾವಳಿ ತೀರಗಳ ಪ್ರವಾಹದಿಂದ ತೊಂದರೆಗೊಳಗಾಗುತ್ತಾರೆ. ನಾವು ಕಾರ್ಯಪ್ರವೃತ್ತರಾಗಬೇಕಾದ ಸಮಯವಿದು. ಇಲ್ಲವಾದರೆ ಅದು ತುಂಬಾ ತಡವಾಗಿ ಹೋಗಬಹುದು.

### ಡೊನಾಲ್ಡ್ ಟ್ರಂಪ್‌ರ ತಲೆತಿರುಕತನ

ಅತಿ ಹೆಚ್ಚು ಇಂಗಾಲವನ್ನು ಹೊರಸೂಸುವ ದೇಶಗಳಲ್ಲಿ ಚೀನಾ ಮೊದಲ ಸ್ಥಾನದಲ್ಲಿದೆ. ೨ನೇ ಹಾಗೂ ೩ನೇ ಸ್ಥಾನಗಳಲ್ಲಿ ಕ್ರಮವಾಗಿ ಅಮೆರಿಕಾ ಮತ್ತು ಭಾರತ ದೇಶಗಳಿವೆ. ಚೀನಿಯರು ಇತರರಿಗಿಂತ ಚತುರರು. ಆಗಲೇ ಪರಿಸರ ಸಂರಕ್ಷಣೆಯನ್ನು ಅವರ ಮೊದಲ ಆದ್ಯತೆಯನ್ನಾಗಿ ಮಾಡಿಕೊಂಡಿದ್ದಾರೆ. ಅಮೆರಿಕಾದಲ್ಲಂತೂ ಡೊನಾಲ್ಡ್ ಟ್ರಂಪ್‌ರ ತಲೆತಿರುಕತನ ಮಮೇರೆ ಮೀರಿ ಹೋಗಿದೆ. ಅಮೆರಿಕಾವು ಅತ್ಯಧಿಕ ಇಂಗಾಲ ಹೊರಸೂಸುತ್ತಿರುವ ದೇಶವಷ್ಟೇ ಅಲ್ಲ, ತಲಾವಾರು ಈಗಾಗಲೇ ಇಂಗಾಲ ಹೊರಸೂಸಿರುವ ಪ್ರಮಾಣದಲ್ಲೂ ಸಹ ಮುಂದಿದೆ. ಭಾರತ ಮತ್ತು ಚೀನಾ ದೇಶಗಳ ತಲಾವಾರು ಈಗಾಗಲೇ ಇಂಗಾಲ ಹೊರ ಸೂಸಿದ ಪ್ರಮಾಣ ಕ್ರಮವಾಗಿ ೧.೫ ಮತ್ತು ೬.೫ ಮೆಟ್ರಿಕ್ ಟನ್ನಿನಷ್ಟಿದ್ದರೆ, ಅಮೆರಿಕಾದ ಈ ಪ್ರಮಾಣ ತಲಾವಾರು ೧೫.೫ ಮೆಟ್ರಿಕ್ ಟನ್ನಿನಷ್ಟಿದೆ. ಆದರೆ ಟ್ರಂಪ್ ಮಹಾಶಯರು ಹವಾಮಾನ ಬದಲಾವಣೆ ನಿಜ ಎಂದು ನಂಬುವುದೇ ಇಲ್ಲ! ಅವರ ಪ್ರಕಾರ, ದೆವ್ವ-ಭೂತಗಳು ಹೇಗೆ ಅಸ್ತಿತ್ವದಲ್ಲಿಲ್ಲವೋ ಹಾಗೆಯೇ ಹವಾಮಾನ ಬದಲಾವಣೆ ಕೂಡ ಅಸ್ತಿತ್ವದಲ್ಲಿಲ್ಲ. ಅವರು ಇದನ್ನು ಅಮೆರಿಕಾ ವಿರುದ್ಧ ಇನ್ನಿತರ ರಾಷ್ಟ್ರಗಳು ಮಾಡುತ್ತಿರುವ ಒಂದು ಪಿತೂರಿ ಎಂದು ಪರಿಗಣಿಸುತ್ತಾರೆ! ನಿಜವಾಗಲೂ ಇಂಥ ಮನುಷ್ಯನನ್ನು ಅಧ್ಯಕ್ಷ ಸ್ಥಾನಕ್ಕೆ ಹೇಗೆ ಆಯ್ಕೆ ಮಾಡಲಾಯಿತೋ ತಿಳಿಯದದಾಗಿದೆ!

ಅದು ಹಾಗಿರಲಿ, ನಾವು ಭಾರತೀಯರೇನೂ ಇದಕ್ಕೆ ಕಡಿಮೆ ಇಲ್ಲ. ಭಾರತದಲ್ಲಿನ ಪ್ರಸ್ತುತ ರಾಜಕೀಯ ಸನ್ನಿವೇಶವನ್ನು ನೋಡುವಾಗ, ಹವಾಮಾನ ಬದಲಾವಣೆ ಕುರಿತ ನೀತಿಗಳು ಸರ್ಕಾರದ ಮೊದಲ ಆದ್ಯತೆಯಾಗಿ ಕಾಣುತ್ತಿಲ್ಲ. ಬದಲಿಗೆ ಆರ್ಥಿಕ ಬೆಳವಣಿಗೆಯೇ ಯಾವಾಗಲೂ ನಮ್ಮ ಕಾರ್ಯಸೂಚಿಗಳಲ್ಲಿ ಅಗ್ರಸ್ಥಾನ ಪಡೆಯುತ್ತಿದೆ. ಅದೂ ಕೂಡ ನಮ್ಮ ಪರಿಸರದ ಬೆಲೆ ತೆತ್ತು! ೨೦೧೪ರಲ್ಲಿ, ಮೋದೀಜಿ ಹೇಳಿದ್ದರು; 'ಬದಲಾಗುತ್ತಿರುವುದು ಹವಾಮಾನವಲ್ಲ; ಬದಲಿಗೆ ಹವಾಮಾನವನ್ನು ಎದುರಿಸುವ ನಮ್ಮ ಸಾಮರ್ಥ್ಯ' ಎಂದು!

### ನಮ್ಮ ಪರಿಸರ ತೆರಿಗೆ ಹಣ ಎಲ್ಲಿ ಹೋಗುತ್ತಿದೆ?

ಕೈಗಾರಿಕಾ ಅಭಿವೃದ್ಧಿಯ ಹೆಸರಿನಲ್ಲಿ ನಾವು ಮೇಲಿಂದ ಮೇಲೆ ಕಾಡುಗಳನ್ನು ಕಡಿಯುತ್ತಿದ್ದೇವೆ. ಮರಗಳು ವಾತಾವರಣದಿಂದ ಇಂಗಾಲದ ಡೈಆಕ್ಸೈಡ್‌ನ್ನು ಹೀರಿಕೊಳ್ಳುತ್ತವೆ ಎನ್ನುವುದು ಮೂರನೇ ತರಗತಿಯ ಮಗುವಿಗೂ ತಿಳಿದಿದೆ. ಪ್ರಸ್ತುತ ಜಾಗತಿಕ ಪರಿಸರ ಆರ್ಥಿಕ ನೀತಿಗಳೊಂದಿಗೆ ಸಮೀಕರಿಸಿಕೊಳ್ಳಲು, ಇತ್ತೀಚೆಗೆ ನಮ್ಮ ಸರ್ಕಾರವು ಜಾಗತಿಕ ವೇದಿಕೆಯಲ್ಲಿ ಪರಿಸರ ಜವಾಬ್ದಾರಿ ಹೊಂದಿರುವ ದೇಶವೆಂದು ಬಿಂಬಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಪರಿಸರ ಸಂರಕ್ಷಣೆಯ ಹೆಸರಿನಲ್ಲಿ ಜನರ ಮೇಲೆ ತೆರಿಗೆಯನ್ನೂ ವಿಧಿಸಲಾಗುತ್ತಿದೆ. ಆದರೆ ವಾಸ್ತವದಲ್ಲಿ ಅದು ಅಗತ್ಯವಾಗಿ ಆಗಬೇಕಿರುವುದಕ್ಕಿಂತ ತುಂಬ ಭಿನ್ನವಾಗಿದೆ. ವ್ಯಾಪಾರ-ವಹಿವಾಟುಗಳನ್ನು ಸುಲಭವಾಗಿಸಲು, ಪರಿಸರ ಪರಿಣಾಮಗಳ ಮೌಲ್ಯಮಾಪನ ಮಾನದಂಡಗಳನ್ನು ಕೈಬಿಟ್ಟಿದೆ ನಮ್ಮ ಸರ್ಕಾರ. ಹಾಗಾಗಿ, ಪರಿಸರ ಪರಿಣಾಮಗಳ ಕಾರಣದಿಂದ ತಡೆಹಿಡಿಯಲಾಗಿದ್ದ ಅನೇಕ ಯೋಜನೆಗಳು ಇಂದು ಅಂಗೀಕರಿಸಲ್ಪಟ್ಟಿವೆ. ೨೦೧೦-೨೦೧೮ ರ ನಡುವೆ ಸುಮಾರು ೮೦ ಸಾವಿರ ಕೋಟಿ ರೂಪಾಯಿಗಳನ್ನು ಸ್ವಚ್ಛ ಇಂಧನ ತೆರಿಗೆ(ಕ್ಲೀನ್ ಎನರ್ಜಿ ಸೆಸ್) ಎಂದು ಸಂಗ್ರಹಿಸಲಾಗಿದೆ. ಅದರಲ್ಲಿ ಸುಮಾರು ಶೇ.೩೦ರಷ್ಟು (ರೂ. ೨೪ ಸಾವಿರ ಕೋಟಿ) ಹಣವನ್ನು ರಾಷ್ಟ್ರೀಯ ಸ್ವಚ್ಛ ಇಂಧನ ನಿಧಿ(ಕ್ಲೀನ್ ಎನರ್ಜಿ ಫಂಡ್)ಗೆ ವರ್ಗಾಯಿಸಲಾಗಿದೆ. ಆ ೨೪ ಸಾವಿರ ಕೋಟಿ ರೂಪಾಯಿಗಳಲ್ಲಿ ಕೇವಲ ೭ ಸಾವಿರ ಕೋಟಿ ರೂಪಾಯಿಗಳಷ್ಟನ್ನು ಮಾತ್ರ ಕೆಲ ಯೋಜನೆಗಳಲ್ಲಿ ತೊಡಗಿಸಲಾಗಿದೆ. ಇದು ಒಂದು ಮರುವರ್ಗಾಯಿಸಲಾಗದ ನಿಧಿ (ನಾನ್ ಲ್ಯಾಪ್ಸಬಲ್ ಫಂಡ್). ಹವಾಮಾನ ಬದಲಾವಣೆಯನ್ನು ತಗ್ಗಿಸಲು ಬಳಕೆಯಾಗಬೇಕಾದ ಅತಿ ಮುಖ್ಯವಾದ ಧನಸಂಪನ್ಮೂಲವಿದು. ನಾನ್ ಲ್ಯಾಪ್ಸಬಲ್ ಫಂಡ್ ಎಂದರೆ, ಹಣಕಾಸಿನ ಆಯವ್ಯಯದ ವರ್ಷಾಂತ್ಯದ ವೇಳೆಗೆ ಈ ನಿಧಿಯಲ್ಲಿ ಹಣ ಉಳಿಕೆಯಾಗಿದ್ದರೆ, ಅದನ್ನು ಬೇರೆ ಯಾವುದೇ ಯೋಜನೆಗಳಿಗೆ ವರ್ಗಾವಣೆ ಮಾಡುವಂತಿಲ್ಲ ಎಂದರ್ಥ. ಒಂದು ವರದಿಯ ಪ್ರಕಾರ ಒಟ್ಟು ಪರಿಸರ ರಕ್ಷಣೆಯ ತೆರಿಗೆ ಸಂಗ್ರಹದಲ್ಲಿ ಕ್ಲೀನ್ ಎನರ್ಜಿಗಾಗಿ ವರ್ಗಾಯಿಸಿದ ೨೪ ಸಾವಿರ ಕೋಟಿ ರೂಪಾಯಿಗಳನ್ನು ಕಳೆದು ಉಳಿದ ೫೬ ಸಾವಿರ ಕೋಟಿ ರೂಪಾಯಿಗಳನ್ನು ಹವಾಮಾನ ಬದಲಾವಣೆಯ ವಿರುದ್ಧದ ಚಟುವಟಿಕೆಗಳಿಗೆ ಬಳಸುವ ಬದಲು ಜಿಎಸ್‌ಟಿ ಅನುಷ್ಠಾನದಿಂದುಂಟಾದ ನಷ್ಟವನ್ನು ತುಂಬಿಕೊಳ್ಳಲು ಬಳಸಲಾಗಿದೆ! ಇದು ನಮ್ಮೆದುರಿರುವ ಸಮಸ್ಯೆಯನ್ನು ಎಷ್ಟು ಗಂಭೀರವಾಗಿ ತೆಗೆದುಕೊಂಡಿದ್ದೇವೆಂಬುದನ್ನು ತೋರಿಸುತ್ತದಷ್ಟೇ.

ಪರಿಸ್ಥಿತಿ ಕೆಡುವುದು ನಿಜ. ಆದರೆ ಅದನ್ನು ಕಡಿಮೆ ಕೆಟ್ಟದಾಗುವಂತೆ ಮಾಡಿಕೊಳ್ಳಬಹುದು. ಅದಕ್ಕೆ ಇನ್ನು ಸ್ವಲ್ಪವೇ ಸಮಯವಿದೆ. ಆದರೆ ನಾವು ತಕ್ಷಣವೇ ಕಾರ್ಯಪ್ರವೃತ್ತರಾಗಬೇಕು. ಈ ವಿಷಯದ ಬಗ್ಗೆ ನಮ್ಮಲ್ಲಿ ಯಾರಿಗೆ ಅರಿವಿಲ್ಲವೋ ಅವರು ಇದನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು ಮತ್ತು ನಮ್ಮ ಸುತ್ತಲಿರುವ ಜನರಿಗೆ ಈ ಬಗ್ಗೆ ಅರಿವು ಮೂಡಿಸಲು ಪ್ರಯತ್ನಿಸುವುದು ಆಗಬೇಕಿರುವ ಮೊದಲ ಕೆಲಸ. ಎರಡನೆಯದಾಗಿ, ನಂನಮ್ಮ ವೈಯಕ್ತಿಕವಾಗಿ ಇಂಗಾಲ ವಿಸರ್ಜನೆಗೆ ಕಾರಣವಾಗುವ ಪ್ರತ್ಯಕ್ಷ ಮತ್ತು ಪರೋಕ್ಷ ಚಟುವಟಿಕೆಗಳ ಪ್ರಮಾಣವನ್ನು ಸಾಧ್ಯವಾದಷ್ಟು ಕಡಿಮೆಮಾಡಿಕೊಳ್ಳುವುದು. ಇದು ಈಗಲ್ಲದಿದ್ದರೆ ಇನ್ನೆಂದೂ ಇಲ್ಲ. ಹವಾಮಾನ ವೈಪರೀತ್ಯಕ್ಕೆ ಬಲಿಯಾಗುವವರು ನಮ್ಮ ಮಕ್ಕಳು, ಮೊಮ್ಮಕ್ಕಳೇ. ಇನ್ನು ಸಮಯ ವ್ಯರ್ಥ ಮಾಡುವಂತಿಲ್ಲ.



**(ಹರ್ಯಾಣದ ಗುರುಗ್ರಾಮದವರಾದ ಸಾಹಿಲ್ ವರ್ಮಾ ಟಾಟಾ ಇಂಧನ ಸಂಶೋಧನಾ ಸಂಸ್ಥೆಯಲ್ಲಿ ಅಧ್ಯಯನ ಮಾಡಿ 'ವೃಕ್ಷ'ಎಂಬ ಪರಿಸರವಾದಿ ಸಮುದಾಯವೊಂದರ ಮುಂದಾಳತ್ವ ವಹಿಸಿದ್ದು ಪರಿಸರ ಸಂರಕ್ಷಣೆಯ ಶಿಕ್ಷಣ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಿದ್ದಾರೆ).**

### ಪತ್ರಿಕೆಗೆ ಬರಹ-ಮಸ್ತಕಗಳನ್ನು ಕಳಸುವುದು ಬೇಡ

**'ಹೊಸ ಮನುಷ್ಯ' ಪೂರ್ಣ ಪೂರ್ವನಿಯೋಜನೆಯೊಂದಿಗೆ, ಪ್ರಧಾನವಾಗಿ ಆಹ್ವಾನಿತ ಬರಹಗಳನ್ನೊಳಗೊಂಡ ಪತ್ರಿಕೆಯಾಗಿರುವುದರಿಂದ ದಯವಿಟ್ಟು ಯಾರೂ ಸ್ವ ಇಚ್ಛೆಯಿಂದ ಪ್ರಕಟಣೆಗಾಗಿ ಕವನ-ಕಥೆ ಸೇರಿದಂತೆ ಯಾವುದೇ ಬರಹವನ್ನು ಅಥವಾ ಅವಲೋಕನಕ್ಕಾಗಿ ಮಸ್ತಕಗಳನ್ನು ಕಳಿಸಬಾರದೆಂದು ಕೋರುತ್ತೇವೆ. ಅವಲೋಕನಕ್ಕಾಗಿ ಮಸ್ತಕಗಳನ್ನು ಪತ್ರಿಕೆಯೇ ಆಯ್ದು ಸಂಬಂಧಪಟ್ಟವರಿಂದ ತರಿಸಿಕೊಳ್ಳುವುದು.**

**ಪತ್ರಿಕೆಯಲ್ಲಿನ ಲೇಖನಗಳಿಗೆ ಪ್ರತಿಸ್ಪಂದಿಸಬಯಸುವವರು, ತಮ್ಮ ಪ್ರತಿಕ್ರಿಯೆಗಳನ್ನು ಸಂಕ್ಷಿಪ್ತವಾಗಿ-ಸಾಮಾನ್ಯ ಸಂದರ್ಭಗಳಲ್ಲಿ ನೂರು ಪದಗಳನ್ನು ಮೀರದಂತೆ- ಆಯಾ ತಿಂಗಳ ೨೦ರೊಳಗಾಗಿ ನಮಗೆ ತಲುಪುವಂತೆ ಬರೆದು ಕಳಿಸಬಹುದು/ಮೇಲ್ ಮಾಡಬಹುದು-ಸಂ.**

# ಗಾಂಧಿ ಕಟ್ಟಿಕೊಟ್ಟ ರಾಷ್ಟ್ರೀಯತೆ

–ಡಾ. ರಾಜೇಂದ್ರ ಚೆನ್ನಿ



**ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ಕಳೆದ ಜನವರಿ ೧೨ ಹಾಗೂ ೧೩ರಂದು 'ರಾಷ್ಟ್ರೀಯತೆಯ ಅರ್ಥ–ಅಪಾರ್ಥಗಳು; ಎಂಬ ವಿಷಯ ಕುರಿತ ಅಧ್ಯಯನ ಶಿಬಿರದ ಇನ್ನೆರಡು ಉಪನ್ಯಾಸಗಳ ಬರಹ ರೂಪಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ. ಈ ಎರಡು ಲೇಖನಗಳು ಇಂದು ರಾಷ್ಟ್ರೀಯತೆ ಕುರಿತ ನಡೆಯುತ್ತಿರುವ ದಟ್ಟ ವಾಗ್ವಾದಗಳಲ್ಲಿನ ಹಲವು ತಪ್ಪು ಗ್ರಹಿಕೆಗಳನ್ನು ನಿವಾರಿಸಲು ಪ್ರಯತ್ನಿಸಿವೆ ಎಂದು ನಾವು ಭಾವಿಸಿದ್ದೇವೆ.**–ಸಂ.

ಇಲ್ಲಿ ಇದುವರೆಗೂ ನಡೆದಿರುವ ಚರ್ಚೆಗಳಿಂದ ರಾಷ್ಟ್ರ ಮತ್ತು ರಾಷ್ಟ್ರೀಯತೆ ಎನ್ನುವ ಪದಗಳ ಬಗ್ಗೆ ನಿಮಗೆ ಈಗಾಗಲೇ ಸಾಕಾಗಿ, ಸುಸ್ತಾಗಿ ರಾಷ್ಟ್ರೀಯತೆ ಎನ್ನುವುದರ ಬಗ್ಗೆಯೇ ಒಂದು ತರ ಜಿಗುಪ್ಸೆ ಮೂಡಿದ್ದರೆ ಈ ಶಿಬಿರ ಸಾಕಷ್ಟು ಯಶಸ್ವಿಯಾಗಿದೆ ಎಂತಲೇ ಅರ್ಥ. ನಾನೂ ಕೂಡ ಈ ಜಿಗುಪ್ಸೆ ಬರುವ ದಿಶೆಯಲ್ಲೇ ನನ್ನ ಶಕ್ತಿ ಮೀರಿ ಪ್ರಯತ್ನ ಮಾಡುತ್ತೇನೆ.

ಯಾಕೆ ಈ ಮಾತನ್ನ ಹೇಳಬೇಕಾಯಿತು ಅಂತಂದ್ರೆ ಗಾಂಧೀ ತಮ್ಮ ಜೀವನದುದ್ದಕ್ಕೂ ಸುಮಾರು ನೂರು ಸಂಪುಟಗಳಾಗುವಷ್ಟು ಲೇಖನಗಳನ್ನು ಬರೆದಿದ್ದಾರೆ. ಪ್ರಾಯಶಃ ಭಾರತದ ಮೂಲೆ ಮೂಲೆಯಲ್ಲೂ ಅವರು ಮಾತಾಡ್ತಾ ಇದ್ದರು, ಸಂಭಾಷಣೆಯಲ್ಲಿ ತೊಡಗಿಕೊಳ್ಳುತ್ತಿದ್ದರು. ಗಮನಿಸಬೇಕಾದ ಒಂದಂಶ ಎಂದರೆ ತಮ್ಮ ಈ ಲೇಖನಗಳಲ್ಲಿ, ಮಾತುಗಳಲ್ಲಿ ಅತ್ಯಂತ ಕಡಿಮೆ ಬಳಕೆಯಾಗಿರುವ ಪದಗಳೆಂದರೆ ರಾಷ್ಟ್ರ ಮತ್ತು ರಾಷ್ಟ್ರೀಯತೆ. ಗಾಂಧೀ ಅವರ ಹಿಂದ್–ಸ್ವರಾಜ್ ಪುಸ್ತಕವನ್ನು ಸಂಪಾದಿಸಿರುವ ತ್ರಿದೀಪ್ ಸಹೃದ್ ಅವರೂ ಕೂಡ ಈ ಸಂಗತಿಯನ್ನು ಪ್ರಸ್ತಾಪಿಸಿದ್ದಾರೆ. ಇದು ಇಂದಿನ ತಲೆಮಾರಿನವರಿಗೆ ಬಹಳಾ ಆಶ್ಚರ್ಯಕರವಾಗಿ ಕಾಣಬಹುದು. ಯಾಕೆ ಗಾಂಧೀ ಈ ಪದಗಳನ್ನು ಅಷ್ಟು ಕ್ವಚಿತ್ತಾಗಿ ಬಳಸಿದ್ದಾರೆ ಅಂತ! ಅಲ್ಲಿಂದಾನೆ ನಾನು ನನ್ನ ಚರ್ಚೆಯನ್ನ ಪ್ರಾರಂಭಿಸುತ್ತೇನೆ. ಈ ರಾಷ್ಟ್ರ ಎನ್ನುವ ಪದವು ಬಹಳಾ ಅಸಂಗತವಾಗಿದೆ ಎಂದು ಗಾಂಧಿ ಒಂದು ಕಡೆ ಹೇಳುತ್ತಾರೆ. ಈ ಅಸಂಗತವಾದ ಪದವು ನಮ್ಮ ಸನ್ನಿವೇಶ ಮತ್ತು ಚರಿತ್ರೆಗೆ ಸೂಕ್ತ ಅಲ್ಲ ಎನ್ನುವ ಮಾತನ್ನೂ ಕೂಡ ಅವರು ಹೇಳುತ್ತಾರೆ. ಹಾಗಾಗಿಯೇ ಅವರು ತಮ್ಮ ಗ್ರಂಥದಲ್ಲಿ ಆಯ್ಕೆ ಮಾಡಿಕೊಂಡು ಬಳಸಿದ ಪದ ರಾಷ್ಟ್ರ ಅಲ್ಲ,'ನಾಗರೀಕತೆ', ಎನ್ನುವುದನ್ನು ನಾವು ಗಮನಿಸಬೇಕು. ಅವರು ಯಾವಾಗಲೂ ಭಾರತೀಯ ನಾಗರೀಕತೆಯ ಬಗ್ಗೆ ಮಾತನಾಡುತ್ತಾರೆಯೇ ಹೊರತು ಭಾರತದ ರಾಷ್ಟ್ರೀಯತೆಯ ಬಗ್ಗೆ ಅಲ್ಲ. ಎಲ್ಲಿಯ ಮಟ್ಟಿಗೆ ಅಂತಂದ್ರೆ ಭಾರತವನ್ನು ಹಲವಾರು ದಶಕಗಳಿಂದ ವಸಾಹತುಶಾಹಿ ಹಿಡಿತದಿಂದ ಆಳುತ್ತಾ ಬಂದ ಇಂಗ್ಲೆಂಡ್‌ನ್ನು ಅಷ್ಟು ಕಟುವಾಗಿ ವಿರೋಧಿಸುತ್ತಾ ಇದ್ದಾಗಲೂ ಅವರು ಇಂಗ್ಲೆಂಡ್ ರಾಷ್ಟ್ರ ಅಂತ ಬಹಳಾ ಕ್ವಚಿತ್ತಾಗಿ ಬಳಸುತ್ತಾರೆಯೇ ಹೊರತು 'ಪಶ್ಚಿಮ ನಾಗರೀಕತೆ' ಎಂದೇ ಅವರು ಹೆಚ್ಚಾಗಿ ಬಳಸುವ ಪದ. ಕೆಲವು ಸಾರಿ ಪಶ್ಚಿಮ ಎನ್ನುವುದರ ಬದಲಾಗಿ 'ಆಧುನಿಕ ನಾಗರಿಕತೆ' ಎಂತಲೂ ಬಳಸುವುದನ್ನು ನಾವು ಗಮನಿಸಬಹುದು. ಇನ್ನು ಕೆಲವು ಸಲ ಅದನ್ನು 'ಯಂತ್ರ ನಾಗರೀಕತೆ' ಅಂತ ಬಳಸುತ್ತಾರೆ.

ಅಂದರೆ ಅವರು ಭಾರತವನ್ನು ಒಂದು ರಾಷ್ಟ್ರ ಎಂದು ಕಲ್ಪಿಸಿಕೊಳ್ಳುವುದರ ಬಗ್ಗೆ ಎಷ್ಟು ಶಂಕಿತರಾಗಿದ್ದರೋ ಅದೇ ಬಗೆಯಲ್ಲಿ ಅವರು ಇಂಗ್ಲೆಂಡನ್ನು ಕೂಡ ಒಂದು ರಾಷ್ಟ್ರ ಎಂದು ಗುರುತಿಸುವುದಕ್ಕಿಂತಾ ಅದೊಂದು ನಾಗರೀಕತೆಯ ಪ್ರತಿನಿಧಿ ಅನ್ನುವ ಬಗೆಯಲ್ಲಿ ನೋಡುತ್ತಾರೆ. ಮತ್ತು ಚರಿತ್ರೆಯ ಕಾರಣದಿಂದಾಗಿ ಆ ಪ್ರತಿನಿಧಿ ನಮ್ಮಲ್ಲಿ ಅಧಿಕಾರದ ಸ್ಥಾನದಲ್ಲಿ ಬಂದು ಕುಳಿತಿದೆ ಎಂದು ಗುರುತಿಸುವುದಲ್ಲದೆ ಅದೊಂದು ಸ್ವತಂತ್ರ ರಾಷ್ಟ್ರ ಎಂದು ತಿಳಿಯುವುದರ ಬಗ್ಗೆ ಅವರಿಗೆ ಹೆಚ್ಚು ಆಸಕ್ತಿ ಇಲ್ಲ.

## ರಾಷ್ಟ್ರ ಕಲ್ಪನೆಯ ಅಸಂಗತತೆ ಕುರಿತಂತೆ...

ಈ ರಾಷ್ಟ್ರ ಎನ್ನುವ ಕಲ್ಪನೆಯು ಗಾಂಧಿ ಅವರ ಅನುಭವದಲ್ಲಿ ಯಾಕೆ ಅಸಂಗತ ಅಂತ ಅನ್ನಿಸಿತ್ತು ಅಂತ ಯೋಚನೆ ಮಾಡಿದ್ರೆ ಮೂರು ಮುಖ್ಯ ಕಾರಣಗಳನ್ನ ಗುರ್ತಿಸಬಹುದು. ಮೊದಲನೆಯದಾಗಿ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಹಕ್ಕುಗಳ ಪರವಾಗಿ ಚಳುವಳಿಯನ್ನು ಕಟ್ಟುತ್ತಿರುವ ಸಂದರ್ಭದಲ್ಲಿಯೇ ಭಾರತದಲ್ಲಿ ಸಾಕಷ್ಟು ಓದಿಕೊಂಡು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲೆಂಡ್, ಕೆನಡಾ ಮತ್ತು ಅಮೆರಿಕಗಳ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಹೋದ ಹಲವಾರು ಯುವಜನರು ಅಲ್ಲಿ ತಮ್ಮ ಗುಪ್ತ ಸಮಾಜವನ್ನು ಕಟ್ಟಿಕೊಂಡು ಭಾರತದ ಸ್ವಾತಂತ್ರ್ಯದ ಬಗ್ಗೆ ಚಿಂತಿಸುತ್ತಾ ಈ ವಸಾಹತು ಆಡಳಿತವು ಶಸ್ತ್ರಾಸ್ತ್ರಗಳನ್ನು ಹೊಂದಿರುವುದರಿಂದ, ಬಲಶಾಲಿಯಾಗಿರುವುದರಿಂದ, ವೈಯಕ್ತಿಕ ಮಟ್ಟದಲ್ಲಾದರೂ ಸರಿ, ತಾವೂ ಕೂಡ ಶಸ್ತ್ರಸಜ್ಜಿತರಾಗಿ, ಭಯೋತ್ಪಾದನೆಯ ಮೂಲಕವೋ, ಅಥವಾ ಇನ್ನಿತರೇ ಹಿಂಸೆಯ, ಬಲ ಪ್ರಯೋಗದ ಮೂಲಕವಾದರೂ ಸರಿ, ಭಾರತದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಬೇಕು ಎನ್ನುವ ಚಳುವಳಿಯನ್ನು ಸಾಕಷ್ಟು ದೊಡ್ಡ ಮಟ್ಟದಲ್ಲೇ ಕಟ್ಟುತ್ತಿದ್ದರು. ಹಾಗೆ ವಿದೇಶದಲ್ಲಿ ನೆಲೆಸಿದ್ದ ಅತ್ಯಂತ ಪ್ರಭಾವಿ ನಾಯಕರು ಯಾರು ಅಂತ ನಾವು ನೋಡಿದರೆ, ಯುವ ಜನರಿಗೆ ಬಹಳಾ ಅಚ್ಚು ಮೆಚ್ಚು ಮತ್ತು ಆಕರ್ಷಕವಾಗಿದ್ದ ಸಾವರ್ಕರ್ ಅವರು ಇದ್ದರು. ಅವರು ಈ ಹಿಂಸಾತ್ಮಕ ಚಳುವಳಿಯನ್ನು ಪ್ರತಿಪಾದಿಸುತ್ತಿದ್ದ ಪ್ರಸಿದ್ದ ನಾಯಕರಾಗಿದ್ದರು ಮತ್ತು ಗಾಂಧಿ ಅವರು ದಕ್ಷಿಣ ಆಫ್ರಿಕಾದ ಭಾರತೀಯರ ಸ್ಥಿತಿಗತಿಗಳ ಬಗ್ಗೆ ಮಾತುಕತೆ ನಡೆಸಲು ಇಂಗ್ಲೆಂಡ್‌ಗೆ ಹೋದಾಗ 'ಇಂಡಿಯಾ ಹೌಸ್' ನಲ್ಲಿ ಉಳಿದುಕೊಂಡಿದ್ದ ಸಂದರ್ಭದಲ್ಲಿ ಅಲ್ಲಿಯೇ ಇದ್ದ ಕೃಷ್ಣವರ್ಮ ಮತ್ತು ಅವರು ಹೊರಡಿಸುತ್ತಿದ್ದ ಪತ್ರಿಕೆಯ ಪರಿಚಯವಾಗಿ ಅವರೆಲ್ಲ ಹಿಂಸಾತ್ಮಕ ಚಳುವಳಿಯನ್ನು ಪ್ರತಿಪಾದಿಸುತ್ತಿದ್ದುದು ಗಮನಕ್ಕೆ ಬರುತ್ತದೆ. ಅತ್ಯಂತ ಕೆಡುಕಾಗಿದ್ದಂತ ಇಂಗ್ಲೆಂಡ್‌ನ ವಸಾಹತುಶಾಹಿ ಆಡಳಿತದ ಅಂತ್ಯಕ್ಕೆ ಹಿಂಸಾತ್ಮಕ ಹೋರಾಟ ಅಗತ್ಯ ಎಂದು ವಾದಿಸುತ್ತಿದ್ದ ದೊಡ್ಡ ಒಂದು ಗುಂಪು ಅಸ್ತಿತ್ವದಲ್ಲಿರುವುದು ಗಮನಕ್ಕೆ ಬರುತ್ತದೆ. ಈ ಚಳುವಳಿಯ ಪರಿಣಾಮವಾಗಿ ಅಲ್ಲಲ್ಲಿ ಬ್ರಿಟಿಶ್ ಅಧಿಕಾರಿಗಳನ್ನು ಹತ್ಯೆ ಮಾಡುವುದೂ ನಡೆಯುತ್ತಿತ್ತು.

ಇದನ್ನೆಲ್ಲಾ ಆಳವಾಗಿ ಗಮನಿಸಿ ಅಧ್ಯಯನ ಮಾಡಿದ ಗಾಂಧಿ ಅವರು ಈ ಹಿಂಸಾತ್ಮಕವಾಗಿದ್ದಂಥ, ವ್ಯಕ್ತಿ ಕೇಂದ್ರಿತವಾದ ಭಯೋತ್ಪಾದನಾ ಚಟುವಟಿಕೆಗಳಿಂದ ಯಾವುದೇ ಪ್ರಯೋಜನವಿಲ್ಲ ಮತ್ತು ಅಂಥಹ ಹೋರಾಟದಿಂದ ಯಾವ ಪರಿಹಾರವೂ ಸಿಕ್ಕುವುದಿಲ್ಲವೆಂಬ ಸ್ಪಷ್ಟವಾದ ಅಭಿಪ್ರಾಯಕ್ಕೆ ಬಂದಿದ್ದರು. ವರ . 'ಹಿಂದ್ ಸ್ವರಾಜ್' ಕೃತಿ ಆರಂಭವಾಗುವುದೇ ಆ ಚರ್ಚೆಯಿಂದ. ಆ ಓದುಗ ಸಂಪಾದಕರಿಗೆ ಕೇಳುತ್ತಿರುವಂತ 'ಹಿಂಸಾತ್ಮಕವಾದ ಹೋರಾಟದ' ಬಗೆಗಿನ ಪ್ರಶ್ನೆಯಿಂದ. ಆದರೆ ಗಾಂಧಿ ಈ ಹಿಂಸೆಯಿಂದ ಯಾವುದೇ ಬದಲಾವಣೆ ಸಾಧ್ಯ ಇಲ್ಲ ಎಂಬ ಬಲವಾದ ನಿರ್ಧಾರಕ್ಕೆ ಬಂದಿದ್ದರು. ಹಾಗೂ ಆಗಲೇ ದಕ್ಷಿಣ ಆಫ್ರಿಕಾದಲ್ಲಿ ಅಹಿಂಸೆ ಮತ್ತು ಸತ್ಯಾಗ್ರಹದ ಮಾದರಿಗಳನ್ನು ಬಳಸಿ ಇದೇ ವಸಾಹತುಶಾಹಿ ಶಕ್ತಿಯ ವಿರುದ್ದ ಸಾಕಷ್ಟು ಯಶಸ್ವೀ ಹೋರಾಟವನ್ನು ನಡೆಸಿದ್ದರು. ಅಲಲದೆ ಈ ಅಹಿಂಸೆ ಮತ್ತು ಅಸಹಕಾರ ಎನ್ನುವುದು ಒಂದು ಪೊಲಿಟಿಕಲ್ ಸ್ಟ್ರಾಟಜಿ ಆಗಿ ಕೂಡ ಹೆಚ್ಚು ಪ್ರಬಲವಾದ ವಿಧಾನ ಎಂದು ಅವರು ಮನಗಂಡಿದ್ದರೆ ಹೊರತು ಹಿಂಸಾ ವಿಧಾನವನ್ನು ಯಾವ ರೀತಿಯಿಂದಲೂ ಒಪ್ಪಿರಲಿಲ್ಲ ಎನ್ನುವುದನ್ನು ಕಾಣಬಹುದು. ನಮಗೆ ಸ್ವಾತಂತ್ರ್ಯ ಬೇಕು ಎಂದರೆ ಅದು ಹಿಂಸೆಯ ಮೂಲಕ ಅಲ್ಲ ಅನ್ನುದರ ಬಗ್ಗೆ ಅವರು ಖಚಿತವಾಗಿದ್ದರು.

## ಹಿಂಸೆ ಆಧಾರಿತ ರಾಷ್ಟ್ರೀಯತೆ ಅಂದರೆ....

ಅಹಿಂಸೆಗೂ ರಾಷ್ಟ್ರೀಯತೆಗೂ ಏನು ಸಂಬಂಧ ಅಂತ ಕೇಳಿದ್ರೆ ಈ ಹಿಂಸೆಯ ಮೂಲಕ ಸ್ವಾತಂತ್ರ್ಯ ಪಡೆದುಕೊಳ್ಳುತ್ತೇವೆ ಎಂದು ಭಾವಿಸಿಕೊಂಡವರೂ ಕೂಡ ಒಂದು ರಾಷ್ಟ್ರದ ಆಕೃತಿಯನ್ನು ಕಟ್ಟಿಕೊಳ್ಳುತ್ತಿದ್ದರು. ಆ ಆಕೃತಿ ಎಂತಹದ್ದಾಗಿತ್ತು ಅಂತಂದ್ರೆ ಗಾಂಧಿ 'ಹಿಂದ್–ಸ್ವರಾಜ್'ನಲ್ಲಿ ಹೇಳುವ ಹಾಗೆ ಯಾರು ಈ ವಸಾಹತುಶಾಹಿ ಆಡಳಿತವನ್ನು ಹೊರಹಾಕಬೇಕು ಅಂತ ಕನಸು ಕಾಣುತ್ತ ಇದ್ದಾರೋ ಅವರೂ ಕೂಡ ಸ್ವಾತಂತ್ರ್ಯ ಗಳಿಸಿದ ಮೇಲೆ ಅಂತಹದ್ದೇ ಬಲಿಷ್ಠ ರಾಷ್ಟ್ರವನ್ನು ಕಟ್ಟಿಕೊಳ್ಳಬೇಕು ಎಂಬುದಾಗಿತ್ತು. ಈ ರಾಷ್ಟ್ರವೆಂಬ ಆಕೃತಿಯ ಪರಿಕಲ್ಪನೆಯಲ್ಲಿ ವಸಾಹತುಶಾಹಿಗಳಿಗೂ 'ಹಿಂಸೆಯ' ಮೂಲಕ ಹೋರಾಟವನ್ನು ಪ್ರತಿಪಾದಿಸುತ್ತಿದ್ದ ಗುಂಪಿಗೂ ಅಂತ ವ್ಯತ್ಯಾಸವೇನೂ ಇರಲಿಲ್ಲ. 'ರಾಷ್ಟ್ರ'ದ'ಬಗ್ಗೆ ವಸಾಹತುಶಾಹಿ ಸರ್ಕಾರವು ಹೊಂದಿದ್ದ ನಿಲುವಿಗೆ ಪರ್ಯಾಯವಾದ ಕಲ್ಪನೆಯನ್ನು ಈ ಉಗ್ರಗಾಮಿ

ರಾಷ್ಟ್ರೀಯತೆಯ ಹೋರಾಟಗಾರರು ಹೊಂದಿರಲಿಲ್ಲ ಎಂಬುದನ್ನು ಗಾಂಧಿ ಕಂಡುಕೊಂಡಿದ್ದರು. ಇದು ಗಾಂಧಿಗೆ ಒಪ್ಪಿಗೆ ಆಗಿರಲಿಲ್ಲ ಮತ್ತು ಹಾಗಾಗಿಯೇ ಅವರು 'ರಾಷ್ಟ್ರ' ಎಂಬ ಪದವನ್ನು ಹೆಚ್ಚು ಬಳಸದೆ ಇರಲಿಕ್ಕೆ ಕಾರಣವೂ ಇರಬಹುದು.

ಎರಡನೆಯಾದಾಗಿ ದಕ್ಷಿಣ ಆಫ್ರಿಕಾದಲ್ಲಿ ಯಾವ ಪರಿಯ ಭಾರತವನ್ನು ಗಾಂಧಿ ತಮ್ಮ ಸ್ವಂತ ಅನುಭವದಲ್ಲಿ ನೋಡಿದ್ದರು ಎಂಬುದನ್ನೂ ನಾವು ನೆನಪು ಮಾಡಿಕೊಳ್ಳಬೇಕು. ಅಲ್ಲಿ ತಮ್ಮ ಬಹು ಪ್ರಮುಖವಾದಂಥ ಇಪ್ಪತ್ತು ವರ್ಷವನ್ನು ಕಳೆದಿದ್ದ ಗಾಂಧಿ ಕಂಡಂಥ ಭಾರತ ಈಗಾಗಲೇ 'ಇಂಡಿಯಾ' ಅಂತ ಕರೆಸಿಕೊಳ್ಳಲು ಶುರುವಾಗಿದ್ದಂಥ ಭೌಗೋಳಿಕ ಭಾರತವಷ್ಟೇ ಅದಾಗಿರಲಿಲ್ಲ. 'ಇಂಡಿಯಾ'ದಲ್ಲಿ ಈಗಾಗಲೇ ಹಿಂದೂ ರಾಷ್ಟ್ರೀಯ ಪರಿಕಲ್ಪನೆ, ಸಾಂಸ್ಕೃತಿಕ ರಾಷ್ಟ್ರವಾದ, ಹಿಂದೂ ಧಾರ್ಮಿಕ ಸುಧಾರಣೆಯಿಂದ ರೂಪುಗೊಳ್ಳಬೇಕಾದಂಥ ರಾಷ್ಟ್ರ ಕಟ್ಟಬೇಕು ಎಂಬ ಅನೇಕ ರಾಷ್ಟ್ರೀಯ ಪರಿಕಲ್ಪನೆಗಳ ಬೀಜಗಳು ಬಿತ್ತಲ್ಪಟ್ಟು ಅವುಗಳು ಆಗಲೇ ಮೊಳಕೆ ಒಡೆದುಬಿಟ್ಟಿದ್ದವು. ಆದರೆ ದಕ್ಷಿಣ ಆಫ್ರಿಕಾದಲ್ಲಿ ಏನಾಗಿತ್ತು ಎಂದರೆ ಅಲ್ಲಿ ಗುಜರಾತಿಗಳಿದ್ದರು, ಮುಸಲ್ಮಾನರಿದ್ದರು, ತಮಿಳರು ಇದ್ದರು, ಹಿಂದೂಗಳು ಇದ್ದರು, ವ್ಯಾಪಾರಿಗಳಿದ್ದರು, ಬಾಲ ಕಾರ್ಮಿಕರಿದ್ದರು, ಕರಾರು ಕೂಲಿಗಳಿದ್ದರು, ಈ ಎಲ್ಲರೂ ಇದ್ದರಲ್ಲ! ಅದು ನಿಜವಾದ ಭಾರತವಾಗಿ ಕಂಡಿತ್ತು ಗಾಂಧಿಗೆ. ಅನೇಕ ಧರ್ಮಗಳ, ಅನೇಕ ಭಾಷೆ, ಸಂಸ್ಕೃತಿಗಳ ಸಮ್ಮಿಶ್ರಣದ ಮತ್ತು ಕೊಡುಕೊಂಡು ನಡೆಸುತ್ತಿರುವ ಬದುಕಿನ ಭಾರತವನ್ನು ಕಂಡಿದ್ದರಿಂದ ಅವರು ಎಂದೂ ಏಕ ಧರ್ಮದ, ಏಕ ಭಾಷೆಯ ಅಥವಾ ಸಂಸ್ಕೃತಿಯ ರಾಷ್ಟ್ರದ ನಿರ್ಮಾಣವನ್ನು ಒಪ್ಪಿರಲಿಲ್ಲ. ಅದು ಅವರ ಅನುಭವಕ್ಕೆ ಬಂದ ನಿಕವಾದ ಭಾರತವಾಗಿತ್ತು. ಅವರು ಅಲ್ಲಿ ಅನಿವಾಸಿ ದಕ್ಷಿಣ ಆಫ್ರಿಕಾದ ಜನರಲ್ಲಿ ಎಲ್ಲ ವಿಭಿನ್ನತೆ ಉಳ್ಳಂಥ, ಬಹುಮುಖಿಯಾದಂಥ ಜನಜೀವನವನ್ನು ಕಂಡಿದ್ದರಿಂದ ಅವರಿಗೆ ಏಕರೂಪದ ರಾಷ್ಟ್ರೀಯತೆ ಎನ್ನುವುದು ಒಪ್ಪಿಗೆ ಆಗಿರಲಿಲ್ಲ.

## ಪಶ್ಚಿಮದ ಆಧುನಿಕತೆ ಮತ್ತು ರಾಷ್ಟ್ರೀಯತೆ

ಮೂರನೆಯ ಅಂಶ ಏನಂತಂದ್ರೆ ರಾಷ್ಟ್ರ ಎನ್ನುವ ಚಿಂತನೆ ಭಾರತದಲ್ಲಿ ಪ್ರವೇಶ ಪಡೆದದ್ದು ಇಂಗ್ಲಿಷ್ ಮೂಲಕ, ಯುರೋಪ್ ಕೇಂದ್ರಿತವಾದ ರಾಜ್ಯಶಾಸ್ತ್ರದ ರಾಜಕೀಯ ಚಿಂತನೆಯ ಮೂಲಕ. 'ರಾಷ್ಟ್ರೀಯತೆ' ಎನ್ನುವುದು ಬಂದಾಗ ಒಬ್ಬೊಂಟಿಯಾಗಿ ಅದು ಬರಲಿಲ್ಲ. ಅದು ಆಧುನಿಕತೆಯ ಸಂಗಾತಿಯಾಗಿ ನಮ್ಮಲ್ಲಿ ಪ್ರವೇಶ ಮಾಡಿತು. ಬಹಳ ಸ್ಪಷ್ಟವಾಗಿರಬೇಕು ನಮಗೆ ಇದು. ಇಲ್ಲಿಯ ಶಿಕ್ಷಿತ ಮಧ್ಯಮ ವರ್ಗದ ಮೂಲಕ, ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿನ ಶಿಕ್ಷಣದಿಂದ ರೂಪುಗೊಂಡ, ಆಗತಾನೆ ಅಸ್ತಿತ್ವಕ್ಕೆ ಬಂದಂತಹ ಕಾಂಗ್ರೆಸ್ಸಿನ ಮೂಲಕವೂ ಇರಬಹುದು, ನಾವು ಏನು ಎಲೈಟ್ ವರ್ಗ ಅಂತ ಹೇಳ್ತೀವಲ್ಲ, ಇವರಿಗೆಲ್ಲ ರಾಷ್ಟ್ರೀಯತೆಯ ಚಿಂತನೆಯು ಪ್ರತ್ಯೇಕವಾಗಿ ಬಂದಿರಲಿಲ್ಲ. ಆಧುನಿಕತೆಯ ಸಂಗಾತಿಯಾಗಿ ಬಂದಿತ್ತು. ಮತ್ತು ಈ ಆಧುನಿಕತೆ 'ನಮ್ಮ ಆಧುನಿಕತೆ' ಆಗಿರಲ್ಲಿಲ್ಲ. ಅದು ಯುರೋಪಿಯನ್ ಕೇಂದ್ರಿತವಾದ ವಸಾಹತುಶಾಹಿ ಆಧುನಿಕತೆ ಆಗಿತ್ತು. ನಾವು ಗಾಂಧಿ ಅವರ ಮುಖ್ಯ ಪಠ್ಯವಾದ 'ಹಿಂದ್ ಸ್ವರಾಜ್'ನಲ್ಲಿ ನೋಡಿದರೆ ಅದರ ಇಡೀ ಚಿಂತನೆಯ ಅಧಾರ ಈ ಆಧುನಿಕತೆಯ ತಿರಸ್ಕರಣದಲ್ಲಿ ಇದೆ ಎಂದು ತಿಳಿಯುತ್ತದೆ. ಈ ತಿರಸ್ಕರಣೆ ಅತ್ಯಂತ ಆಳವಾದ ತಾತ್ವಿಕತೆಯಿಂದ ಕೂಡಿದ್ದು ಇಡೀ ಯುರೋಪ್ ಏನು ಹದಿನೇಳನೆಯ ಶತಮಾನದಿಂದ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನದ ಬಲದಿಂದ ಪ್ರಗತಿ, ಆಧುನಿಕತೆ ಎಂದರೆ ಏನು ಎನ್ನುವುದರ ಬಗ್ಗೆ ಪಡೆದುಕೊಂಡಿದ್ದ ತಿಳುವಳಿಕೆಯನ್ನೇ, ಅದರ ಬುಡದಿಂದಲೇ, ಗಾಂಧಿ ತಿರಸ್ಕರಿಸಿದ್ದರು. ಪ್ರಶ್ನೆ ಮಾಡಿದ್ದರು.

ಯಾವುದನ್ನು ಜ್ಞಾನ, ಅರಿವಿನ ಮಾರ್ಗ, ಲೋಕವನ್ನು ಹೇಗೆ ನೊಡ್ತೀವಿ, ಸಮಾಜವನ್ನು ಹೇಗೆ ನೋಡ್ಬೇಕು ಅನ್ನುವ ಮಾದರಿ ಏನು ಹದಿನೇಳನೆ ಶತಮಾನದಿಂದ ಕಟ್ಟಿಕೊಂಡ್ವೋ ಅದನ್ನೇ ಗಾಂಧಿ ಒಪ್ಪುತ್ತಿರಲಿಲ್ಲ. ಮೇಲ್ನೋಟಕ್ಕೆ ಯುರೋಪಿನ ಆಧುನಿಕತೆಯನ್ನ ತಿರಸ್ಕರಿಸುತ್ತಿರುವುದಲ್ಲ ಅದು. ಮಷೀನ್ ಅನ್ನು ಅಥವಾ ಯಂತ್ರ ನಾಗರೀಕತೆಯ ಒಳಹೊಕ್ಕು ನೋಡಿದರೆ ಅಲ್ಲೂ ಅವರು ಅದನ್ನು ತಿರಸ್ಕರಿಸುವುದು ಯಾಕೆಂದರೆ ಮನುಷ್ಯನ ಶ್ರಮದ ಬಗೆಗೆ ಇರುವ ಘನತೆ, ಗೌರವವನ್ನು ಅದು ನಾಶ ಮಾಡುತ್ತದೆ ಎನ್ನುವ ಕಾರಣಕ್ಕೆ ಒಂದು. ಎರಡನೆಯದಾಗಿ ಯಂತ್ರ ನಾಗರೀಕತೆಯು ತನ್ನ ಆಳದಲ್ಲಿ ಇಟ್ಟುಕೊಂಡಿರುವುದು ದುರಾಶೆಯನ್ನೇ. ಈ ದುರಾಸೆ ಎನ್ನುವುದು ಯಾವ ಅರ್ಥದಲ್ಲಿ ಅಂತಂದ್ರೆ, ಮನುಷ್ಯ ತನ್ನ ಸದ್ಯದ ತಲೆಮಾರಿಗೆ ಮಾತ್ರ ಈ ನಿಸರ್ಗ, ಪ್ರಕೃತಿ ಇದೆ ಎನ್ನುವ ಒಂದು ಪಾಪಿಷ್ಟವಾದಂಥ ಧೋರಣೆ ಏನು ಬೆಳೆಸಿಕೊಂಡನೋ ಅದರಿಂದಾಗಿ ಈ ಯಂತ್ರ ನಾಗರೀಕತೆ ಅನ್ನುವುದು ಹುಟ್ಟಿಕೊಂಡಿದೆ; ಆದ್ದರಿಂದ ಅದನ್ನು ನಾವು ತಿರಸ್ಕರಿಸಬೇಕು ಎನ್ನುವುದು ಅವರ ನಿಲುವಾಗಿತ್ತು. ಮತ್ತೆ ನಾನು ನನ್ನ ಮೊದಲಿನ ಮಾತುಗಳಿಗೆ ಬರುವುದಾದರೆ, ಆ ಕಾಲದಲ್ಲಿ ಭಾರತದಲ್ಲಿ ನಾವು ಬಯಸುತ್ತಿದ್ದಂಥ ರಾಷ್ಟ್ರ ನಿರ್ಮಾಣದ ಕಲ್ಪನೆಯು ಈ ಆಧುನಿಕತೆಯ ಬೆನ್ನ ಮೇಲೆ ಸವಾರಿ ಮಾಡಿಕೊಂಡೆ ಬರ್ತಾ ಇದೆ ಅನ್ನುವ ಅಂಶವನ್ನು ಗಾಂಧಿ ಮುನ್ನೋಡಿದ್ದರು.

ಯಾಕೆ ನಿಮಗೆ ಸ್ವಾತಂತ್ರ್ಯ ಬೇಕು, ಅದು ಬಂದ ಮೇಲೆ ಏನು ಮಾಡ್ತೀರಿ, ಎಂತಹ ಭಾರತವನ್ನು ಕಟ್ಟುತ್ತೀರಿ ಅಂದ್ರೆ ಬಹು ಪಾಲು ಅಭಿಪ್ರಾಯಗಳು ಎರಡು ರೀತಿಯದ್ದಾಗಿದ್ದವು. ಒಂದು ಗುಂಪು, ಇಲ್ಲ ನಾವು ಆಧುನಿಕ ರಾಷ್ಟ್ರವನ್ನು ಕಟ್ತೀವಿ ಅನ್ನುವ ಅಭಿಪ್ರಾಯ ಇಟ್ಟುಕೊಂಡವರು. ಈ ಆಧುನಿಕ ರಾಷ್ಟ್ರವೆಂದರೇನು ಅಂದ್ರೆ ಮತ್ತೆ ಈಗಾಗಲೇ ನಾವು ಮೇಲೆ ಚರ್ಚಿಸಿದಂಥ ಆಧುನಿಕ ನಾಗರೀಕತೆಯ ರಾಷ್ಟ್ರ. ಅಂದರೆ ಯಂತ್ರ ನಾಗರೀಕತೆ ಇರಬೇಕು, ಇಂಗ್ಲಿಷ್ ಶಿಕ್ಷಣ ಇರಬೇಕು, ನಗರೀಕರಣ ಇರಬೇಕು ಇತ್ಯಾದಿ.ಈ ರಾಷ್ಟ್ರದ ಕಲ್ಪನೆ ನಮಗೆ ಬಂದದ್ದು ನಮ್ಮ ಶಿಕ್ಷಿತ ಮಧ್ಯಮ ವರ್ಗದಿಂದ. ಈ ವರ್ಗ ಇಂತಹ ಸ್ವತಂತ್ರ ಭಾರತದ ಕಲ್ಪನೆಯನ್ನು ಬಹಳ ಗಟ್ಟಿಯಾಗಿ ನೆಚ್ಚಿಕೊಂಡಿದ್ದರು. ಇದನ್ನು ನಾವು ಆ ಕಾಲದ ಲೇಖನಗಳು, ಅಭಿಪ್ರಾಯಗಳು, ಚರ್ಚೆಗಳನ್ನ ನೋಡಿದರೆ ಬಹಳ ಸ್ಪಷ್ಟವಾಗುತ್ತದೆ. ಏನು ಒಂದೇ ಒಂದು ಆಕೃತಿಯನ್ನು ಇಟ್ಟುಕೊಂಡಿದ್ದರೆಂದರೆ ನಾವೂ ಇಂಗ್ಲಿಷರಂತೆ ಆಗಬೇಕು ಎನ್ನುವುದು. ಈಗಾಗಲೇ ಎಲ್ಲ ವಿದ್ವಾಂಸರು ಸರಿಯಾಗೇ ಗುರುತಿಸಿದ ಹಾಗೆ ಈ ರಾಷ್ಟ್ರ ಅನ್ನುವುದರ ಎರಡು ಮುಖಗಳನ್ನು ಈ ನಮ್ಮ ಮಧ್ಯಮ ವರ್ಗ ಒಪ್ಪಿಕೊಂಡಿತ್ತು. ಒಂದು, ಒಂದೇ ಮಾದರಿಯ ಪ್ರಗತಿ, ಆಧುನಿಕತೆ ಬೇಕು, ಅದಕ್ಕೋಸ್ಕರವೇ ನಮಗೆ ಒಂದು ರಾಷ್ಟ್ರ ಅನ್ನುವುದು ಬೇಕು ಎಂಬದು.

## 'ರಾಷ್ಟ;' ಕಲ್ಪನೆಯ ಇನ್ನೊಂದು ಮುಖ

ಇದರ ಒಳಸುಳಿಗಳು ಏನು ಅಂತ ನಾವು ಗಮನಿಸಬೇಕು. ಪ್ರಧಾನವಾಗಿ ಭಾರತವು ಕೃಷಿ ಪ್ರಧಾನ ನಾಗರೀಕತೆಯಾಗಿದ್ದರಿಂದ ಈ ಬಗೆಯ ಪ್ರಗತಿಯನ್ನು ತರುವುದಾದರೆ ಏನಾಗುತ್ತದೆ ಅದರ ಪರಿಣಾಮಗಳು, ಯಾವ ದಿಕ್ಕಿನಲ್ಲಿ ನಾವು ನಮ್ಮ ಆಯ್ಕೆಯನ್ನು ಮಾಡಿಕೊಳ್ಳಲು ಪ್ರಯತ್ನಪಟ್ವಿ ಅಂತ ನೋಡಿದರೆ ಅದರ ಅಪಾಯಗಳು ಬಹಳ ಸ್ಪಷ್ಟವಾಗೆ ಕಾಣುತ್ತವೆ. ಅದೇನಂತಂದ್ರೆ, ಇಂತಾ ಆಧುನಿಕತೆಕೆಗೆ ಏನು ಬೇಕಪ್ಪ ಅಂತಂದ್ರೆ ಒಂದು ಬಲಿಷ್ಠ ಕೇಂದ್ರ ಸರ್ಕಾರ ಆಲ್ವಾ? ಅದು ಯಾವ ರೀತಿಯ ಸರ್ವಾಧಿಕಾರವನ್ನು ಸೃಷ್ಟಿಸುತ್ತೆ ಅನ್ನುವುದನ್ನು ನಾವು ಇಂದಿನ ದಿನಗಳಲ್ಲಿ ಪ್ರತಿನಿತ್ಯ ಅನುಭವಿಸುತ್ತಾನೆ ಇದ್ದೀವಿ. ಇದರ ಬೀಜ ಆ ಕಾಲದ ರಾಷ್ಟ್ರ ನಿರ್ಮಾಣದ ಒಂದು ಚಿಂತನ ಧಾರೆಯಲ್ಲಿ ಬಿತ್ತಲಾಗಿತ್ತು ಅಂತ ಸ್ವಲ್ಪ ವಿಷದವಾಗೆ ಹೇಳ್ತಾ ಇದ್ದೀನಿ. ಆ ಆಧುನಿಕತೆ, ಅದಕ್ಕೆ ಬೇಕಾದಂಥ ಅರ್ಥ ವ್ಯವಸ್ಥೆ ಮತ್ತು ಆ ಅರ್ಥ ವ್ಯವಸ್ಥೆಗೆ ಬೇಕಾದಂಥ ರಾಜಕೀಯ ವ್ಯವಸ್ಥೆ, – ಅದು ಹ್ಯಾಗಿತ್ತಪ್ಪ ಅಂದ್ರೆ, ಗಾಂಧಿ ಕನಸಿದಂತಹ ಸ್ವಾಯತ್ತ ಗ್ರಾಮಗಳ–ತಮ್ಮ ತಮ್ಮಲ್ಲಿಯೇ ವಿರಾಮವಾಗಿಯೂ, ತಮ್ಮ ಸ್ವಭಾವದಲ್ಲಿಯೇ ಬೆಳೆಯ ತಕ್ಕಂತಹ– ಒಂದು ಒಕ್ಕೂಟವಾಗಿರಬೇಕು ಈ ರಾಷ್ಟ್ರದ ಕಲ್ಪನೆ ಎನ್ನುವುದಕ್ಕೆ ಸಂಪೂರ್ಣ ತದ್ವಿರುವುದ್ದವಾಗಿ, ಒಂದು ಕೆಂದ್ರೀಕೃತ, ಬಲಿಷ್ಟವಾದಂಥ, ಹೆಸರಿಗೆ ಪ್ರಜಾತಂತ್ರವನ್ನು ಅಳವಡಿಸಿಕೊಂಡಿದ್ದಂತಹ ಒಂದು ಅಧಿಕಾರ ಕೇಂದ್ರ ಇರಬೇಕು, ಅದು ತನ್ನ ಅರ್ಥವ್ಯವಸ್ಥೆಯನ್ನು ಜಾರಿಗೊಳಿಸುತ್ತಿರಬೇಕು ಅಂತ, ಏನು ಹೆಚ್ಚು ಕಮ್ಮಿ ನೆಹರು ಅವರು ಸ್ವಲ್ಪ ವ್ಯತ್ಯಾಸದೊಂದಿಗೆ, ಮಾರ್ಪಾಡುಗಳೊಂದಿಗೆ ಒಪ್ಪಿಕೊಂಡಂತ ಆ ಪರ್ಯಾಯ ಅರ್ಥವ್ಯವಸ್ಥೆ ಇದೆಯೋ ಗಾಂಧಿ ಆ ಕಲ್ಪನೆಯ ರಾಷ್ಟ್ರವನ್ನು ಮತ್ತು ಆಧುನಿಕತೆಯನ್ನೂ ಸಂಪೂರ್ಣವಾಗಿ ತಿರಸ್ಕರಿಸಿದ್ದರು.

ಗಾಂಧಿ ತಿರಸ್ಕರಿಸಿದ 'ರಾಷ್ಟ್ರ' ಎನ್ನುವುದರ ಇನ್ನೊಂದು ಮುಖ ಯಾವುದೆಂದರೆ ಬಹುಸಂಖ್ಯಾತವಾದ(ಮೆಜಾರಿಟೋರಿಯನ್)ವಾಗಬಹುದಾದಂಥ ಧಾರ್ಮಿಕ ರಾಷ್ಟ್ರೀಯತೆ. ನೀವು ನೋಡಬಹುದು, ಈ ಇಂಗ್ಲಿಷ್ ಶಿಕ್ಷಣ ಪದೆದಂಥಹ ಮಧ್ಯಮ ವರ್ಗದಲ್ಲಿ ಇನ್ನೊಂದು ಒಲವು ಏನು ಹುಟ್ಟಿಕೊಂಡಿತು ಎಂದರೆ 'ಪುನರುತ್ಥಾನ' (ರಿವೈವಲಿಸ್ತ್) ಎನ್ನಬಹುದಾದಂಥ 'ತಮ್ಮದು ಭವ್ಯ ಪರಂಪರೆ ಮತ್ತು ನಾಗರಿಕತೆಯಾಗಿದ್ದು ಪೂರ್ವದ ಮಹಾಪುರುಷರೆಲ್ಲ ನಮ್ಮ ನೆನಪಿನಲ್ಲಿ ಇದ್ದಾರೆ ಮತ್ತು ಅಂತಹ ಪರಂಪರೆಯನ್ನು ಅದನ್ನು ಮರುಸ್ಥಾಪನೆಗೊಳಿಸುವ ಹಂಬಲ ಮತ್ತು ಹೋರಾಟದ ಈ 'ಧಾರ್ಮಿಕ ರಾಷ್ಟ್ರೀಯತೆ' ಎನ್ನುವುದು.

## ಧರ್ಮ, ಇತಿಹಾಸ ಮತ್ತು ಆಧುನಿಕತೆ ಸೇರಿದರೆ...

ಗಾಂಧಿ ಇಷ್ಟೊಂದು ಪರ್ಯಾಯಗಳನ್ನು ಹುಡುಕುತ್ತಿದ್ದಂಥ ಸಮಯದಲ್ಲೇ ,ಇದನ್ನು ಮರೆಯಬಾರದು, ಸ್ವಾತಂತ್ರ್ಯ ಸಂಗ್ರಾಮದ ಒಂದು ಪ್ರಧಾನ ಚಿಂತನೆಯಾಗಿಯೇ, ಹಿಂದೂ ಮಹಾಸಭಾ, ರಾಷ್ಟ್ರೀಯ ಸ್ವಯಂ ಸೇವ್ವಕ ಸಂಘದಂತಹ ಸಂಸ್ಥೆಗಳು ಹುಟ್ಟಿಕೊಳ್ಳಲು ಕಾರಣವಾದಂಥ, ಈ ಒಂದು ಬಗೆಯ ಮತೀಯ ರಾಷ್ಟ್ರೀಯತೆಯೂ ಪ್ರಬಲವಾಗಿಯೇ ಬೆಳೆಯುತ್ತಿತ್ತು. ಸಾಮಾನ್ಯವಾಗಿ ಇದರ ಬಗ್ಗೆ ಬರೆದಂಥ ಅಂದಿನ ವಿದ್ವಾಂಸರು ಬಂಕಿಮಚಂದ್ರರನ್ನು, ಅವರ ಆನಂದಮಠ ಕಾದಂಬರಿಯನ್ನು ಒಂದು ಸಂಕೇತವಾಗಿ ಪ್ರಸ್ತಾಪಿಸುತ್ತಾರೆ. ಯಾಕೆ? ಬಂಕಿಮ್ ಮೊದಲು ಇಂಗ್ಲಿಷ್‌ನಲ್ಲಿ ಬರೆದು ನಂತರ ಆಧುನಿಕ ಬೆಂಗಾಲಿ ಗದ್ಯವನ್ನು ಕಟ್ಟಿಕೊಟ್ಟು ಬರೆದಿರುವಂಥ ಈ ಕಾದಂಬರಿಯಲ್ಲಿ ಮತ್ತು ಲೇಖನಗಳಲ್ಲಿ ಅವರು ಏನು

ಹೇಳುತ್ತಾರೆ? ನೋಡಿ, ಗಾಂಧಿ ಯಾವ ರಾಷ್ಟ್ರೀಯತೆಯನ್ನು ತ್ಯಜಿಸಿದರೋ, ಅದು ಬಂಕಿಮರಲ್ಲಿ ಹೇಗೆ ವ್ಯಕ್ತವಾಗಿತ್ತು ಅಂತಂದ್ರೆ, ಮೊದಲನೆಯದಾಗಿ, ಈ ಬಗೆಯ ರಾಷ್ಟ್ರೀಯತೆ ಇತಿಹಾಸದ ಆಧಾರಿತವಾಗಿರುತ್ತದೆ. ಈ ಇತಿಹಾಸ ಹೇಗೆ ತಿಳಿಯಲಾಗಿತ್ತು ಅಂದ್ರೆ, ನಮಗೆ ಒಂದು ಘನವಾದ, ಭವ್ಯವಾದಂಥ ಒಂದು ಪರಂಪರೆ ಇತ್ತು. ಇದನ್ನು ನಾಶ ಮಾಡಿದ ಇಬ್ಬರು ಶತ್ರುಗಳಲ್ಲಿ ಮೊದಲನೆಯ ಮತ್ತು ಬಹುದೊಡ್ಡ ಶತ್ರು ಮುಸಲ್ಮಾನರು ಮತ್ತು ಎರಡನೆಯವರು ಇಂಗ್ಲಿಷರು ಅಂತ. ಇದು ಬಂಕಿಮಚಂದ್ರರ ಕಾದಂಬರಿಯನ್ನೇ ಮನಸ್ಸಿನಲ್ಲಿ ಇಟ್ಟುಕೊಂಡು ಹೇಳ್ತಾ ಇರುವಂತಾದ್ದು. ಈ ಕಾದಂಬರಿಯ ಕೊನೆಯಲ್ಲಿ ಇವರ ಕ್ರಾಂತಿಯ ಹೋರಾಟಕ್ಕೆ ದೊಡ್ಡ ಶತ್ರುವಾಗಿ ಕಾಣುವುದು ಬ್ರಿಟಿಷರಲ್ಲ, ಮುಸಲ್ಮಾನರು. ಇಂಥಾ ಒಂದು ಇತಿಹಾಸ ಕಥನ ಇದೆಯಲ್ಲ ಏನು ಈ ಭವ್ಯವಾದ ಪರಂಪರೆಯನ್ನು ಈ ನುಸುಳುಕೋರರು ನಾಶ ಮಾಡಿದ್ರು, ಆ ಇತಿಹಾಸವನ್ನು ನಾವು ಮತ್ತೆ ಕಟ್ಟಬೇಕಾಗಿದೆ, ಪುನರುಜ್ಜೀವನಗೊಳಿಸಬೇಕಾಗಿದೆ ಅನ್ನುವಂಥ ಒಂದು ಮೆಜಾರಿಟೇರಿಯನ್ ಎನ್ನಬಹುದಾದಂಥ, ಧರ್ಮ ಕೇಂದ್ರಿತವಾದಂಥ–ಇದೊಂದು ವಿಚಿತ್ರ, ಯಾಕೆಂದ್ರೆ ಇದು ಬರೀ ಧರ್ಮ ಕೇಂದ್ರಿತವಲ್ಲ, ಬಹಳ ಆಧುನಿಕವೂ ಆಗಿರುತ್ತದೆ–ರಾಜಕೀಯ ಚಿತ್ರವನ್ನು ಕಟ್ಟಿಕೊಡುತ್ತಿದ್ದರು. ಇದನ್ನೂ ಗಾಂಧಿ ತಿರಸ್ಕರಿಸಿದ್ದರು.

ಯಾಕೆ ಗಾಂಧಿಗೆ ಹಿಂದೂ–ಮುಸ್ಲಿಂ ಐಕ್ಯತೆ ಅಷ್ಟು ಮುಖ್ಯವಾಗಿತ್ತು? ನಿಮಗೆ ನೆನಪಿರಬಹುದು, ಪದೇ ಪದೇ ಅವರು ಏನು ಹೇಳುತ್ತಿದ್ದರು ಅಂದರೆ, ಹಿಂದೂ–ಮುಸ್ಲಿಂ ಐಕ್ಯತೆ ಇಲ್ಲದೆ ಸ್ವರಾಜ್ಯ ಸಾಧ್ಯವಿಲ್ಲ ಎಂದು. ಬೇರೆ ಏನಾಗದೆ ಇದ್ದರೂ ಸ್ವರಾಜ್ಯ ಗಳಿಸಬಹುದೇನೋ, ಆದರೆ ಈ ಐಕ್ಯತೆ ಇಲ್ಲದೆ ಮಾತ್ರ ಅದು ಸಾಧ್ಯವಿಲ್ಲ ಎಂದು ಕೊನೆವರೆಗೂ ಹೇಳುತ್ತಿದ್ದರು. ಯಾಕಂದ್ರೆ ಈಗಾಗಲೇ ನಾನು ಹೇಳಿದ ಹಾಗೆ ಒಂದು ಬಹುಮುಖಿಯಾದ, ಬಹುತ್ವವುಳ್ಳ, ಬಹು ಧರ್ಮಗಳು ಇರುವಂಥ ಒಂದು ಸಮುದಾಯವನ್ನು ಅವರು ಕಂಡಿದ್ದರೇ ಹೊರತು ಒಂದು ಏಕರೂಪವಾದ ರಾಷ್ಟ್ರವನ್ನಲ್ಲ ಎನ್ನುವುದು ಕಂಡುಬರುತ್ತದೆ.

### ಗಾಂಧಿಗೆ ವರ್ತಮಾನ ಮುಖ್ಯವಾಗಿತ್ತು ಏಕೆಂದರೆ....

ಜೊತೆಗೇನೆ ನೀವು ನೆನಪು ಮಾಡಿಕೊಳ್ಳಿ, ಅದು ಇತಿಹಾಸ ಕೇಂದ್ರಿತವಾದ ಒಂದು ರಾಷ್ಟ್ರಕಲ್ಪನೆ ಅಂತ ಹೇಳ್ದೆ. ಇತಿಹಾಸವನ್ನು ಜೀವಂತಗೊಳಿಸಿಕೊಂಡು ಹಳೆಯ ನಾಯಕರನ್ನು ಆರಿಸಿಕೊಂಡು ಅವರಿಗೆ ಹೊಸ ಹೊಸ ವೇಷ ರೂಪಗಳನ್ನು ತೊಡಿಸುವ ರಾಷ್ಟ್ರೀಯತೆ ಇದು. ಆದರೆ ನಾನು ಈ ಶಿಬಿರಾರ್ಥಿಗಳಿಗೆ ಕೇಳ್ತಾ ಇದ್ದೀನಿ, ಒಂದು ನಿಮಿಷ ಯೋಚನೆ ಮಾಡಿ ಹೇಳಿ, ಗಾಂಧಿ ಇತಿಹಾಸದ ಬಗ್ಗೆ ಏನಾದ್ರೂ ಬರೆದಿದ್ದಾರ? ಏನೂ ಇಲ್ಲ, ಅಲ್ವಾ? ಯಾಕಂದ್ರೆ ಗಾಂಧಿಯವರಲ್ಲಿ ಎರಡು ದೊಡ್ಡ ಗೈರುಹಾಜರು ಪದಗಳೆಂದರೆ ರಾಷ್ಟ್ರ ಮತ್ತು ಚರಿತ್ರೆ. ಅವುಗಳಲ್ಲಿ ಅವರಿಗೆ ಆಸಕ್ತಿನೇ ಇರಲಿಲ್ಲ. ಯಾಕಂದ್ರೆ ಅವರು ಅದರ ಪರಿಣಾಮಗಳನ್ನು ಕಂಡಿದ್ದರು. ಅವರು ನಮ್ಮ ಸಮಕಾಲೀನ ಸ್ಥಿತಿಯನ್ನು ಇಟ್ಟುಕೊಂಡು ಗತಕಾಲದ ಸಂದರ್ಭಗಳನ್ನು ಪ್ರಶ್ನೆ ಮಾಡುವುದು ತಪ್ಪು, ಹಾಗೇನೆ ಗತಕಾಲವನ್ನು ಇಟ್ಟುಕೊಂಡು ಇವತ್ತಿನ ಸ್ಥಿತಿಯನ್ನು ವಿಕೃತವಾಗಿ ನೋಡುವುದೂ ತಪ್ಪು ಅಂತ ಗಾಂಧಿ ತಿಳಿದಿದ್ದರು.

ತಾತ್ವಿಕವಾಗಿ ನೋಡಿದರೂ ಇದು ಸರಿ ಎನಿಸುತ್ತದೆ. ಗಾಂಧಿಗೆ ವರ್ತಮಾನ ಬಹಳ ಮುಖ್ಯವಾಗಿತ್ತು. ಇಂದಿನ ಐಕ್ಯತೆ, ನೈತಿಕತೆ, ಈ ಕ್ಷಣದ ಬದುಕು ಮತ್ತು ಸತ್ಯ ಮುಖ್ಯವಾಗಿತ್ತು. ಇಂದಿನ ಯುಗಧರ್ಮ ಅವರಿಗೆ ಮುಖ್ಯವಾಗಿತ್ತೇ ಹೊರತು 'ಗತ'ದ ಬಗ್ಗೆ ಹೆಚ್ಚು ಆಸಕ್ತಿ ಇರಲಿಲ್ಲ. ನಿಮ್ಮೆಲ್ಲರ ಗಮನವನ್ನ ನಾನು ಹೆಚ್ಚು ಇಂದು ನಾವು ಎದುರಿಸುತ್ತಿರುವ ರಾಷ್ಟ್ರೀಯತೆಯ ಬಿಕ್ಕಟ್ಟುಗಳ ಕಡೆಗೇನೇ ಸೆಳೆಯಲು ಪ್ರಯತ್ನಿಸುತ್ತಿದ್ದೇನೆ. ನಮ್ಮ ಇಂದಿನ ರಾಷ್ಟ್ರೀಯತೆಯ ಬಿಕ್ಕಟ್ಟು ಏನೆಂದರೆ ದಿನ ನಿತ್ಯವೂ ನಮ್ಮ ಚರಿತ್ರೆಯ ಮೇಲೆ ನಡೆಯುತ್ತಿರುವಂಥ ಸಾಮೂಹಿಕ ಅತ್ಯಾಚಾರ. ಗ್ಯಾಂಗ್ ರೇಪ್. ಅದು ಮಹಿಳೆಯರ ಮೇಲೆ ಮಾತ್ರ ನಡೆಯುತ್ತಿರುವುದಲ್ಲ. ನಮ್ಮ ಚರಿತ್ರೆಯ ಮೇಲೂ ನಡೆಯುತ್ತಿದೆ ಅನ್ನಿಸುತ್ತೆ. ಅದರ, ಅಂದರೆ ಆ ಅತ್ಯಾಚಾರಕ್ಕೊಳಗಾದ ಚರಿತ್ರೆಯ ಆಧಾರದ ಮೇಲೆ ಕೋಮುವಾದವನ್ನು ಕಟ್ಟುವಂತದ್ದು. ಇದು ಒಂದು ಬಗೆಯ ರಾಷ್ಟ್ರೀಯತೆಯ ಬಿಕ್ಕಟ್ಟು.. ಗಾಂಧಿ ಯಾವುದು ನಮಗೆ ಸಲ್ಲದು, ತೊಂದರೆ ಕೊಡುವಂತದ್ದು ಅಂತ ವಿರೋಧಿಸುತ್ತಿದ್ದರೋ, ಅದಕ್ಕೆ ಪರ್ಯಾಯವನ್ನು ಹುಡುಕುತ್ತಿದ್ದರೋ ಅದೇ ಈಗ ರಾರಾಜಿಸುತ್ತಿರುವುದು. ಎರಡನೆಯದಾಗಿ ಒಂದೇ ಬಗೆಯ ಆಧುನಿಕತೆಯ, ಪ್ರಗತಿಯ ಮಾದರಿಯನ್ನು ಸ್ಥಾಪಿಸಿಕೊಳ್ಳುತ್ತಿರುವುದು.

ಮೂರನೆಯದಾಗಿ ಗತ ಯಾವುದು, ವರ್ತಮಾನ ಯಾವುದು ಎನ್ನುವ ಅರಿವನ್ನು ಇಟ್ಟುಕೊಳ್ಳದೆ ಕಟ್ಟುತ್ತಿರುವ ಒಂದು ಭ್ರಮಾತ್ಮಕವಾದ ರಾಷ್ಟ್ರೀಯತೆಯ ಪರಿಕಲ್ಪನೆ. ಆಶ್ಚರ್ಯ ಆಗುತ್ತಲ್ವ? ಯಾವುದೋ ಒಂದು ಕಾಲದ, ಯಾವುದೋ ಒಂದು ಸಂಪ್ರದಾಯದ ರೀತಿನೀತಿಗಳನ್ನು ಇಂದಿನ ದಿನಕ್ಕೆ ಹೇರುವ ಹೆಸರಿನಲ್ಲಿ ಜೀವಂತ ಮನುಷ್ಯರು ತಮ್ಮ ಕೈಯಿಂದಲೇ ಇನ್ನೊಬ್ಬರನ್ನು ಕೊಲ್ಲುತ್ತಿರುವುದನ್ನು, ಲಿಂಚ್ ಮಾಡುತ್ತಾ ಇರುವುದನ್ನು ನಾವು ನೋಡುತ್ತಿದ್ದೇವೆ. ಈಗಲೂ ಕೂಡ ನನ್ನ ಕಲ್ಪನೆಗೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಬೀದಿಯಲ್ಲಿ ಹೋಗುತ್ತಿದ್ದ ಒಬ್ಬ ಮನುಷ್ಯನನ್ನು ನಿಮ್ಮ ಕೈಯಿಂದ ಕೊಂದು ಮನೆಗೆ ಹೋಗಿ ಅದೇ ಕೈಯಿಂದ ನಿಮ್ಮ ಮಗುವನ್ನು ಎತ್ತಿಕೊಳ್ಳೋದಕ್ಕೆ ಹೇಗೆ ಸಾಧ್ಯ ಅಂತ! ಅದೇ ಮೈಯಲ್ಲಿ ನಿಮ್ಮ ಹೆಂಡತಿ ಜೊತೆಗೆ ಹೇಗೆ ಮಲಗುತ್ತಾರೆ! ಕೇಳ್ಬೇಕಲ್ವ ಈ ಪ್ರಶ್ನೆಗಳನ್ನೆಲ್ಲಾ?

ಇದು ನನ್ನನ್ನ ಬಹು ಮುಖ್ಯ ವಿಷಯಕ್ಕೆ ತರ್ತಾ ಇದೆ. ಗಾಂಧಿ ತಮ್ಮ ಕಾಲದಲ್ಲಿ ಪ್ರಚಲಿತದಲ್ಲಿದ್ದಂಥ ರಾಷ್ಟ್ರೀಯತೆಯ ಪರಿಕಲ್ಪನೆಯ ಬಗ್ಗೆ ಇಷ್ಟು ಕ್ರಿಟಿಕಲ್ ಆಗಿ ಇದ್ದದ್ದು ಯಾಕೆ ಅಂತಂದ್ರೆ ಅವರು ವ್ಯಕ್ತಿಯ ನೈತಿಕ ಸ್ವಾತಂತ್ರ್ಯವನ್ನ ಸಂಪೂರ್ಣ ನಂಬಿದ್ದರು. ಇದರ ವಿಷಯವಾಗಿ ಅವರು ಯಾವ ಸಮಜಾಯಿಶಿಗಳನ್ನೂ ಒಪ್ಪುತ್ತಿರಲಿಲ್ಲ. ಅವರುವರ ಒತ್ತಡದಿಂದ ಆಯ್ತು, ಕಾಲದ ಒತ್ತಡದಿಂದ ಅಥವಾ ವರ್ಗಗಳ ಒತ್ತಡದಿಂದ ಆಯ್ತು ಎನ್ನುವ ಯಾವ ಸಬೂಬುಗಳನ್ನೂ ಅವರು ಒಪ್ಪುತ್ತಿರಲಿಲ್ಲ. ಅವರು ಏನು ಹೇಳುತ್ತಿದ್ದರೆಂದರೆ ಈ ಕ್ಷಣದಲ್ಲಿ ಇಂತಾ ಆಯ್ಕೆ ಮಾಡೋದಕ್ಕೆ ವ್ಯಕ್ತಿಗೆ ನೂರಕ್ಕೆ ನೂರು ನೈತಿಕ ಜವಾಬ್ದಾರಿನೂ ಇರತ್ತೆ, ಹಾಗೆ ಸ್ವಾತಂತ್ರ್ಯವೂ ಇರುತ್ತೆ ಅಂತ. ಇದು ಒಂದು ತರಾ ಅಸ್ತಿತ್ವವಾದದ ತರಾ ಕೇಳಿಸಬಹುದು ನಿಮಗೆ, ಆದರೆ ಅದು ಹಾಗಲ್ಲ.

### ಎರಡೇ ರಾಷ್ಟ್ರ ಏಕೆ? ಇಪ್ಪತ್ತು ಏಕಾಗಬಾರದು?

ಇದು ಅವರು ನೋಡುವ ದೃಷ್ಟಿ ಆಗಿದ್ದರಿಂದ, ಅವರಿಗೆ ಎಲ್ಲವೂ ಕೂಡ ವ್ಯಕ್ತಿಗಳು ಅವರವರೆ ಸೇರಿ ಮಾಡಿಕೊಂಡ ಸಮುದಾಯವೇ ಹೊರತು ಅದನ್ನು ಮೀರಿದ ಎಲ್ಲವೂ ಕೂಡ ಅಪಾಯಕಾರಿಯಾಗಿಯೇ ಕಾಣುತ್ತಿತ್ತು. ಜಿನ್ನಾ ಅವರು ಎರಡು ರಾಷ್ಟ್ರದ ಪರಿಕಲ್ಪನೆಯನ್ನು ತೇಲಿಬಿಟ್ಟು ರಾಜಕಾರಣವನ್ನು ಮಾಡುತ್ತಿದ್ದಾಗ ಗಾಂಧಿ ಅವರ 'ಹರಿಜನ್' ಪತ್ರಿಕೆಯಲ್ಲಿ ಜಿನ್ನಾರನ್ನು ಪ್ರಶ್ನಿಸಿದ ರೀತಿ ನೋಡಿ. ಅವರು ಏನು ಕೇಳಿದ್ರು ಅಂದ್ರೆ ಹಿಂದೂ ಮತ್ತು ಮುಸ್ಲಿಂ ಮಾತ್ರ ರಾಷ್ಟ್ರಗಳು ್ರ ಹೇಗಾಗುತ್ತದೆ? ಇಪ್ಪತ್ತು ರಾಷ್ಟ್ರಗಳು ಯಾಕೆ ಆಗಬಾರದು? ಇಲ್ಲಿ ಸಿಖ್, ಬೌದ್ಧ, ಜೈನ, ಪಾರ್ಸಿ ಇನ್ನಿತರೇ ಅನೇಕ ಧರ್ಮ ಮತ್ತು ನಂಬಿಕೆಗಳು ಪಾಲಿಸುತ್ತಿರುವವರು ಇದ್ದಾರೆ. ಒಂದೇ ನೀರು ಮತ್ತು ವಾಯುವನ್ನು ಸೇವಿಸುತ್ತಿರುವ ಪಂಜಾಬಿನ ಒಬ್ಬ ಸಿಖ್ ಮತ್ತು ಹಿಂದುವೋ, ಮುಸಲ್ಮಾನನೋ ಬೇರೆ ಬೇರೆ ಹೇಗಾಗುತ್ತಾರೆ? ಎನ್ನುವ ವಿಚಾರವನ್ನು ಅವರು ಪ್ರತಿಪಾದನೆ ಮಾಡುತ್ತಿದ್ದರು. ಕೆಲವರು ಗಾಂಧಿ ಅವರನ್ನು ಅರಾಜಕತಾವಾದಿ ಅಂತಲೂ ಕರೆದಿದ್ದರು. ಆದರೆ ಬಹು ಮುಖ್ಯವಾದ ವಿಚಾರವನ್ನು ಅವರು ಮಂಡಿಸುತ್ತಿದ್ದುದೇನೆಂದರೆ ಸ್ಟೇಟ್ ಅಥವಾ ಪ್ರಭುತ್ವ ಎನ್ನುವುದು ಇಲ್ಲದೇ ಇದ್ದರೇ ಒಳ್ಳೆಯದು ಅಥವಾ ಅದು ಅತ್ಯಂತ ಕಡಿಮೆ ಇರಬೇಕು. ಕ್ರಮೇಣ ಈ ಚಿಂತನೆಯಲ್ಲಿ ಸ್ವಲ್ಪ ಬದಲಾವಣೆ ಮಾಡಿಕೊಂಡರು ಎನ್ನುವುದೂ ನಿಜ. ಆದರೆ ಗಮನಿಸಿ, ಗಾಂಧೀ ತಮ್ಮ ವಿಚಾರಗಳಲ್ಲಿ ಎಷ್ಟು ಸೂಕ್ಷ್ಮವಾಗಿದ್ದರು ಎಂದರೆ ನಮ್ಮ ರಾಷ್ಟ್ರವು ರಾಜ್ಯಗಳ ಒಕ್ಕೂಟವಾಗಿರಬೇಕೆಂಬ ಕಲ್ಪನೆಯನ್ನು ಸಂವಿಧಾನದ ಮೂಲಕ ಹೇರುವುದು ಬೇಡ ಅಂತ ಹೇಳುತ್ತಾರೆ. ರಾಜ್ಯಗಳೇ ತಮ್ಮ ತಮ್ಮ ಗೆಳೆತನದಿಂದ, ಸ್ನೇಹದಿಂದ ಒಂದಾಗಬೇಕೆ ಹೊರತು ಸಂವಿಧಾನದ ಕಾನೂನಿನ ಮೂಲಕ ಅದನ್ನು ಕಡ್ಡಾಯಗೊಳಿಸಬಾರದು ಎಂದು ಹೇಳುತ್ತಿದ್ದರು.

ಅಂದರೆ ಅವರ ಮೂಲಭೂತ ವಿಚಾರ ಏನಿತ್ತು ಎಂದರೆ ಅಂತಿಮವಾಗಿರುವುದು ಮನುಷ್ಯನ ವೈಯಕ್ತಿಕ ನೈತಿಕ ಆಯ್ಕೆ. ಅದು ಬಿಟ್ಟರೆ ಬೇರಾವುದು ಅಲ್ಲ. ಬೇರೆ ಎಲ್ಲಾ ರಾಜಕೀಯಗಳು ಏನು ಮಾಡ್ತಾವೆ ಅಂತಂದ್ರೆ ಸಬೂಬುಗಳನ್ನು ಕೊಡ್ತಾ ಹೋಗುತ್ತವೆ. ಚರಿತ್ರೆಯಿಂದ ಹೀಗಾಯಿತು, ವರ್ಗದಿಂದ ಹಿಂಗಾಯ್ತು, ಜಾತೀಯತೆಯಿಂದ ಹಿಂಗಾಯ್ತು ಇತ್ಯಾದಿ. ಇದಕ್ಕೆ ಗಾಂಧೀ ಏನು ಹೇಳ್ತಾರೆ ಅಂದ್ರೆ ಇವೆಲ್ಲವೂ ಇರಬಹುದು, ಆದರೆ ನೀನು ಮನುಷ್ಯನಾಗಿದ್ರೆ ಇವೆಲ್ಲವುಗಳಿಗೂ ಇಲ್ಲ ಎನ್ನಬಹುದು ಅಂತ. ಆದರೆ ಅವರಿಗೆ ರಾಜಕೀಯವೂ ಗೊತ್ತಿದ್ದರಿಂದ–ಅವರ ಬಗ್ಗೆ ಒಂದು ಅತ್ಯುತ್ತಮ ಮಾತಿದೆ; There have been saints and saints in India. But Ganndhi is the only saint who lived in slum pf politics' ಈ ತಿಳುವಳಿಕೆ ಇದ್ದಂತಹ ಗಾಂಧಿ ನಾನು ಒಬ್ಬ ದಂತಗೋಪುರದ ಮೇಲೆ ಕೂತ ಗಾಂಧಿ ಬಗ್ಗೆ ಮಾತನಾಡ್ತಿಲ್ಲ, ಒಬ್ಬ ಸ್ಟ್ರಟಿಜಿಸ್ಟ್ ಆದ ಗಾಂಧಿ ಏನು ಮಾಡಲು ಪ್ರಯತ್ನ ಪಟ್ಟರೆಂದ್ರೆ ಎಷ್ಟು ಸಾಧ್ಯವೋ ಅಷ್ಟು ಅಧಿಕಾರದ ಕಡೆಗೆ ಚಲಿಸುತ್ತಿರುವ ರಾಜಕೀಯ ನಡೆಗಳನ್ನು ನಿಲ್ಲಿಸಬೇಕು ಅಂತ.

ಈ ಕಾಂಗ್ರೆಸ್ ಪಕ್ಷ ಜನರನ್ನು ಒಂದುಗೂಡಿಸಿದೆ, ಸ್ವಾತಂತ್ರ್ಯದ ಅಭಿಲಾಷೆಯನ್ನು ಸಾಮಾನ್ಯ ಜನರ ಹತ್ತಿರಕ್ಕೆ ಕರೆದುಕೊಂಡು ಹೋಗಿದೆ, ಮಹಿಳೆಯರವರೆಗೂ ತಲುಪಿದೆ ಹಾಗು ಅವರನ್ನೂ ಒಳಗೊಂಡಿದೆ. ಆದರೆ ಈಗ ಅದರ ಕೆಲಸ ಮುಗಿಯಬೇಕು. ೧೯೩೭ರಿಂದಲೇ, ಹೋಂ ರೂಲ್ ಬಂದ ಸಮಯದಿಂದಲೇ, ಕಾಂಗ್ರೆಸ್ ಪಕ್ಷವು ಇನ್ನು ಪಕ್ಷ ರಾಜಕಾರಣಕ್ಕೆ ಇಳಿಯಬಾರದು, ಅದೊಂದು ಸ್ವಯಂಸೇವ ಸಂಸ್ಥೆಯಾಗಿ ಉಳಿಯಲಿ ಎಂದು ಹೇಳಲು ಪ್ರಾರಂಭಿಸಿದರು.

ಯಾಕಂದ್ರೆ ಗೊತ್ತಿತ್ತು ಅವರಿಗೆ, ಸಂಸ್ಥೀಕರಣ ಆದ್ರೆ ಏನು ಅಪಾಯಾಗುತ್ತೆ ಅಂತ. ಸಂವಿಧಾನದ ಬಗ್ಗೆಯೂ ಕೂಡ, ಅವರು ಹೆಚ್ಚು ವಿವರವಾಗಿ ಹೇಳದೇನೆ ಇದ್ರೂ ಕೂಡ, ಅವರ ಕಲ್ಪನೆ ಹೆಚ್ಚು ಕಮ್ಮಿ ಹೀಗೇನೆ ಇತ್ತು. ಸ್ವಾಯತ್ತವಾಗಿರುವಂತಹ, ಯಾವ ಪಶು ಶಕ್ತಿಯ ತೆಕ್ಕೆಗೂ ಸಿಲುಕದಂಥ, ಸಮುದಾಯಗಳಿರಬೇಕು. ಅದು ನಮ್ಮ ಆದರ್ಶ ಅಂತ ಗಾಂಧಿ ಹೇಳ್ತಿದ್ದರು.

### ಬಹುಮತವಾದ ಮತ್ತು ಫ್ಯಾಸಿಸಂ

ಇದನ್ನು ನಮ್ಮ ಇವತ್ತಿನ ಬಿಕ್ಕಟ್ಟಿಗೆ ಹೋಲಿಸಿ ನೋಡುವುದಾದರೆ, ಈ ಅತಿಯಾದ ಅಧಿಕಾರವು ನಮ್ಮ ಈ ಚುನಾಯಿತ ಸರ್ಕಾರಗಳಿಗೆ ಯಾವುದರಿಂದ ಬರ್ತಾ ಇದೆ? ಗಾಂಧಿ ಕೇಳಿರುವ ಪೊಲಿಟಿಕಲ್ ಪ್ರಶ್ನೆ ಏನೆಂದರೆ ನಾನು ಒಬ್ಬ ಮತದಾರ, ನನಗೆ ಪ್ರಜಾಪ್ರಭುತ್ವದಲ್ಲಿ ಕೊಟ್ಟಿರುವ ಅಧಿಕಾರದಿಂದ ಮತವನ್ನು ಚಲಾಯಿಸುತ್ತೇನೆ. ಆ ಮತ ಚಲಾವಣೆಯಿಂದ ಬಹುಮತಪಡೆದ ಪಕ್ಷವು ಅಧಿಕಾರಕ್ಕೆ ಬರುತ್ತೇನೋ ಹೌದು. ಅವರು ಎರಡು ಪ್ರಶ್ನೆ ಕೇಳ್ತಾರೆ; ಒಂದು, ಬಹುಮತದಿಂದ ಅಧಿಕಾರ ಪಡೆದ ಅದು ಬಹುಜನರ ಅಭಿಪ್ರಾಯವನ್ನು ಅದು ಪಾಲಿಸುತ್ತಾ? ಬಹುಜನರ ಅಪೇಕ್ಷೆಗಳೇ ಬೇರೆ, ಬಹು ಮತ ಬೇರೆ ಅಂತ ಅವರ ದೃಷ್ಟಿ ಮತ್ತು ಎರಡೂ ಒಂದಾಗಿದೆಯೋ ಇಲ್ಲವೋ ಎನ್ನುವುದು ಅವರ ಮೊದಲ ಪ್ರಶ್ನೆ. ಎರಡನೆಯದಾಗಿ, ನಾವೇ ನಮ್ಮ ಒಪ್ಪಿಗೆಯಿಂದ ನಿಮ್ಮನ್ನು ಆಯ್ಕೆ ಮಾಡಿರುವಾಗ ನೀವು ನಮ್ಮ ಅಧಿಕಾರಗಳನ್ನು ಹೇಗೆ ಕಸಿದು ಕೊಳ್ಳುತ್ತೀರ? ಯಾವ ವ್ಯವಸ್ಥೆ ಇದು? ಈ ವ್ಯವಸ್ಥೆಯು ಯಾಕೆ ಬಂದಿದೆ ಅಂತಂದ್ರೆ ರಾಷ್ಟ್ರ ಎನ್ನುವ ಕಲ್ಪನೆಯಿಂದ ಬಂದಿರುವಂತದ್ದು.

ಬಹಳ ಸ್ಪಷ್ಟವಾಗಿ ಕಾಣುವಂತದ್ದು ಏನಂತದ್ದಂದ್ರೆ, ಯಾಕೆ ನಾವು ಪ್ರಜಾತಂತ್ರ ವಿರೋಧಿ ವ್ಯವಸ್ಥೆಗಳನ್ನು, ಅಂತಹ ಕ್ರಿಯೆಗಳನ್ನು ವಿರೋಧಿಸುತ್ತಿಲ್ಲ, ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗಿದೆ ಅಂದ್ರೆ ಅದು ರಾಷ್ಟ್ರ ವ್ಯವಸ್ಥೆಯ ಬಗೆಗಿನ ಹೆದರಿಕೆಯಿಂದ. ನಾನು ಸ್ವಲ್ಪ ಹೆದರಿಕೆಯಿಂದನೆ ಅವರೆಡರ ವ್ಯತ್ಯಾಸದ ಬಗ್ಗೆ ಸ್ಪಷ್ಟಗೊಳಿಸಬೇಕು. ಇದು ರಾಷ್ಟ್ರ ಎನ್ನುವ ವಿಚಾರದ ವಿರುದ್ದವಾಗಿ ಹೇಳ್ತಾ ಇರೋದು, ದೇಶದ ವಿಚಾರವಾಗಿ ಅಲ್ಲ. ಈ ಹೆದರಿಕೆಯಿಂದಲೇ ರಾಷ್ಟ್ರ ಎಂದರೆ ಈ ಸರ್ಕಾರ, ಸರ್ಕಾರ ಎಂದರೆ ಈ ರಾಷ್ಟ್ರ, ಈ ರಾಷ್ಟ್ರ ಎಂದರೆ ಈ ವ್ಯಕ್ತಿ ಅನ್ನುವುದರ ಕಡೆಗೆ ನಾವು ಚಲಿಸುತ್ತಿದ್ದೇವೆ. ಸ್ನೇಹಿತರೆ, ಇದನ್ನ ನೆನಪಿನಲ್ಲಿ ಇಟ್ಟುಕೋಬೇಕು, ಗಾಂಧಿಗೆ ಇವೆಲ್ಲಾ ಅಡುಗೂಲಜ್ಜಿ ಕತೆ ಆಗಿರಲಿಲ್ಲ. ಅವರು ಬದುಕಿದ ಇಡೀ ಯುಗ ಫ್ಯಾಸಿಸಂನ್ನು ಕಂಡ ಯುಗ. ಅತೀ ಕ್ರೂರವಾಗಿದ್ದುದು ಒಂದು ಕಡೆ ಆದ್ರೆ, ಅತೀ ಅಸಂಗತವಾದದ್ದೂ ಆಗಿತ್ತು ಅದು. ಮಹಾನ್ ಬುದ್ಧಿಶಾಲಿಗಳಾದಂಥ, ದಿವ್ಯ ಪರಂಪರೆ ಇರುವಂಥ ನಾಗರೀಕರೇ ತಮ್ಮ ಮತದ ಅಧಿಕಾರದಿಂದಲೇ ಸರ್ವಾಧಿಕಾರವನ್ನು , ಫ್ಯಾಸಿಸಂನ್ನು ತಂದಂಥ ಯುಗ ಅದು.

ಗಾಂಧಿಗೆ ಅದು ಅವತ್ತಿನ ರಾಜಕೀಯ ಮತ್ತು ಕಾಲದ ಅನುಭವವಾಗಿತ್ತು. ಅದನ್ನು ನೋಡಿದಂಥ ಗಾಂಧಿ ಅವರ ಚಿಂತನೆ ಯಾವಾಗಲೂ ವಿಕೇಂದ್ರಿಕರಣದ ಕಡೆಗೇ ಇತ್ತು. ಅಧಿಕಾರದ ಸಂಸ್ಥೆಗಳ–ಅವುಗಳನ್ನು ಸಂಪೂರ್ಣವಾಗಿ ತೆಗೆದು ಹಾಕಲು ಸಾಧ್ಯವಿಲ್ಲ – ಪ್ರಾಬಲ್ಯವನ್ನು ಸಾಧ್ಯವಾದಷ್ಟೂ ಕಡಿಮೆ ಮಾಡಬೇಕು ಎನ್ನುವುದಾಗಿತ್ತು. ಅವುಗಳು ಯಾವಾಗಲೂ ನಮ್ಮ ವಿಮರ್ಶೆಗೆ ಒಳಪಟ್ಟಿದುದಾಗಿರಬೇಕು. ನಮ್ಮ ಹಿಡಿತವನ್ನು ಮೀರಿ ನಿಂತಿರಬಾರದು ಎಂದು ಹೇಳುವುದಕ್ಕೋಸ್ಕರ ಅವರು ಒಂದು ಪರ್ಯಾಯ ರಾಷ್ಟ್ರೀಯತೆಯ ಕಲ್ಪನೆಯನ್ನು ಕಟ್ಟಿ ಜನರಿಗೆ ತಲುಪಿಸಲು ಪ್ರಯತ್ನಿಸಿದರು.

### ಧರ್ಮವನ್ನು ವಿರೂಪಗೊಳಿಸುವ ರಾಷ್ಟ್ರೀಯತೆ


ಕೊನೆಯದಾಗಿ ಹೇಳುವುದಾದರೆ ಇಂದಿನ ರಾಷ್ಟ್ರೀಯತೆಯ ಬಿಕ್ಕಟ್ಟು ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ನಮ್ಮ ವಿಶ್ವದ ವಿದ್ಯಮಾನಗಳನ್ನೇ ನೋಡಿದರೆ ಎಲ್ಲಕಡೆಯೂ ಅಪಾರವಾದ ಹಿಂಸೆ, ಬಹಳಾ ಅತಾರ್ಕಿಕವಾದಂತ, ದುಷ್ಟವಾದಂತ ಸಿದ್ದಾಂತಗಳು, ಆಲೋಚನೆಗಳು ಎಲ್ಲ ಕಡೆಗೂ ಇದೆ. ಕೇವಲ ಒಂದ್ಯೆದು ವರ್ಷಗಳ ಹಿಂದೆಯಷ್ಟೇ ಯಾವ ರಾಷ್ಟ್ರಗಳು ಮಾನವ ನೆಮ್ಮದಿಯ ಅತ್ಯುನ್ನತ ಹಂತವನ್ನು ತಲುಪಿದೆ ಎಂದು ನಾವು ಭಾವಿಸಿದ್ದೆವೋ ಅಲ್ಲಿಯೇ ಇಂದು ಬಲಪಂಥೀಯ ಚಿಂತನೆಯ ಅಧಿಕಾರ ಕೇಂದ್ರಗಳು ಹುಟ್ಟಿಕೊಂಡಿರುವುದನ್ನು ನೋಡುತ್ತಿದ್ದೇವೆ. ನೋಡ್ತಾ ಹೋದರೆ ಎಲ್ಲ ಕಡೆ ನಾವು ಈ ರಾಷ್ಟ್ರವಾದ ಅನ್ನೋದು, ಅದು ರಾಜಕೀಯ ರಾಷ್ಟ್ರವಾದದ ಸ್ವರೂಪದಲ್ಲೇ ಬರಬೇಕಂತಿಲ್ಲ, ಧಾರ್ಮಿಕ ರಾಷ್ಟ್ರವಾದದ ರೂಪದಲ್ಲಿ, ಮೂಲಭೂತವಾದದ ಸ್ವರೂಪದಲ್ಲಿ, ಇನ್ನಿತರೇ ರೂಪಗಳಲ್ಲಿ, ನೆಲೆ ಪಡೆದುಕೊಳ್ಳುತ್ತಿರುವುದನ್ನು ಕಾಣಬಹುದು. ಉದಾಹರಣೆಗೆ ಒಂದು ಬಗೆಯ ಇಸ್ಲಾಮಿಕ್ ಭಯೋತ್ಪಾದನೆಯನ್ನು ನೀವು ನೋಡಿದರೆ ಅದರ ಹಿಂದಿರುವ ಚಾಲಕ ಶಕ್ತಿ ಏನೆಂದರೆ ನಾವು ಒಂದು ರಾಷ್ಟ್ರವನ್ನು ಕಟ್ಟುತ್ತೇವೆ ಎನ್ನುವುದು. ಈ ರಾಷ್ಟ್ರ ಆ ರಾಷ್ಟ್ರ ಅಲ್ಲ, ಯಾವುದೊ ಒಂದು ಕಲ್ಪನೆ ನಮಗಿದೆ ಅನ್ನುವಂತಾದ್ದು. ಈ ಬಗೆಯ ಮೂಲಭೂತವಾದದ ರಾಷ್ಟ್ರೀಯತೆಯ ದೊಡ್ಡ ಬಿಕ್ಕಟ್ಟು ನಮ್ಮೆದುರಿಗೆ ಅನಾವರಣಗೊಳ್ಳುತ್ತಿರುವಂತಾದ್ದು. ಧರ್ಮ ಅನ್ನುವಂತದ್ದು ಯಾಕೆ ವಿರೂಪಗೊಳ್ಳುತ್ತಿದೆ, ಅವನತಿ ಹೊಂದುತ್ತಿದೆ, ಯಾಕೆ ಅವು ತಮ್ಮ ಧಾರಣಾಶಕ್ತಿಯನ್ನು ಕಳೆದುಕೊಳ್ಳುತ್ತಿದೆ? ಯಾಕೆ ಧರ್ಮ ಅನ್ನುವುದು ಮಾನವ ದುಖಗಳಿಗೆ ಪರಿಹಾರ ಅಂತ ನಂಬಿಕೊಂಡಿದ್ದರೂ ಅದನ್ನು ಕೊಡುವ ಪರಿಸ್ಥಿತಿಯಲ್ಲಿ ಅವು ಇಲ್ಲ? ಇದನ್ನೆಲ್ಲಾ ನಾವು ನೋಡುವಾಗ ಅದರ ಹಿಂದೆ ಎದ್ದು ಕಾಣುವಂತದ್ದು ಈ ರಾಷ್ಟ್ರ ಮತ್ತು ರಾಷ್ಟ್ರೀಯತೆ ಎನ್ನುವ ಪರಿಕಲ್ಪನೆಗಳು ಅನ್ನೋದು ಗೊತ್ತಾಗುತ್ತೆ.

ಇದು ಎಲ್ಲಿಯವರೆಗೆ ಹೋಗ್ತಾ ಇದೆ ಅಂದರೆ ಕೊನೆಯದಾಗಿ ಒಂದು ಉದಾಹರಣೆಯ ಮೂಲಕ ಹೇಳಲಿಕ್ಕೆ ಇಷ್ಟಪಡ್ತೀನಿ. ಅಮಿತವ್ ಗೋಷ್ ಅವರ 'ಶಾಡೋ ಲೈನ್' ಎನ್ನುವ ಕಾದಂಬರಿಯಲ್ಲಿ ಒಂದು ಕಾಲದಲ್ಲಿ ಬಂಗಾಲವೇ ಆಗಿದ್ದು ನಂತರ ಪೂರ್ವ ಪಾಕಿಸ್ಥಾನವಾಗಿ ಆಮೇಲೆ ಬಾಂಗ್ಲಾದೇಶ್ ಆದ ನೆಲದಿಂದ ಕೋಲ್ಕತ್ತಾಕ್ಕೆ ಹೊರಟಿದ್ದ ಒಂದು ಕುಟುಂಬದ ಮಗು ವಿಮಾನದ ಕಿಟಕಿಯ ಗಾಜಿನ ಮೂಲಕ ನೋಡುತ್ತಾ 'ನಾವು ಬಂದ್ವಾ ನಮ್ಮ ದೇಶಕ್ಕೆ?' ಅಂತ ಕೇಳ್ತಾಳೆ. 'ಹಾಂ! ಹೌದು, ದೇಶವನ್ನು ದಾಟಿ ಬಂದೆವಲ್ಲ!' ಎಂದು ಅವಳ ಪೋಷಕರು ಹೇಳಿದಾಗ ಆ ಮುಗುವಿನ ಪ್ರತಿಕ್ರಿಯೆ ಹೇಗಿರುತ್ತೆ ನೋಡಿ. 'ಹೌದು ಮತ್ತೆ, ಎಲ್ಲಿ ಅಂತ ಗೊತ್ತೇ ಆಗಲಿಲ್ಲವಲ್ಲ! ಎಲ್ಲೂ ಗೆರೆಯೂ, ಬೇಲಿಯೂ, ಕಂದಕವೋ ಒಂದೂ ಕಾಣಲಿಲ್ಲ!?' ಅದಕ್ಕೆ ಅವಳ ತಂದೆ 'ಇಲ್ಲ ಹಾಗೆ, ಗೆರೆ, ಕಂದಕಗಳು ಇರಲ್ಲ' ಅಂತ ಹೇಳಿದಾಗ ಅವಳ ಪ್ರಶ್ನೆ: 'ಮತ್ತೆ ಜನರಿಗೆ ಹೇಗೆ ಗೊತ್ತಾಗುತ್ತೆ!? ಇದು ಆ ದೇಶ, ಅದು ಈ ದೇಶ ಅಂತಾ, ಎಲ್ಲಿ ಹೆಜ್ಜೆ ಇಟ್ಟರೆ ಯಾವ ದೇಶ ಅಂತ!?' ಯೋಚನೆ ಮಾಡಿ, ಉತ್ತರ ಇಲ್ವಲ್ಲಾ ಇದಕ್ಕೆ.

### ರಾಷ್ಟ್ರೀಯತೆ: ಗಾಂಧಿ-ಟಾಗೋರ್ ವಾಗ್ವಾದ

ಈ ಮಾತನ್ನು ಯಾಕೆ ಪ್ರಸ್ತಾಪ ಮಾಡಿದೆ ಅಂತಂದ್ರೆ ಒಂದು ಬಹು ದೊಡ್ಡ ಚರ್ಚೆ ಗಾಂಧಿ ಮತ್ತು ಟಾಗೋರ್ ನಡುವೆ ನಡೆಯಿತು. ಎಂತಾ ಉನ್ನತವಾದಂಥ ಮನಸ್ಸುಗಳು ಅವು. ಎಲ್ಲಿಂದ ಎಲ್ಲಿಗೆ ಬಂದುಬಿಟ್ಟಿದ್ದೇವೆ ನಾವು! ಎಷ್ಟು ಕ್ಷುಲ್ಲಕ ಮತ್ತು ದರಿದ್ರರಾಗಿಬಿಟ್ಟಿದ್ದೇವೆ ನಾವು ನಮ್ಮ ಯೋಚನೆಯಲ್ಲಿ! ಗಾಂಧಿ ನಾನು ಕಟ್ಟುವ ರಾಷ್ಟ್ರದಲ್ಲಿ ಪ್ರತಿ ಮನೆಯಲ್ಲೂ ಚರಕ ಇರಬೇಕು, ಪ್ರತಿಯೊಬ್ಬರೂ ಖಾದಿಯನ್ನು ತೊಡಬೇಕು ಎಂದು ಹೇಳಿದ್ರೆ ಟಾಗೋರ್ ಅವರು ಗಾಂಧಿಗೆ ಇಲ್ಲ, ನೀವು ಬಹಳಾ ಭಾವನಾತ್ಮಕವಾದ ಸಂದೇಶಗಳನ್ನು ಕೊಟ್ಟುಬಿಡ್ತಿದ್ದೀರ. ವಿದೇಶಿ ಬಟ್ಟೆಗಳನ್ನು ಸುಟ್ಟುಹಾಕಿಬಿಡಿ ಅಂತ ಹೇಳುವಾಗ ಮನುಷ್ಯ ಪ್ರಜ್ಞೆಗೆ ಏನು ಮಾಡ್ತಿದ್ದೀರಿ? ಅಂತ ಟಾಗೋರ್ ಗಾಂಧಿಯನ್ನು ಪ್ರಶ್ನಿಸುತ್ತಾರೆ. ಯಾಕೆ ಇದನ್ನು ಹೇಳ್ದೆ ಅಂತಂದ್ರೆ ರಾಷ್ಟ್ರದ ಬಗ್ಗೆ ಅತ್ಯಂತ ಸಂಕೀರ್ಣವಾದ ಚಿಂತನೆ ಬಂದದ್ದು ಭಾರತದಲ್ಲಿ, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ. ಆದರೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಬಹುಶಃ ಬೆನೆಡಿಕ್ಟ್ ಆಂಡರ್ಸನ್ ಅವರಿಂದ ಪ್ರಾರಂಭವಾಗಿ ಅಲ್ಲಿಯೇ ನಿಂತು ಬಿಡುತ್ತೇವೆ. ಗಾಂಧಿ, ಟಾಗೋರ್ ಅಂಬೇಡ್ಕರ್, ಲೋಹಿಯಾ ಅವರು ರಾಷ್ಟ್ರಪರಿಕಲ್ಪನೆಯ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ನಾವು ಅಭ್ಯಾಸ ಮಾಡಬೇಕೆ ಹೊರತು ಮತ್ತೆ ಮತ್ತೆ ಅದೇ ಮಾದರಿಗಳಿಗೆ ಅಂಟಿಕೊಳ್ಳುವುದರಲ್ಲಿ ಯಾವ ಪ್ರಯೋಜನವೂ ಇಲ್ಲ.

ಇವೊತ್ತು ಕೇವಲ ಬರಡು ಚರ್ಚೆಗಳೇ ಆಗುತ್ತಿವೆ. ಯಾಕೆಂದರೆ ಪ್ರಸ್ತುತ ಸಂದರ್ಭವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಈ ಸಿದ್ದ ಮಾದರಿಗಳು ಸಂಪೂರ್ಣ ವಿಫಲವಾಗಿದೆ ಎಂದು ಅನ್ನಿಸುತ್ತದೆ. ಈ ರಾಷ್ಟ್ರ ಎನ್ನುವುದರ ವಿಷಯವಾಗಿ ಒಂದು ಹೆಜ್ಜೆ ಆಚೆ ಈಚೆ ಇಟ್ಟುಬಿಟ್ಟರೆ ಅದು ಭಾವುಕತೆಯ ಅಪಾಯವಾಗುವುದಿಲ್ಲವೇ? ಎಂಬೆಲ್ಲಾ ಪ್ರಶ್ನೆಗಳು ೧೯೨೨ರಲ್ಲಿ, ೧೯೨೭, ೧೯೩೦ರಲ್ಲಿ ಹೀಗೆ ಅನೇಕ ಜೀವಂತ ಚರ್ಚೆಗಳಲ್ಲಿ ಚಿಂತಿಸಲಾಗಿದೆ. ಆದರೆ ನಮ್ಮ ವೈಚಾರಿಕ ದಾರಿದ್ರ್ಯ ಎಲ್ಲಿದೆ ಅಂತ ನೋಡಿದ್ರೆ ಈ ಜೀವಂತ ಚರ್ಚೆಗಳಿಂದ ನಾವು ಹೆಚ್ಚು ಪ್ರಯೋಜನ ಪಡೆದುಕೊಳ್ಳುತ್ತಿಲ್ಲ ಅನ್ನೋದು. ನನಗೆ ಅನ್ನೋದು ಏನಂದ್ರೆ ನಮ್ಮ ಬಿಕ್ಕಟ್ಟುಗಳಿಗೆ ಮಾತ್ರವಲ್ಲ, ಬಂಡವಾಳಶಾಹಿ, ಹುಸಿ ಧಾರ್ಮಿಕತೆಗಳು ತಂದಿಟ್ಟಿರುವ ಜಗತ್ತಿನ ಇಂದಿನ ಬಿಕ್ಕಟ್ಟುಗಳಿಗೆ ಗಾಂಧಿ ಅವರಲ್ಲಿ ಪರಿಹಾರಗಳಿಲ್ಲ, ಆದರೆ ಪ್ರಶ್ನೆಗಳಿವೆ, ಸಲಹೆಗಳಿವೆ, ಅವುಗಳನ್ನು ನಾವು ಪರಿಶೀಲಿಸಬೇಕು ಅಂತ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.



(ಧ್ವನಿಯಿಂದ ಲಿಪಿಗೆ: ಬಿ.ವಿ ಸುರೇಂದ್ರ)

**(ಕುವೆಂಪು ವಿಶ್ವವಿದ್ಯಾನಿಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರಾದ ರಾಜೇಂದ್ರ ಚೆನ್ನಿ ಅವರು ನಮ್ಮ ನಡುವಿನ ಹಿರಿಯ ಸಾಹಿತ್ಯ ಮತ್ತು ರಾಜಕೀಯ ಚಿಂತಕರೂ ಹೌದು)**

# ರಾಷ್ಟ್ರೀಯತೆ ಮತ್ತು ರಾಷ್ಟ್ರ ವಿಭಜನೆಯ ರಾಜಕಾರಣ

–ಡಾ, ರಾಜಾರಾಂ ತೋಳ್ಪಾಡಿ



**ಈ ಲೇಖನದಲ್ಲಿ ಡಾ. ರಾಜಾರಾಂ ತೋಳ್ಪಾಡಿಯವರು ನಮ್ಮ ರಾಷ್ಟ್ರೀಯತೆಯನ್ನು ರೂಪಿಸಿದ ಸ್ವಾತಂತ್ರ್ಯ ಹೋರಾಟದ ಮಧ್ಯೆ ರಾಷ್ಟ್ರ ವಿಭಜನೆ ಎಂಬ ವಿಷಬೀಜ ಮೊಳಕೆಯೊಡೆದ ಬಗೆಯನ್ನು ಅದರ ಸಕಲ ಹಿನ್ನೆಲೆಗಳೊಂದಿಗೆ ನಿರೂಪಿಸುತ್ತಾ, ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಸೇರಿಹೋಗಿದ್ದ ಹಲವು ಧಾರೆಗಳ ಪರಿವೆ ಇಲ್ಲದೆ ರಾಷ್ಟ್ರ ವಿಭಜನೆಯ ವಿದ್ಯಮಾನವನ್ನು ಸಮರ್ಪಕವಾಗಿ ಅರ್ಥ ಮಾಡಿಕೊಳ್ಳಲಾಗದು ಎಂದು ಸೂಚಿಸುತ್ತಾರೆ.**–ಸಂ

ಪ್ರಸುತ್ತ ಲೇಖನ ಎರಡು ಉದ್ದೇಶಗಳನ್ನು ಇರಿಸಿಕೊಂಡಿದೆ. ಅದರಲ್ಲಿ ಮೊದಲನೆಯದು ಭಾರತದ ಸ್ವಾತಂತ್ರ್ಯ ಹೋರಾಟದ ಬಹುರೂಪಗಳನ್ನು ಸಂಕ್ಷಿಪ್ತವಾಗಿ ಚರ್ಚಿಸುವುದಾಗಿದೆ. ಎರಡನೆಯದು ಈ ಸ್ವಾತಂತ್ರ್ಯ ಹೋರಾಟದ ಪ್ರಮುಖಧಾರೆಯಾದ ರಾಷ್ಟ್ರೀಯ ಹೋರಾಟದ ಸೈದ್ಧಾಂತಿಕ ರಾಜಕೀಯ ಸ್ವರೂಪವನ್ನು ಒಂದು ವಿಮರ್ಶಾತ್ಮಕ ನೋಟದಲ್ಲಿ ಮುಂದಿಡುವುದು. ಹಾಗೆ ಮಾಡುವ ಮೂಲಕ ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯ ಸಂಕೀರ್ಣತೆ, ವೈಶಿಷ್ಟ್ಯ ಹಾಗೂ ವಿಸಂಗತಿಗಳು ಮುಂಚೂಣಿಗೆ ಬರಬಹುದೆಂದು ನಾನು ತಿಳಿಯುತ್ತೇನೆ.

## ಭಾಗ ೧

ಭಾರತದ ಸ್ವಾತಂತ್ರ್ಯ ಹೋರಾಟದ ಒಂದು ವಿಸ್ತಾರವಾದ ಬಹುರೂಪಿ ಚರಿತ್ರೆಯನ್ನು ಹೊಂದಿದೆ. ಈ ಚರಿತ್ರೆ ಆಧುನಿಕ ಭಾರತವನ್ನು ರೂಪಿಸಿದೆ ಮತ್ತು ನಿರೂಪಿಸಿದೆ. ೧೯ ಹಾಗೂ ೨೦ನೇಯ ಶತಮಾನಗಳಲ್ಲಿ ವಿವಿಧ ಜನಸಮುದಾಯಗಳು ತಮ್ಮ ಅಸ್ತಿತ್ವ, ಅಸ್ಮಿತೆ ಹಾಗೂ ಸ್ವಾತಂತ್ರ್ಯಗಳಿಗಾಗಿ ವಿವಿಧ ಕಾಲಘಟ್ಟಗಳಲ್ಲಿ ನಡೆಸಿದ ಅನೇಕ ಬಗೆಯ ವಿಮೋಚನಾ ಹೋರಾಟಗಳನ್ನು ನಾವು ಸಾಮಾನ್ಯವಾದ ಅರ್ಥದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟವೆಂದು ಕರೆಯಬಹುದು. ಇವುಗಳಲ್ಲಿ ರೈತ ಚಳುವಳಿಗಳು, ಗುಡ್ಡಗಾಡು ಜನರ ಹೋರಾಟಗಳಲ್ಲಿ ವಿವಿಧ ಬಗೆಯ ಸಮಾಜ ಸುಧಾರಣಾ ಪ್ರಯತ್ನಗಳು, ದಲಿತರ ಮತ್ತು ಮಹಿಳೆಯರ ವಿಮೋಚನಾ ಚಳುವಳಿಗಳು, ಕಾರ್ಮಿಕರ ಹೋರಾಟ ಮತ್ತು ರಾಷ್ಟ್ರೀಯ ಅಂದೋಲನಗಳು ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ. ಹೊರನೋಟದಲ್ಲಿಯೇ ಈ ಆಂದೋಲನಗಳು ವಿಭಿನ್ನ ಪ್ರಕೃತಿಯ ಸಾಮಾಜಿಕ, ರಾಜಕೀಯ ಹಾಗೂ ಸೈದ್ಧಾಂತಿಕ ಧೋರಣೆಗಳನ್ನು ಪ್ರತಿನಿಧಿಸುತ್ತದೆ ಎಂದು ಬೇರೆ ಹೇಳಬೇಕಾಗಿಲ್ಲ. ಅವು ಭಾರತ ಎಂದು ನಾವು ಗುರುತಿಸುವ ಸೀಮೆಯ ಒಳಗೆ ಸಂಭವಿಸಿರುವುದರಿಂದ ಹಾಗೂ ಅವುಗಳಲ್ಲಿ ತಮ್ಮ ಆಸ್ಮಿತೆ ಮತ್ತು ಸ್ವಾತಂತ್ರ್ಯಗಳ ಬಗ್ಗೆ ಒಂದು ಅರಿವು ಇರುವುದರಿಂದ ಅವುಗಳನ್ನು ನಾವು ಭಾರತದ ಸ್ವಾತಂತ್ರ್ಯ ಹೋರಾಟಗಳು ಎನ್ನುವ ನವಿರಾದ ಸಂಕಥನದಲ್ಲಿ ನಿರೂಪಿಸಿದ್ದೇವೆ.

ಆದರೆ ಈಗಾಗಲೇ ಗುರುತಿಸಿದಂತೆ ಈ ಎಲ್ಲಾ ಹೋರಾಟಗಳು ಬೇರೆ ಬೇರೆ ಕಾಲಘಟ್ಟಗಳಲ್ಲಿ, ಬೇರೆ ಬೇರೆ ಒತ್ತಡಗಳಿಂದಾಗಿ ಬೇರೆ ಬೇರೆ ರೀತಿಯ ಅಧಿಕಾರಶಾಹಿಯ ವಿರುದ್ಧ ಹಾಗೂ ಬೇರೆ ಬೇರೆ ಪ್ರದೇಶಗಳಲ್ಲಿ ಅಭಿವ್ಯಕ್ತಗೊಂಡಿವೆ. ಇವುಗಳಲ್ಲಿ ಕೆಲವು ದೇಶೀಯ ಪ್ರಭುತ್ವಗಳ ವಿರುದ್ಧ ಪ್ರತಿಭಟನೆಗಳನ್ನು ತೋರಿಸಿದರೆ ಮತ್ತೆ ಕೆಲವು ವಸಾಹತುಶಾಹಿಯ ವಿರುದ್ಧದ ಪ್ರತಿಭಟನೆಗಳಾಗಿದ್ದವು. ಇನ್ನು ಕೆಲವು ದೇಶೀಯ ಹಾಗೂ ವಿದೇಶೀಯ ಪ್ರಭುತ್ವಗಳೆರಡರ ವಿರುದ್ಧವೂ ತಮ್ಮ ಪ್ರತಿಭಟನೆಗಳನ್ನು ಸೂಚಿಸಿವೆ. ಹಾಗಾಗಿ ಈ ಹೋರಾಟಗಳನ್ನು ಭಾರತದ ಸ್ವಾತಂತ್ರ್ಯ ಹೋರಾಟ ಎಂದು ಕರೆಯುವಾಗ ಅವುಗಳ ನಡುವಿನ ವ್ಯತ್ಯಾಸಗಳನ್ನು ಅಥವಾ ಪ್ರತಿಷೇಧಗಳನ್ನು ನಾವು ಮರೆಯುವಂತಿಲ್ಲ.

ಹಾಗಿದ್ದೂ ಭಾರತವೆನ್ನುವ ಭಾವಿಸಿದ ಜನಪದದ ಬಹುಧಾರೆಗಳನ್ನಾಗಿ ಈ ಎಲ್ಲಾ ಹೋರಾಟಗಳನ್ನು ನಾವು ಇಂದು ಗ್ರಹಿಸಬೇಕಾಗಿದೆ. ಈ ಎಲ್ಲಾ ಹೋರಾಟಗಳು ತಮ್ಮ ಪ್ರತ್ಯೇಕತೆಯಲ್ಲಿ ಹಾಗೂ ಪರಸ್ಪರ ಸಂಬಂಧಗಳಲ್ಲಿ ಭಾರತೀಯ ಸಮಾಜವನ್ನು ಅರ್ಥಿಕತೆಯನ್ನು, ರಾಜಕಾರಣವನ್ನು ಹಾಗೂ ಸಂಸ್ಕೃತಿಯನ್ನು ನಿರ್ವಚಿಸುವ, ನಿರೂಪಿಸುವ, ಮರು ನಿರ್ವಚಿಸುವ ಮತ್ತು ಮರು ನಿರೂಪಿಸುವ ಕೆಲಸಗಳನ್ನು ಮಾಡಿವೆ. ಈ ಹೋರಾಟಗಳ ಬಹುರೂಪಿ ಪ್ರಯತ್ನಗಳ ಫಲಶೃತಿಯೇ ಆಧುನಿಕ ಭಾರತ ಎಂದು ನಾವು ಕರೆಯುವ ಭಾವಶೀಲ ವಿಚಾರಧಾರೆ.

## ಭಾಗ - ೨

೧೯ ಹಾಗೂ ೨೦ನೇಯ ಶತಮಾನಗಳಲ್ಲಿ ಭಾರತದಲ್ಲಿ ಸಂಭವಿಸಿದ ಸ್ವಾತಂತ್ರ್ಯ ಹೋರಾಟದ ಅನೇಕ ಧಾರೆಗಳಲ್ಲಿ ರಾಷ್ಟ್ರೀಯ ಹೋರಾಟವೂ ಒಂದು. ಬಹುಶಃ ಈ ರಾಷ್ಟ್ರೀಯ ಹೋರಾಟವನ್ನು ಅದರ ವಿಶಾಲತೆ ಮತ್ತು ಪ್ರಭಾವದ ದೃಷ್ಟಿಯಿಂದ ಸ್ವಾತಂತ್ರ್ಯ ಹೋರಾಟದ ಧಾರೆಗಳಲ್ಲಿ ಅತ್ಯಂತ ಪ್ರಮುಖವೆಂದೂ ಗುರುತಿಸಬಹುದು. ಆದರೆ ಮುಖ್ಯವಾದ ಸಂಗತಿಯೆಂದರೆ ಈ ರಾಷ್ಟ್ರೀಯ ಹೋರಾಟವು ಏಕರೂಪದ ಮತ್ತು ಏಕಮುಖವಾಗಿ ಹರಿದ ವಿದ್ಯಮಾನವಾಗಿರದೆ ತನ್ನೊಳಗೆ ಅನೇಕ ಬಗೆಯ ರಾಷ್ಟ್ರೀಯತೆಯ ವಿಚಾರಧಾರೆಗಳನ್ನು ಒಳಗೊಂಡಿದೆ. ಬಹುರೂಪಿಯಾದ ಈ ರಾಷ್ಟ್ರೀಯ ಹೋರಾಟದ ಒಡಲೊಳಗೆ ವಿಭಿನ್ನ ಬಗೆಯ ಸೈದ್ಧಾಂತಿಕ ದೃಷ್ಟಿಕೋನಗಳು, ಸಾಮಾಜಿಕ, ಆರ್ಥಿಕ ಹಿತಾಸಕ್ತಿಗಳು ಹಾಗೂ ಜನಾಂಗೀಯ – ಸಾಂಸ್ಕೃತಿಕ ಆಸ್ಮಿತೆಗಳು ಮನೆಮಾಡಿಕೊಂಡಿವೆ. ಹಾಗಾಗಿ ೧೯ನೇಯ ಶತಮಾನದ ಉತ್ತರಾರ್ಧದಲ್ಲಿ ಹೊರಹೊಮ್ಮಿ ೨೦ನೇಯ ಶತಮಾನದಲ್ಲಿ ವಿಕಾಸ ಹೊಂದಿದ ರಾಷ್ಟ್ರೀಯ ಹೋರಾಟದ ಬಹುಧಾರೆಗಳನ್ನು ಮತ್ತು ಅವುಗಳಲ್ಲಿ ವ್ಯಕ್ತಗೊಳ್ಳುವ ರಾಷ್ಟ್ರೀಯತೆಯ ಬಹುರೂಪಗಳನ್ನು ಬಲಪಂಥೀಯ, ಎಡಪಂಥೀಯ ಹಾಗೂ ನಡುಪಂಥೀಯ ಎಂಬೆಲ್ಲಾ ವಿಂಗಡಗಳನ್ನು ವಿದ್ವಾಂಸರು ಮಾಡಿದ್ದಾರೆ. ಅಂತೆಯೇ, ಈ ಹೋರಾಟದ ಧಾರೆಗಳು ಪ್ರತಿನಿಧಿಸುವ ರಾಷ್ಟ್ರವಾದವನ್ನು ರಾಜಕೀಯ, ಸಾಂಸ್ಕೃತಿಕ, ಭೌಗೋಳಿಕ, ಜನಾಂಗೀಯ ಎಂದು ಮುಂತಾಗಿ ನಿರೂಪಿಸಿದ್ದಾರೆ.

ಇಂತಹ ಸಂಕೀರ್ಣವಾದ ಭಾರತದ ರಾಷ್ಟ್ರೀಯ ಹೋರಾಟದ ಇತಿಹಾಸದಲ್ಲಿ ಕಾಂಗ್ರೆಸ್ಸ್ ನಾಯಕತ್ವದ ರಾಷ್ಟ್ರೀಯ ಹೋರಾಟ ಒಂದು ಅಷ್ಟೆ. ಕಾಂಗ್ರೆಸ್ ರಾಷ್ಟ್ರೀಯ ಹೋರಾಟದ ಇತಿಹಾಸವನ್ನು ಅನೇಕ ಚರಿತ್ರಾಕಾರರು ಮೂರು ಅಥವಾ ನಾಲ್ಕು ಕಾಲಘಟ್ಟಗಳಲ್ಲಿ ವಿವರಿಸಲು ಯತ್ನಿಸಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ನಮೂದಿಸಬಹುದು.

೧. ೧೯ನೇಯ ಶತಮಾನದ ಉತ್ತರಾರ್ಧದಲ್ಲಿ ನಡೆದ ಸಾಮಾಜಿಕ ಸುಧಾರಣಾ ಹೋರಾಟಗಳ ಕಾಲಘಟ್ಟ

೨. ೧೯ನೇಯ ಶತಮಾನದ ಕೊನೆಯ ಭಾಗದಲ್ಲಿ ಕಾಂಗ್ರೆಸ್ಸ್ ನಾಯಕತ್ವದಲ್ಲಿ ಹೊರಹೊಮ್ಮಿದ ರಾಷ್ಟ್ರೀಯ ಹೋರಾಟದ ಮೊದಲ ಕಾಲಘಟ್ಟ

೩. ರಾಷ್ಟ್ರೀಯ ಹೋರಾಟದ ಗಾಂಧೀಯುಗ

೪. ಗಾಂಧೀಯೋತ್ತರ ರಾಷ್ಟ್ರೀಯ ಹೋರಾಟದ ಕಾಲಘಟ್ಟ

ಆಧುನಿಕ ಭಾರತದ ಚರಿತ್ರಾಕಾರರು ರಾಷ್ಟ್ರೀಯ ಹೋರಾಟದ ಇತಿಹಾಸವನ್ನು ವಿಂಗಡಿಸಿದ ಈ ಕಾಲಘಟ್ಟಗಳು ರಾಷ್ಟ್ರೀಯ ಹೋರಾಟದ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಲು ಹಾಗೂ ಈ ಹೋರಾಟದಲ್ಲಿ ಸಂಭವಿಸಿದ ಪಲ್ಲಟಗಳನ್ನು ಗುರುತಿಸಲು ಮಾಡಿದ ಶೈಕ್ಷಣಿಕ ವಿಂಗಡನೆಗಳೆ ಹೊರತು ಅವು ಚಾರಿತ್ರಿಕ ಪ್ರವಾಹವನ್ನು ತಡೆಗಟ್ಟಲು ಕಟ್ಟಿದ ಅಡ್ಡಗೋಡೆಗಳಲ್ಲ. ಹಾಗಾಗಿ ಚರಿತ್ರಾಕಾರರು ಭಾರತದ ರಾಷ್ಟ್ರೀಯ ಹೋರಾಟವನ್ನು ಕಾಲಘಟ್ಟಗಳಾಗಿ ವಿಂಗಡಿಸಿದ್ದನ್ನು ಆಧಾರವಾಗಿ ಇಟ್ಟುಕೊಂಡು ಈ ವಿವಿಧ ಕಾಲಘಟ್ಟಗಳ ಕೆಲವು ಮಹತ್ವದ ಅಂಶಗಳನ್ನು ಈಗ ಸಂಕ್ಷಿಪ್ತವಾಗಿ ಪರಿಶೀಲಿಸೋಣ.

೧೯ನೇಯ ಶತಮಾನದಲ್ಲಿ ಸಂಭವಿಸಿದ ವಿವಿಧ ಬಗೆಯ ಸಮಾಜ ಸುಧಾರಭ ಪ್ರಯತ್ನಗಳನ್ನು(ಉದಾ: ದಂಯಾನಂದ ಸರಸ್ವತಿ, ರಾಜಾರಾಂ ಮೋಹನನನನನರಾಯ್ ಮತ್ತು ರಾಮಕೃಷ್ಣ ಪರಮಹಂಸೊವಿವೇಕಾನಂದರ

ಪ್ರಯತ್ನಗಳು– ನಾವು ಸೈದ್ಧಾಂತಿಕ ದೃಷ್ಟಿಯಿಂದ ಗಮನಿಸಿದಾಗ ಅವುಗಳನ್ನು ರಾಷ್ಟ್ರೀಯ ಹೋರಾಟದ ಪೂರ್ವ ಇತಿಹಾಸವೆಂದು ಪರಿಗಣಿಸಬಹುದು. ದೇಶದ ವಿವಿಧೆಡೆಗಳಲ್ಲಿ ವಿಭಿನ್ನ ಬಗೆಯ ಸೈದ್ಧಾಂತಿಕ ನೆಲೆಗಳಿಂದ ನಡೆದ ಈ ಸಮಾಜ ಸುಧಾರಭಾ ಅಂದೋಲನಗಳಲ್ಲಿ ರಾಷ್ಟ್ರದ ಪರಿಕಲ್ಪನೆ ಇರಲಿಲ್ಲ, ನಿಜ. ಪ್ರಾದೇಶಿಕ ನಿರ್ದಿಷ್ಟತೆಗಳಲ್ಲಿ ಸಂಭವಿಸಿದ ಈ ಹೋರಾಟಗಳನ್ನು ಒಂದು ವಿಶಾಲವಾದ ತಾತ್ವಿಕ ನೆಲೆಗಟ್ಟಿನಲ್ಲಿ ಭಾರತೀಯ ಸಮಾಜವನ್ನು ಪುನರ್‌ರಚಿಸಲು ನಡೆಸಿದ ಪ್ರಯತ್ನಗಳೆಂದು ಪರಿಗಣಿಸಬಹುದು. ಅವು ಭಾರತದ ರಾಷ್ಟ್ರೀಯ ಹೋರಾಟಕ್ಕೆ ಅವಶ್ಯಕವಾಗಿದ್ದ ತತ್ವ ಭೂಮಿಕೆಯನ್ನು ಒದಗಿಸಿದ್ದರಿಂದ ಈ ಇತಿಹಾಸವನ್ನು ರಾಷ್ಟ್ರೀಯ ಹೋರಾಟದ ಪೂರ್ವ ಇತಿಹಾಸ ಎಂದು ಕರೆದರೆ ತಪ್ಪಾಗಲಾರದು. ಆದರೆ ನಾವು ನೆನಪಿಟ್ಟುಕೊಳ್ಳಬೇಕಾದ ಸಂಗತಿಯೆಂದರೆ ಈ ಬಗೆಯ ಪರಿಗಣನೆ ಚರಿತ್ರೆಯ ಘಟನಾವಳಿಗಳನ್ನು ಒಂದು ಸರಳ ರೇಖೆಯಲ್ಲಿ ಗ್ರಹಿಸುವಂತೆ ನಮ್ಮನ್ನು ಪ್ರೇರೇಪಿಸಬಾರದು. ಏಕೆಂದರೆ ನಾವು ಈಗಾಗಲೇ ಗುರುತಿಸಿದ ಸಮಾಜ ಸುಧಾರಣಾ ಹೋರಾಟಗಳು ರಾಷ್ಟ್ರೀಯ ಸಂಗ್ರಾಮದ ಸಮಯದಲ್ಲೂ ಬಹುರೂಪಗಳಲ್ಲಿ ಮುಂದುವರಿದು ಸ್ವಾತಂತ್ರ್ಯ ಹೋರಾಟದ ಜೊತೆಗೆ ಕೆಲವೊಮ್ಮೆ ಸಂವಾದಿಯಾದ ಮತ್ತೆ ಕೆಲವೊಮ್ಮೆ ಸೆಣಸಾಟದ ಸಂಬಂಧವನ್ನು ಇರಿಸಿಕೊಂಡಿತ್ತು.

ಭಾರತದ ಸ್ವಾತಂತ್ರ್ಯ ಹೋರಾಟದ ಎರಡನೆಯ ಕಾಲಘಟ್ಟವನ್ನು ಆರಂಭಿಕ ಕಾಲಘಟ್ಟವೆಂದು ಗುರುತಿಸಲಾಗಿದೆ. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಬ್ರಿಟಿಷ್ ಚರಿತ್ರಾಕಾರರು ಹಾಗೂ ಅಡಳಿತಾಧಿಕಾರಿಗಳು ಗುರುತಿಸಿದ ಭಾರತದಲ್ಲಿನ ಕದಲಾಟಗಳ ಕಾಲದಿಂದ ಆರಂಭಿಸಿ ರಾಷ್ಟ್ರೀಯ ಕಾಂಗ್ರೆಸ್ಸಿನ ಉದಯ, ಸಂವಿಧಾನವಾದಿಗಳ ಪ್ರಾಬಲ್ಯ, ಸಂವಿಧಾನವಾದಿಗಳು ಮತ್ತು ತೀವ್ರವಾದಿಗಳ ನಡುವಿನ ಸೆಣಸಾಟ, ಇವು ಭಾರತದ ರಾಷ್ಟ್ರೀಯ ಹೋರಾಟದ ವಿಶೇಷ ಸಂಗತಿಗಳೆನ್ನಬಹುದು.

ಭಾರತದ ರಾಷ್ಟ್ರೀಯ ಹೋರಾಟವನ್ನು ಸಾಂವಿಧಾನಿಕ ಪಥದಲ್ಲಿ ಹಂತ ಹಂತವಾಗಿ ಸ್ವಾತಂತ್ರ್ಯದೆಡೆಗೆ ಕರೆದೊಯ್ಯಬೇಕೆನ್ನುವ ಗೋಪಾಲಕೃಷ್ಣ ಗೋಖಲೆ ಕಾಯಕತ್ವದ ಸಂಯಮವಾದಿಗಳು ಒಂದು ಕಡೆ, ಸ್ವಾತಂತ್ರ್ಯ ಅಥವಾ ಸ್ವರಾಜ್ಯ ನಾವು ಕ್ಷಿಪ್ರವಾಗಿ ಗಳಿಸಿಕೊಳ್ಳಬೇಕಾದ ಆಜನ್ಮ ಸಿದ್ಧ ಹಕ್ಕು ಎಂದು ಪ್ರತಿಪಾದಿಸಿದ ಬಾಲಗಂಗಾಧರ್ ತಿಲಕ್ ನಾಯಕತ್ವದ ತೀವ್ರಗಾಮಿಗಳು ಇನ್ನೊಂದು ಕಡೆ. ಇವರುಗಳ ನಡುವಿನ ಹಣಾಹಣಿಯೇ ಭಾರತದ ರಾಷ್ಟ್ರೀಯ ಹೋರಾಟದ ವಿಶೇಷ ಲಕ್ಷಣವೆನ್ನಬಹುದು. ಸಂಯಮವಾದಿಗಳು ಸ್ವಾತಂತ್ರ್ಯವನ್ನು ನಾವು ಒಂದು ದೀರ್ಘಕಾಲವಧಿಯಲ್ಲಿ ಕಷ್ಟಪಟ್ಟು ಗಳಿಸಿಕೊಳ್ಳಬೇಕಾದ ಸ್ಥಾಣಮಾನ ಎಂದು ಭಾವಿಸಿದರೆ ಅದನ್ನು ತೀವ್ರಗಾಮಿಗಳು ನಮ್ಮ ಹುಟ್ಟಿನಲ್ಲಿಯೇ ಸಲ್ಲಬೇಕಾದ ಸವಲತ್ತು ಎಂದು ತಿಳಿದರು. ಹೀಗೆ ರಾಷ್ಟ್ರೀಯ ಹೋರಾಟದ ಆರಂಭಿಕ ಕಾಲಘಟ್ಟ ದೀರ್ಘಕಾಲೀನ ಸಂವಿಧಾನಿಕ ನಡಿಗೆಯಲ್ಲಿ ಗಳಿಸಿಕೊಳ್ಳಬೇಕಾದ ಸಮಗ್ರ ಸ್ವಾತಂತ್ರ್ಯದ ಕಲ್ಪನೆ ಹಾಗೂ ಕ್ಷೇತ್ರ ಕಾರ್ಯಚರಣೆಯಲ್ಲಿ ಪಡೆಯಬೇಕಾದ ರಾಜಕೀಯ ಸ್ವಾತಂತ್ರ್ಯದ ನಡುವಿನ ತಿಕ್ಕಾಟದಲ್ಲಿ ಇಬ್ಭಾಗವಾಗಿತ್ತು.

ಸ್ವಾತಂತ್ರ್ಯ ಹೋರಾಟದ ಮೂರನೆಯ ಕಾಲಘಟ್ಟವನ್ನು ಗಾಂಧಿ ಯುಗವೆಂದು ಚರಿತ್ರಾಕಾರರು ಬಣ್ಣಿಸುತ್ತಾರೆ. ೧೯೧೬ರಿಂದ ಆರಂಭಗೊಂಡ ಈ ಯುಗ ೧೯೩೦ರ ಕಾಲಘಟ್ಟದವರೆಗೆ ಹರಿದುಕೊಂಡು ಬಂದಿದೆ. ಈ ಕಾಲಾವಧಿಯಲ್ಲಿ ಕಾಂಗ್ರೆಸ್ಸ್ ನಾಯಕತ್ವದ ರಾಷ್ಟ್ರೀಯ ಹೋರಾಟ ಗಾಂಧೀಜಿಯವರ ವರ್ಚಸ್ವಿ ಮುಂದಾಳತ್ವದಲ್ಲಿ ದೇಶವ್ಯಾಪಿಯಾಗಿ ಬೆಳೆಯಿತು. ಕಾಂಗ್ರೆಸ್ಸ್‌ನೊಳಗೆ ಸಂವಿಧಾನವಾದಿಗಳೂ ಮತ್ತು ತೀವ್ರವಾದಿಗಳ ನಡುವಿನ ಮತಭೇದಗಳನ್ನು ತನ್ನ ವಿಶಿಷ್ಟವಾದ ರಾಜಕೀಯ ಕ್ರಿಯಾಚರಣೆಯ ಮೂಲಕ ಪರಿಹರಿಸಿದ ಗಾಂಧಿ ಸಮಾಜ ಸುಧಾರಣೆ, ಸಂವಿಧಾನಿಕ ಅಡಳಿತ ಹಾಗೂ ಸ್ವಾತಂತ್ರ್ಯದ ಕಲ್ಪನೆಗಳನ್ನು ತಮ್ಮ ಸತ್ಯಾಗ್ರಹ ರಾಜಕಾರಣದಲ್ಲಿ ಒಂದುಗೂಡಿಸಿದರು. ಮೊತ್ತಮೊದಲ ಬಾರಿಗೆ ಭಾರತದ ರಾಷ್ಟ್ರೀಯ ಹೋರಾಟ ಮಾಧ್ಯಮ ವರ್ಗೀಯ ನೆಲೆಯ ಸಣ್ಣ ಸಣ್ಣ ಗುಂಪುಗಳಾಚೆ ತನ್ನನ್ನು ವಿಸ್ತರಿಸಿಕೊಂಡಿತ್ತು ಹಾಗೂ ಎಲ್ಲಾ ಪ್ರದೇಶಗಳನ್ನು ಹಾಗೂ ಸಮುದಾಯಗಳನ್ನು ತನ್ನ ತೆಕ್ಕೆಗೆ ಎಳೆದುಕೊಳ್ಳುವ ಸಕಲ ಪ್ರಯತ್ನಗಳನ್ನೂ ನಡೆಸಿತು.

೧೯೩೦ರ ನಂತರ ರಾಷ್ಟ್ರೀಯ ಹೋರಾಟದ ಕಾಲಘಟ್ಟವನ್ನು ಗಾಂಧಿಯೋತ್ತರ ಕಾಲಘಟ್ಟವೆಂದು ಚರಿತ್ರಾಕಾರರು ಬಣ್ಣಿಸಿದ್ದಾರೆ. ಈ ಕಾಲಘಟ್ಟದಲ್ಲಿ ಗಾಂಧೀಜಿ ರಾಷ್ಟ್ರೀಯ ಹೋರಾಟದ ಪ್ರಮುಖ ನಾಯಕರಾಗಿ ಮುಂದುವರಿದರೂ ಬಹುಮಟ್ಟಿಗೆ ರಾಷ್ಟ್ರೀಯ ಹೋರಾಟದ ತೀರ್ಮಾನ ತೆಗೆದುಕೊಳ್ಳುವ ಶಕ್ತಿ ಅವರ ಕೈಜಾರಿ ಕಾಂಗ್ರೆಸ್‌ನೊಳಗೆ ರೂಪುಗೊಂಡ ಹೊಸ ನಾಯಕತ್ವದ ಕೈ ಸೇರಿತು. ಬಹುಶಃ ಅತ್ಯಂತ ಸಂಕೀರ್ಣವಾದ ಅನೇಕ ವಿರೋಧಭಾಸಗಳನ್ನು ಹೊಂದಿರುವ ರಾಷ್ಟ್ರೀಯ ಹೋರಾಟದ ಈ ಕಾಲಘಟ್ಟ ಭಾರತದ ವಿಭಜನೆಯ ಅನಿವಾರ್ಯ ವಿದ್ಯಮಾನಕ್ಕೆ ಸಾಕ್ಷಿಯಾಯಿತೆನ್ನಬಹುದು. ಭಾರತದ ರಾಷ್ಟ್ರೀಯ ಹೋರಾಟದ ಒಳಗೆ ತಲೆ ಎತ್ತಿದ ವಿಭಿನ್ನ ಹಿತಾಸಕ್ತಿಗಳನ್ನು ಪ್ರತಿನಿಧಿಸಿದ ಗುಂಪುಗಳ ನಡುವಿನ ಹಣಾಹಣಿ ಭಾರತ ವಿಭಜನೆಯನ್ನು ಅನಿವಾರ್ಯಗೊಳಿಸಿತು ಎನ್ನಬಹುದು.

## ಭಾಗ – ೩

ಭಾರತ ವಿಭಜನೆಯ ರಾಜಕಾರಣ ಅನೇಕ ವಿರೋಧಭಾಸಗಳನ್ನು ಹೊರಸೂಸುವ ಒಂದು ಸಂಕೀರ್ಣವಾದ ವಿದ್ಯಮಾನವಾಗಿದ್ದರಿಂದ ಆ ಕುರಿತು ಕೆಲವು ಮಾತುಗಳನ್ನು ಹೇಳಲೇಬೇಕು. ಭಾರತ ವಿಭಜನೆಯನ್ನು ಒಂದು ಅನಿವಾರ್ಯವಾದ ಚಾರಿತ್ರಿಕ ದುರ್ಘಟನೆ ಎಂದು ತಿಳಿಯುವ ಪಕ್ಷದಲ್ಲಿ ಈ ದುರ್ಘಟನೆಗೆ ಕಾರಣವಾದ ಘಟನಾವಳಿಗಳನ್ನು, ಹಿತಾಸಕ್ತಿ ಗುಂಪುಗಳನ್ನು ನಾವು ಗುರುತಿಸುವ ಜೊತೆಗೆ ಭಾರತದ ರಾಷ್ಟ್ರೀಯ ಹೋರಾಟದ ಸೈದ್ಧಾಂತಿಕತೆಯಲ್ಲಿ ಹುದುಗಿರುವ ಕೆಲವು ವಿಸಂಗತಿಗಳನ್ನು ಗುರುತಿಸಬೇಕಾಗಿದೆ.

ರಾಷ್ಟ್ರದ ಕಲ್ಪನೆ ಮೂಲತಃ ಒಂದು ಐರೋಪ್ಯ ಚಾರಿತ್ರಿಕ ಪ್ರಕ್ರಿಯೆಯ ಉತ್ಪನ್ನ. ಹಾಗಿದ್ದೂ ಅದು ಭಾರತದಂತಹ ವಸಾಹತ್ತೋತ್ತರ ಸಮಾಜದಲ್ಲಿ ಮರು ಸಂಕಥನಗೊಂಡಾಗ ಮಹತ್ವ ಪೂರ್ಣವಾಗಿ ಬದಲಾಗುತ್ತದೆಯಾದರೂ ಅದರ ಐರೋಪ್ಯ ಮೂಲದ ಕೆಲವು ನಿರ್ಣಾಯಕ ಅಂಶಗಳು ಈ ಮರುಸಂಕಥನದಲ್ಲಿ ಮುಂದುವರಿಯುತ್ತದೆ. ಉದಾಹರಣೆಗೆ ಜನಾಂಗೀಯತೆಯು ರಾಷ್ಟ್ರದ ಐರೋಪ್ಯ ಚರಿತ್ರೆಯ ಒಂದು ಅವಿಭಾಜ್ಯ ಅಂಗ. ಈ ಅಂಶವನ್ನು ಭಾರತದ ರಾಷ್ಟ್ರೀಯ ಹೋರಾಟದ ಸನ್ನಿವೇಶದಲ್ಲಿ ಎಷ್ಟೇ ಮರೆಮಾಚಿದರೂ ಅದು ಒಂದಲ್ಲ ಒಂದು ರೂಪದಲ್ಲಿ ವ್ಯಕ್ತಗೊಳ್ಳುತ್ತದೆ. ಭಾರತದ ರಾಷ್ಟ್ರೀಯ ಹೋರಾಟ ಜನಾಂಗೀಯ ಒಡಕುಗಳನ್ನು ಎಷ್ಟೇ ಮರೆಮಾಚಲು ಯತ್ನಿಸಿದರೂ ಅದು ಅಗಿಂದಾಗ್ಯೆ ತನ್ನ ವಿಧ್ವಂಸಕ ರೂಪವನ್ನು ತೋರಿಸುತ್ತಲೇ ಬಂದಿದೆ.

೨೦ನೇಯ ಶತಮಾನದಲ್ಲಿ ಅಸ್ತಿತ್ವಕ್ಕೆ ಬಂದ ಹಿಂದೂ ಮತ್ತು ಮುಸ್ಲಿಂ ಜನಾಂಗೀಯ ನೆಲೆಯ ರಾಷ್ಟ್ರವಾದಗಳು ಭಾರತದ ರಾಷ್ಟ್ರೀಯ ಹೋರಾಟದ ಬಹುತ್ವದ ನೆಲೆಗಳನ್ನು ಹಾಗೂ ಪ್ರಜಾತಾಂತ್ರಿಕ ಆಶಯಗಳನ್ನು ಹಿಮ್ಮೆಟ್ಟಿಸುವುದರಲ್ಲಿ ಸಾಕಷ್ಟು ಯಶಸ್ವಿಯಾಗಿವೆ. ಹಿಂದೂ ರಾಷ್ಟ್ರವಾದ ಮತ್ತು ಮುಸ್ಲಿಂ ರಾಷ್ಟ್ರವಾದಗಳಲ್ಲಿ ಯಾವುದು ಮೊದಲಿಗೆ ಹುಟ್ಟಿಕೊಂಡಿತು ಯಾವುದು ನಂತರ ಪ್ರತಿದ್ವಂದಿಯಾಗಿ ಬಂದಿತು ಎನ್ನುವ ಜಿಜ್ಞಾಸೆ ಈಗ ನಿಷ್ಪ್ರಯೋಜಕ. ಸಾಂಸ್ಕೃತಿಕ ರಾಷ್ಟ್ರವಾದ ಎನ್ನುವ ನವಿರಾದ ಹೆಸರಿನಲ್ಲಿ ಕರೆಯಲ್ಪಡುವ ಈ ಎರಡು ವಿಧ್ವಂಸಕ ಮತೀಯ ವಿದ್ಯಮಾನಗಳು ಭಾರತದ ರಾಷ್ಟ್ರೀಯ ಹೋರಾಟದ ಪ್ರಜಾತಾಂತ್ರಿಕ ನೆಲೆಗಳನ್ನು ಸಂಕುಚಿತಗೊಳಿಸಿದೆ ಎನ್ನುವುದರಲ್ಲಿ ಎರಡು ಮಾತಿಲ್ಲ

ಭಾರತದ ರಾಷ್ಟ್ರೀಈಐ ಹೋರಾಟ ಗಾಂಧಿ ನಾಯಕತ್ವದ ಕಾಲಘಟ್ಟದಲ್ಲಿ ಬಹಳಷ್ಟು ಮಟ್ಟಿಗೆ ಜನಾಂಗೀಯ ಸಂಘರ್ಷದ ಒಡಕುಗಳನ್ನು ಬಗೆಹರಿಸಲು ಯತ್ನಿಸಿತು. ಗಾಂಧಿ ಸ್ವತಃ ಕೋಮು ಸೌಹಾರ್ದದ ಮಹತ್ವದ ಪ್ರಯತ್ನಗಳನ್ನು ೧೯೩೦–೪೦ರ ಕಾಲಘಟ್ಟದಲ್ಲಿ ನಡೆಸಿದರು. ಆದರೆ ರಾಷ್ಟ್ರೀಯ ಹೋರಾಟದ ಗಾಂಧೀಜಿಯ ನಾಯಕತ್ವ ಸಡಿಲಗೊಂಡು ಹೆಚ್ಚು ಹೆಚ್ಚು ಬಲಪಂಥೀಯಗೊಂಡಾಗ ಹಿಂದು–ಮುಸ್ಲಿಂ ಸಂಘರ್ಷಗಳನ್ನು ಬಗೆಹರಿಸುವಲ್ಲಿ ಅದು ಸೋತಿತು ಎನ್ನಬಹುದು. ೧೯೩೦ರ ನಂತರದಕಾಲಘಟ್ಟದಲ್ಲಿ ಗಾಂಧಿ ಕಾಂಗ್ರೆಸ್ಸಿನ ಪ್ರಶ್ನಾತೀತ ನಾಯಕರಾಗಿ ಉಳಿದಿರಲಿಲ್ಲ. ಈ ಸಮಯದಲ್ಲಿ ಒಂದು ರಾಷ್ಟೀಯ ಸಂಘಟನೆಯಾಗಿ ಕಾಂಗ್ರೆಸ್ ಕೋಮುವಾದಿ ಶಕ್ತಿಗಳನ್ನು ಬರಮಾಡಿಕೊಂಡಿತು. ಹಾಗಾಗಿ ಪ್ರಬುದ್ಧ ನಾಯಕತ್ವದ ಕೊರತೆ, ಅಧಿಕಾರ ದಾಹ ಮತ್ತು ಮತೀಯ ಅಸ್ವಸ್ಥತೆ ಇವುಗಳಿಂದಾಗಿ ಭಾರತದ ವಿಭಜನೆ ಅನಿವಾರ್ಯವೆನಿಸಿಕೊಂಡಿತು,

ದುರದೃಷ್ಟವೆಂದರೆ ಇಂದು ನಾವು ಭಾರತದ ವಿಭಜನೆಗೆ ಗಾಂಧೀಜಿಯೇ ಕಾರಣವೆನ್ನುವ ಪ್ರಭಾವಶಾಲಿಯಾದ ಸಂಕಥನವೊಂದನ್ನು ಕೇಳುತ್ತಿದ್ದೇವೆ ಇದು ಸತ್ಯಕ್ಕೆ ದೂರವಾದ ವಿಷಯ. ಬದಲಿಗೆ ಅವರು ಈ ವಿಭಜನೆಯನ್ನು ತಡೆಯಲು ಸರ್ವ ಪ್ರಯತ್ನಗಳನ್ನೂ ಮಾಡಿದರು. ಭಾರತದ ರಾಷ್ಟ್ರೀಯ ಹೋರಾಟದ ಕೊನೆಯ ಕಾಲಘಟ್ಟದಲ್ಲಿ ಗಾಂಧೀಜಿ ಏಕಾಕಿಯಾಗಿದ್ದರು ಎನ್ನುವುದನ್ನು ಅನೇಕ ಚರಿತ್ರಕಾರರು ದಾಖಲಿಸಿದ್ದಾರೆ. ಭಾರತದ ಸ್ವಾತಂತ್ರ್ಯ ಹೋರಾಟದ ಸೂಕ್ಷ್ಮ ಅವಲೋಕನ ಮಾಡಿದಾಗ ಉಂಟಾಗುವ ಅದರ ಜಟಿಲೆಯ ದಿಗ್ಭ್ರಮೆಯಲ್ಲಿ ನಾವು ಸಿಟ್ಟಿನಿಂದ ಕೆಲವರನ್ನು ಆರೋಪಿಗಳನ್ನು ಮಾಡುವುದು ಸೂಕ್ತವಲ್ಲ. ಬದಲಾಗಿ ಭಾರತದ ವಿಭಜನೆ ನಮ್ಮ ಚರಿತ್ರೆಯ ತನ್ನದೇ ಚಲನೆಗಳ ಒತ್ತಡದಲ್ಲಿ ಸಂಭವಿಸಿದ ಒಂದುದುಃಖದಾಯಕವಾದ' ಘಟನೆಯಾಗಿದೆ ಎಂದು ಭಾವಿಸವುದೇ ಲೇಸು.



**(ಲೇಖಕ ರಾಜಾರಾಂ ತೋಳ್ಪಾಡಿಯವರು ಮಂಗಳೂರು ವಿಶ್ವವಿದ್ಯಾನಿಲಯದ ರಾಜಕೀಐ ಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರಾಗಿದ್ದು ನಮ್ಮ ನಡುವಿನ ಸೂಕ್ಷ್ಮ ರಾಜಕಿಐ ಚಿಂತಜರೂ ಆಗಿದ್ದಾರೆ)**



ಚಿತ್ರ: ಗುಜಾರಪ್ಪ

ಕಥೆ

# ಮುದುಕ ಮತ್ತು ಮಗು

–ಮಿರ್ಜಾ ಬಷೀರ್

**ಮೊದಲೇ ದೀಪವಾರಿದ್ದ ಮೂರು ಮನೆಗಳ ಮುಂದೆ ಬಿದ್ದಿದ್ದ ಚಪ್ಪಲಿಗಳ ತೆಗೆದು ತನ್ನ ಚೀಲಕ್ಕೆ ಹಾಕಿಕೊಂಡ. ನಾಲ್ಕನೆಯ ಮನೆ ಮುಂದೆ ಒಂದು ಗಕ್ಕನೆ ನಿಂತ. ದೂರದ ಬೀದಿ ದೀಪದ ಬೆಳಕಿತ್ತು. ಅಲ್ಲಿ ಒಂದು ಜೊತೆ ಪುಟಾಣಿ ಚಪ್ಪಲಿಗಳಿದ್ದವು. ಬಣ್ಣ ಬಣ್ಣದ ಚಪ್ಪಲಿ. ಎರಡು ಅಥವಾ ಮೂರು ವರ್ಷದ ಮಗುವಿನ ಚಪ್ಪಲಿಗಳಿರಬಹುದು. ಪಾಪು ಪುಟ್ಟ ಪಾದಗಳನ್ನು ಹೊಂದಿದ್ದರೆ ನಾಲ್ಕು ವರ್ಷವಾಗಿರಲೂಬಹುದು. ಆ ಪುಟಾಣಿಯ ಪಾದಗಳ ರಕ್ಷಿಸುವ ಚಪ್ಪಲಿಗಳ ಅಂದ ಮುದುಕನ ಮನಸೂರೆಗೊಂಡಿತು. ಅವು ಅವನ ವಯಸ್ಸಾದ ಅಸ್ಪಷ್ಟ ಕಣ್ಣುಗಳಿಗೆ ಮಗುವನ್ನೇ ಮಡಚಿಟ್ಟಂತೆ ಕಂಡಿತು. ಮುದುಕ ಮೆಲ್ಲಗೆ ನಡುಗುವ ಕೈಗಳಲ್ಲಿ ಎತ್ತಿಕೊಳ್ಳಲು ಹೋದ. ಆದರೆ ತಕ್ಷಣವೇ ಕೈ ಹಿಂದಕ್ಕೆಳೆದುಕೊಂಡ.**

**ಅ**ವನು ಕೈಲಾಗದ ಮುದುಕ. ಅವನಿಗೆ ಏನೂ ಸಾಗುತ್ತಿರಲಿಲ್ಲ. ಭಿಕ್ಷೆಗೆ ಕೂತು ನೋಡಿದ. ಪ್ರಾರ್ಥನಾ ಸ್ಥಳಗಳ ಹತ್ತಿರ, ಹೋಟೆಲ್ ಪಕ್ಕ, ಬಸ್ ನಿಲ್ದಾಣದಲ್ಲಿ, ಕ್ಲಬ್‌ಗಳೆದುರು, ಬಾರ್‌ಗಳ ಹತ್ತಿರ. ಊಹೂಂ. ಜನ ದಾನವನ್ನು ಮರೆತೇಬಿಟ್ಟಿದ್ದಾರೆ ಅನ್ನಿಸಿತು. ಯಾವ ಮನೆಯ ಮುಂದೆ ಹೋಗಿ ನಿಂತು ಶಕ್ತಿ ಉಡುಗುವವರೆಗೆ ಕೂಗಿಕೊಂಡರೂ ಓಗೊಡದ ಜನ. ಕೈಗೆ ಬೀಳುವ ಎರಡೋ ನಾಲ್ಕೋ ರೂಪಾಯಿಗೆ ಏನು ಸಿಗುತ್ತದೆ? ಒಂದೋ ಎರಡೋ ಬನ್ನು, ಬ್ರೆಡ್ಡು, ಬಿಸ್ಕತ್ತು, ಮಂಡಕ್ಕಿ ಸಿಗಬಹುದು. ಅಷ್ಟು ತಿಂದರೆ ಹೊಟ್ಟೆ ತುಂಬುತ್ತದೆಯೆ? ಹಸಿವು ಒಂದು ಬಗೆಯ ಸಂಕಟ, ಅರೆ ಹೊಟ್ಟೆ ತಿಂದರೆ ಇನ್ನೊಂದು ಬಗೆಯ ಸಂಕಟ. ಅವನು ನಡೆಯುವಾಗಲೆಲ್ಲ ಏನನ್ನೋ ಹುಡುಕುವವನಂತೆ ನಡೆಯುತ್ತಾನೆ. ರಸ್ತೆಯ ಮೇಲೆ ಅದೃಷ್ಟವಶಾತ್ ಬಿದ್ದಿರಬಹುದಾದ ಹಣವನ್ನೋ, ರೊಟ್ಟಿಯ ತುಂಡನ್ನೋ, ಮತ್ತೇನನ್ನೋ ಹುಡುಕುವಂತೆ ತೋರುತ್ತದೆ.

ಹಿಂಗದ ಹಸಿವಿನ ಕಾಟಕ್ಕವನು ಕಳ್ಳತನ, ದರೋಡೆ ಮಾಡಬಲ್ಲನೇ? ಸರಿಯಾಗಿ ನಡೆದಾಡಲೇ ಶಕ್ತಿಯಿಲ್ಲ. ಅವನೇನು ಕಳ್ಳತನ ಮಾಡಬಲ್ಲ? ಪಿಕ್‌ಪಾಕೆಟ್ ಮಾಡಲಾರ. ಸುಳ್ಳು ಹೇಳಿ, ಮೋಸ ಮಾಡಲಾರ. ಅವನ ಮಾತುಗಳನ್ನು ಕೇಳುವವರೇ ದಿಕ್ಕಿಲ್ಲದಿರುವಾಗ ಅವನ ಮಾತು ಸುಳ್ಳಾದರೇನು? ಪರಮಸತ್ಯಗಳಾದರೇನು? ಇನ್ನು ಅವನಿಗೆ ಅಕ್ಷರಗಳ ಪರಿಚಯವೇ ಇರಲಿಲ್ಲ. ನಾಲ್ಕು ಅಕ್ಷರ ಕಲಿತಿದ್ದರೆ, ಮೈಯ್ಯಲ್ಲಿ ಕಸುವಿದ್ದಿದ್ದರೆ ದುಡಿದುಣ್ಣುತ್ತಿದ್ದನೋ ಏನೋ?

ಸಾವಿರಾರು ವಾಹನಗಳು ಓಡಾಡುವ ಹಗಲಲ್ಲಿ ಭಿಕ್ಷೆಯಲ್ಲೇನೂ ದಕ್ಕದೆ ಬಾರಿನ ಕಾವಲುಗಾರನೊಬ್ಬ 'ಹಚ್ಯಾ ಹುಚ್ಯಾ' ಎಂದು ಆಚೆ ಅಟ್ಟುತ್ತಿದ್ದಾಗ ಬೀಡಾ ಅಂಗಡಿಯವನೊಬ್ಬ ಕರೆದು 'ಲೇಯ್ ಪೆಕ್ರ, ಯಾಕಿಂಗೆ ನಾಯಿ ಬಾಳ್ ಬಾಳ್ತೀಯ? ನಾನೇಳ್ದಂಗೆ ಮಾಡು' ಎಂದು ಕಿವಿಯಲ್ಲಿ ಗುಟ್ಟು ಹೇಳಿದ.

ಮುದುಕನೀಗ ಭಿಕ್ಷೆ ಬೇಡುವುದಿಲ್ಲ. ದಿನವೂ ಬೆಳಿಗ್ಗೆ ಮತ್ತು ಸಾಯಂಕಾಲ ದೊಡ್ಡ ದೊಡ್ಡ ರಸ್ತೆಗಳನ್ನು ತಪ್ಪಿಸಿ, ಜನವಸತಿ ಇರುವ ಪ್ರದೇಶಗಳಲ್ಲಿ ಸುತ್ತುತ್ತಾನೆ. ಅವನು ಮನೆಯವರ ದುಡ್ಡು, ಬಂಗಾರ, ಬಟ್ಟೆಬರೆ, ಕಾರು, ಬೈಕು ಮುಂತಾದವುಗಳ ಬಗ್ಗೆ ಗಮನ ಹರಿಸುವುದಿಲ್ಲ. ಅಂಥಹವುಗಳು ಅವನಿಗೆ ಬೇಕಾಗಿಯೂ ಇಲ್ಲ. ಅವನ ಗಮನವೆಲ್ಲಾ ಬರೀ ಜನರು ಮೆಟ್ಟಿರುವ ಬೂಟು ಚಪ್ಪಲಿಗಳ ಬಗ್ಗೆ. ರಾತ್ರಿ ವೇಳೆ ಚಪ್ಪಲಿಗಳನ್ನು ಮನೆಯ ಹೊರಗೆ ಬಿಡುತ್ತಾರೋ ಅಥವಾ ಮನೆಯೊಳಗೆ ಸೇರಿಸುತ್ತಾರೋ? ಮನೆಯ ಕಿಟಕಿ ಬಾಗಿಲುಗಳ ಸ್ಥಾನ, ಮನೆಯವರು ಮಲಗುವ ವೇಳೆ, ಮನೆಯಲ್ಲಿ ವಯಸ್ಸಾದವರು, ಸಣ್ಣಪುಟ್ಟ ಮಕ್ಕಳ ವಿವರ ಮುಂತಾದವುಗಳನ್ನು ಕರಾರುವಾಕ್ಕಾಗಿ ತಿಳಿದುಕೊಳ್ಳುತ್ತಿದ್ದ. ಹತ್ತಿಪ್ಪತ್ತು ಮಹಡಿ ಇರುವ ಅಪಾರ್ಟ್‌ಮೆಂಟುಗಳ ಹತ್ತಿರ ಅಥವಾ ಕಾವಲುಗಾರರಿರುವ ಮನೆಯ ಮುಂದೆ ಅವನು ಸುಳಿಯುತ್ತಿರಲಿಲ್ಲ. ಅವೆಲ್ಲ ಅವನಿಗೆ ನಿಷ್ಪ್ರಯೋಜಕವಾಗಿದ್ದವು. ಯಾಕೆಂದರೆ ಅವನ ಕೆಲಸವೇ ಚಪ್ಪಲಿ, ಬೂಟುಗಳ ಕದಿಯುವುದಾಗಿತ್ತು. ಕದ್ದ ಮಾಲನ್ನು ಬೀಡಾ ಅಂಗಡಿಯವನಿಗೆ ಕದ್ದುಮುಚ್ಚಿ ತಲುಪಿಸಿ ಹಣ ಪಡೆಯುತ್ತಿದ್ದ. ಅವನು ಕೊಟ್ಟಷ್ಟು, ಇವನು ಇಸಕೊಂಡಷ್ಟು ಎಂಬಂತೆ. ಪ್ರಾರ್ಥನಾ ಸ್ಥಳಗಳ ಬಳಿ ರಾಶಿ ರಾಶಿ ಚಪ್ಪಲಿ ಬೂಟುಗಳಿದ್ದರೂ ಮುದುಕ ಅತ್ತ ಸುಳಿಯುತ್ತಿರಲಿಲ್ಲ. ಭಕ್ತರು ದೇವರಿಗಿಂತ ಹೆಚ್ಚು ಗಮನವನ್ನು ಚಪ್ಪಲಿ ಕಡೆ ಇಟ್ಟುಕೊಂಡಿರುತ್ತಿದ್ದರು. ಇಲ್ಲಿಗಿಂತ ಅವನಿಗೆ ಬಾರು, ಸಾರಾಯಿ ಅಂಗಡಿಗಳ ಬಳಿ ಅಲ್ಪಸ್ವಲ್ಪ ಗಿಟ್ಟುತ್ತಿತ್ತು.

ಒಂದಷ್ಟು ದಿನ ಹೀಗೇ ಕಳೆಯಿತು. ಮುದುಕ ಜಾಣತನದಿಂದ ಜಾಗ ಬದಲಿಸುತ್ತ ಯಾರಿಗೂ ಗೊತ್ತಾಗದಂತೆ ಕೆಲಸ ನಿರ್ವಹಿಸುತ್ತಿದ್ದ. ಅಲ್ಲದೆ ಮುದುಕ ಎಷ್ಟು ಹಣ್ಣಾಗಿದ್ದನೆಂದರೆ ಯಾರೂ ಅವನನ್ನು ಕಳ್ಳ ಎಂದು ಊಹಿಸಲೂ ಸಾಧ್ಯವಿರಲಿಲ್ಲ. ಕದ್ದ ಮಾಲು ಎಷ್ಟೇ ಚೆನ್ನಾಗಿರಲಿ ಬೀಡಾ ಅಂಗಡಿಯವನು ಜರಿದು, ಹೀನೈಸಿ ಕಡಿಮೆ ದುಡ್ಡು ಕೊಡುತ್ತಿದ್ದ. ಮುದುಕ ಜೋರು ಮಾಡುವಂತಿರಲಿಲ್ಲ. ಬೀಡಾ ಅಂಗಡಿಯವನು ಮಾತೆತ್ತಿದರೆ 'ಪೋಲೀಸ್' ಎನ್ನುತ್ತಿದ್ದ. ಅದಕ್ಕೆ ಸರಿಯಾಗಿ ಅನೇಕ ಪೋಲೀಸರು ಬೀಡಾ ಅಂಗಡಿಗೆ ಬಂದು ದಿಲ್ದಾರಾಗಿ ಬಾಳೆಹಣ್ಣು ತಿಂದು, ಬೀಡಾ ಅಗಿಯುತ್ತ, ಸಿಗರೇಟ್ ಎಳೆದು, ದುಡ್ಡು ಕೊಡದೇ ಹೋಗುವುದನ್ನು ಮುದುಕ ಕಣ್ಣಾರೆ ಕಂಡಿದ್ದ.

ಹೊಸ ವೃತ್ತಿಯಲ್ಲಿ ಮುದುಕನ ಹಸಿವೇನು ಸಂಪೂರ್ಣ ಕಡಿಮೆಯಾಗಲಿಲ್ಲ. ದಿನದ ದುಡಿಮೆ ಐದು–ಹತ್ತು ರೂಪಾಯಿಗಳ ಮೇಲೇರಲಿಲ್ಲ. ಕಷ್ಟಕಾಲಕ್ಕಿರಲಿ ಎಂದು ಅದರಲ್ಲೇ ಒಂದಷ್ಟು ದುಡ್ಡನ್ನು ದುಂಡಗಿಟ್ಟುಕೊಂಡ. ಹಾಗೆ ಕೂಡಿಸಿದ ದುಡ್ಡನ್ನು ಮುದುಕ ತನ್ನ ಪಂಚೆಯೊಳಗಿನ ನಿಕ್ಕರಿನ ಜೇಬಿನಲ್ಲಿಟ್ಟು ಹೊರಗೆ ಬೀಳದಂತೆ ಪಿನ್ನು ಹಾಕಿಕೊಂಡಿದ್ದ. ಅವನ ಎರಡರಲ್ಲೊಂದು ಕೈ ಪ್ರತಿ ಎರಡು ಮೂರು ನಿಮಿಷಕ್ಕೊಮ್ಮೆ ಆ ಜೇಬನ್ನು ಸವರಿ ಒಳಗೆ ಹಣವಿರುವುದನ್ನು ಖಾತ್ರಿಪಡಿಸುತ್ತಿದ್ದವು. ಯಾವುದೇ ಬ್ಯಾಂಕ್ ಲಾಕರ್‌ಗಿನ್ನ ಮುದುಕನ ಜೇಬು ಸುರಕ್ಷಿತ ಎಂಬುದರಲ್ಲಿ ಎರಡು ಮಾತಿರಲಿಲ್ಲ. ಆದರೆ ಮುದುಕ ಒಳಗೊಳಗೇ ಕೊರಗತೊಡಗಿದ. ತಾನು ಮಾಡುವ ಕೆಲಸ ತನಗೆ ಖುಷಿ ಕೊಡದೇ ಹೋದರೆ ಅದೇ ಕೆಲಸದಲ್ಲಿ ಮುಂದುವರಿಯಬೇಕೆ? ಸಿಗುವ ಮೊದಲ ಅವಕಾಶದಲ್ಲಿ ಅಂತಹ ಕೆಲಸಕ್ಕೆ ವಿದಾಯ ಹೇಳುವುದು ಒಳ್ಳೆಯದಲ್ಲವೆ? ಜನರ ಕಣ್ಣು ತಪ್ಪಿಸಬಹುದು ಆದರೆ ದೇವರ ಕಣ್ಣು ತಪ್ಪಿಸಲು ಸಾಧ್ಯವೆ? ಎಂಬ ಜಿಜ್ಞಾಸೆಗೆ ಬಿದ್ದಿದ್ದ.

ಕಾಕತಾಳೀಯವೋ ಎಂಬಂತೆ ಒಂದು ವಿಚಿತ್ರ ಘಟನೆ ಅದೇ ಸಮಯದಲ್ಲಿ ಜರುಗಿತು. ಅದನ್ನು ಮುದುಕ ಊಹಿಸಿರಲಿಲ್ಲ. ಆದರೆ ಅವನರಿವಿಗೇ ಬರದಂತೆ ಅವನ ಅಂತರಾತ್ಮ ಅಂತಹ ಅವಕಾಶಕ್ಕೆ ಕಾತರಿಸುತ್ತಿತ್ತು ಎಂದು ಕಾಣುತ್ತದೆ.

ಅಂದು ಸಾಯಂಕಾಲ ಚಪ್ಪಲಿ ಕದಿಯಲು ಮನೆ ಹುಡುಕುತ್ತಾ ತಿರುಗುತ್ತಿರುವಾಗ ಮುದುಕ ಒಂದು ಮನೆಯನ್ನು ಮನದಲ್ಲೇ ಗುರುತಿಸಿಕೊಂಡ. ಅದು ಹಳೆಯ ಕಾಲದ ಶಿಥಿಲವಾದ ಹೆಂಚಿನ ಕಟ್ಟಡವಾಗಿತ್ತು. ಸಾಲಾಗಿ ನಾಲ್ಕು ಮನೆಗಳಿದ್ದವು. ಹೊಟ್ಟೆ ಬಟ್ಟೆಗೂ ಪೇಚಾಡುವಂಥ ಕುಟುಂಬಗಳು ಅವುಗಳಲ್ಲಿ ವಾಸವಾಗಿರಬಹುದೆಂದುಕೊಂಡ. ನಾಲ್ಕೂ ಮನೆಯ ಮುಂದೆ ಅನೇಕ ಜೊತೆ ಚಪ್ಪಲಿಗಳು ಅಸ್ತವ್ಯಸ್ತವಾಗಿ ಬಿದ್ದಿದ್ದವು. ಬೊಗಳುತ್ತಾ ಬಂದ ನಾಯಿಗೆ ಒಂದು ತುಂಡು ಬ್ರೆಡ್ ಹಾಕಿ ತಲೆ ಸವರಿ ಪರಿಚಯಿಸಿಕೊಂಡ. ನಾಯಿ ಬಾಲವಲ್ಲಾಡಿಸಿತು.

ಅಂದು ರಾತ್ರಿ ಹತ್ತರ ನಂತರ ಮುದುಕ ಏನೋ ತುರ್ತು ಕೆಲಸವಿರುವವನಂತೆ ಆ ಮನೆಯಿದ್ದ ನಗರದಂಚಿನಲ್ಲಿ ಠಳಾಯಿಸತೊಡಗಿದ. ತಾನು ಗುರುತಿಸಿದ್ದ ಮನೆಯ ಓಣಿಯಲ್ಲಿ ಅನುಮಾನಕ್ಕಾಸ್ಪದವಿಲ್ಲದಂತೆ ನಡೆದಾಡಿದ. ನಾಲ್ಕು ಮನೆಗಳಲ್ಲಿಯೂ ದೀಪ ಆರಿಸಿದ್ದರು. ಆ ಓಣಿಯಲ್ಲಿ ಅದೇ ಕೊನೆಯ ಕಟ್ಟಡವಾಗಿದ್ದು, ಅದರಾಚೆ ಒಂದು ಪಾಳು ಬಿದ್ದ ಕಟ್ಟಡವಿತ್ತು. ಅಲ್ಲಿ ಹೋಗಿ ಮುದುಕ ಸಮಯ ಕಳೆಯತೊಡಗಿದ.

ಮಧ್ಯರಾತ್ರಿಯ ನಂತರ ವಾಹನ ಜನಸಂಚಾರವೆಲ್ಲ ನಿಂತ ಮೇಲೆ ನಿಧಾನಕ್ಕೆ ಹೊರಬಂದು ಗೋಡೆಗಾತು ನಡೆದ. ಬಾಲವಾಡಿಸಿದ ನಾಯಿಗೆ ಇಡೀ ಒಂದು ಬನ್ನು ಹಾಕಿದ. ಮೊದಲೇ ದೀಪವಾರಿದ್ದ ಮೂರು ಮನೆಗಳ ಮುಂದೆ ಬಿದ್ದಿದ್ದ ಚಪ್ಪಲಿಗಳ ತೆಗೆದು ತನ್ನ ಚೀಲಕ್ಕೆ ಹಾಕಿಕೊಂಡ. ನಾಲ್ಕನೆಯ ಮನೆ ಮುಂದೆ

ಬಂದು ಗಕ್ಕನೆ ನಿಂತ. ದೂರದ ಬೀದಿ ದೀಪದ ಬೆಳಕಿತ್ತು. ಅಲ್ಲಿ ಒಂದು ಜೊತೆ ಪುಟಾಣಿ ಚಪ್ಪಲಿಗಳಿದ್ದವು. ಬಣ್ಣ ಬಣ್ಣದ ಚಪ್ಪಲಿ. ಎರಡು ಅಥವಾ ಮೂರು ವರ್ಷದ ಮಗುವಿನ ಚಪ್ಪಲಿಗಳಿರಬಹುದು. ಪಾಪು ಪುಟ್ಟ ಪಾದಗಳನ್ನು ಹೊಂದಿದ್ದರೆ ನಾಲ್ಕು ವರ್ಷವಾಗಿರಲೂಬಹುದು. ಆ ಪುಟಾಣಿಯ ಪಾದಗಳ ರಕ್ಷಿಸುವ ಚಪ್ಪಲಿಗಳ ಅಂದ ಮುದುಕನ ಮನಸೂರೆಗೊಂಡಿತು. ಅವು ಅವನ ವಯಸ್ಸಾದ ಅಸ್ಪಷ್ಟ ಕಣ್ಣುಗಳಿಗೆ ಮಗುವನ್ನೇ ಮಡಚಿಟ್ಟಂತೆ ಕಂಡಿತು. ಮುದುಕ ಮೆಲ್ಲಗೆ ನಡುಗುವ ಕೈಗಳಲ್ಲಿ ಎತ್ತಿಕೊಳ್ಳಲು ಹೋದ. ಆದರೆ ತಕ್ಷಣವೇ ಕೈ ಹಿಂದಕ್ಕೆಳೆದುಕೊಂಡ. ಈ ಪುಟಾಣಿ ಚಪ್ಪಲಿಗಳು ಆ ಮಗುವಿನಲ್ಲಿ ಎಂತಹ ಸಂತೋಷ ಉಕ್ಕಿಸಿರಬಹುದು! ಪುಟ್ಟ ಬಡ ಮಗುವಿಗೆ ಈ ಚಪ್ಪಲಿಗಳು ಅದೆಂತಹ ಆತ್ಮವಿಶ್ವಾಸ ತುಂಬಿ ಎದೆಯುಬ್ಬಿಸಿ ನಡೆಯುವಂತೆ ಮಾಡಿರಬಹುದು! ಆ ಎಳೆ ಜೀವಕ್ಕೆ ಎಂತಹ ಜೀವನೋತ್ಸಾಹದ ಚಿಮ್ಮುಹಲಗೆಯಾಗಿವೆಯೋ ಈ ಚಪ್ಪಲಿಗಳು! ಅಯ್ಯೋ! ಪುಟಾಣಿಯ ಎಷ್ಟು ಕಹಿ ಕಂಬನಿ ಒರೆಸಿ ಹೂ ನಗೆ ಉಕ್ಕಿಸಿವೆಯೋ! ಮುದುಕ ಯೋಚನೆಗಳಲ್ಲಿ ಕಳೆದೇಹೋದ. ಒಂದೇ ಒಂದು ಸಲ ಈ ಚಪ್ಪಲಿಗಳನ್ನು ಮುಟ್ಟುತ್ತೇನೆ ದೇವರೇ! ಕದಿಯುವುದಿಲ್ಲ ಎಂದು ಆಕಾಶದ ಕಡೆ ತಲೆಯೆತ್ತಿ ನುಡಿದ. ಆ ಚಪ್ಪಲಿಗಳನ್ನು ಹೂ ಎತ್ತಿದಂತೆ ಎತ್ತಿ ಕಣ್ಣಿಗೊತ್ತಿಕೊಂಡ.

ಹಾಗೆ ಒತ್ತಿಕೊಂಡ ಕೂಡಲೇಅದರಲ್ಲಿ ಬಲಗಾಲಿನ ಚಪ್ಪಲಿಯ ಉಂಗುಷ್ಟ ಕಿತ್ತು ಹೋಗಿದ್ದು ಅವನ ಗಮನಕ್ಕೆ ಬಂದದ್ದೇ ಅವನ ಎದೆ ದಸಕ್ಕೆಂದಿತು. ಹರಿದ ಚಪ್ಪಲಿಗಳನ್ನೇ ಹಾಕಿಕೊಳ್ಳುತ್ತಿರುವ ಮಗುವಿನ ಬಗ್ಗೆ ಕರುಣೆ ಉಕ್ಕಿತು. ಕಣ್ಣೆದುರು ಆಡುವ ಮಗು ಇದ್ದಕ್ಕಿದ್ದಂತೆ ಬಿದ್ದು ಕಾಲು ಮುರಿದುಕೊಂಡಂತೆ ಭಾವವಾಗಿ ವಿಹ್ವಲನಾದ. ಕೂಡಲೇ ಚಪ್ಪಲಿಗಳನ್ನು ಅಲ್ಲೇ ಇಟ್ಟ. ಮನಸ್ಸಿನಲ್ಲಿ ಏನನ್ನೋ ನಿರ್ಧರಿಸಿಕೊಂಡಂತೆ ಚೀಲದಲ್ಲಿದ್ದ ಕದ್ದ ಚಪ್ಪಲಿಗಳನ್ನು ಅಲ್ಲಿಯೇ ಕೊಡವಿದ. ಚೀಲವನ್ನು ಎಸೆದು ಧೈರ್ಯವಾಗಿ ನಡೆಯುತ್ತ ಅಲ್ಲಿಂದ ಕಣ್ಮರೆಯಾದ. ಮುದುಕ ಧೈರ್ಯದಿಂದ ಹೆಜ್ಜೆ ಹಾಕಿದರೂ ಮಗುವಿನ ಚಪ್ಪಲಿಗಳ ಕಂಡು ಅವನು ವಿಚಲಿತನಾಗಿದ್ದ.

ಅವನ ಮನದಲ್ಲಿ ಬಹುಹಿಂದೆ ತಾನು ಬಿಟ್ಟು ಬಂದಿದ್ದ ತನ್ನ ಕುಟುಂಬದ ನೆನಪಾಯಿತು, ಕಣ್ಣುಗಳು ಹನಿಗೂಡಿದವು. ಕೂಲಿನಾಲಿ ಮಾಡಿ ತಾನು ಓದಿಸಿದ್ದ ಮಗ ಕೆಲಸಕ್ಕೆ ಸೇರಿ ಮದುವೆಯಾದ ನಂತರ ಹೆಂಡತಿ ಮಾತಿಗೆ ಮರುಳಾಗಿ ನಿರುಪಯುಕ್ತನಾಗಿದ್ದ ತನ್ನನ್ನು ನಿರ್ಲಕ್ಷಿಸತೊಡಗಿದ್ದ. ಸೊಸೆಯ ಮುಂದೆಯೇ ಹೀನಾಯವಾಗಿ ಬೈಯ್ಯುತ್ತಿದ್ದ. ಆಗೆಲ್ಲ ತಕ್ಷಣ ಮನೆಬಿಟ್ಟು ಹೋಗುವ ಯೋಚನೆ ತನನಗಾಗುತ್ತಿದುದನ್ನೂ, ಆದರೆ ಮಗನ ಪುಟ್ಟ ಮಗಳ ಮುದ್ದುಮಾತು ಮತ್ತು ಪ್ರೀತಿ ತನ್ನನ್ನು ಹಾಗೆ ಮಾಡಲು ತಡೆಯುತ್ತಿದ್ದುದನ್ನೂ ನೆನೆದ. ತನ್ನ ಆ ಮುದ್ದು ಮೊಮ್ಮಗಳಲ್ಲಿ ಗತಿಸಿದ ತನ್ನ ಹೆಂಡತಿಯ ತಾಯ್ತನದ ಪಸೆಯನ್ನು ಕಂಡಿದ್ದ ಆತ ಬಹಳ ದಿನ ಆ ಮಗುವಿನ ಸಾಹಚರ್ಯವನ್ನು ಬಿಡಲಾಗದೆ ಮಗ–ಸೊಸೆಯ ಹಿಂಸೆಯನ್ನು ತಾಳಿಕೊಂಡು ಅಲ್ಲೇ ಇದ್ದವನು ಹಿಂಸೆ ತಾರಕ್ಕೇರಿದಾಗ ಎಲ್ಲ ಕಡಿದುಕೊಂಡು ಆದ್ದಾಗಲಿ ಎಂದು ದೇವರ ಮೇಲೆ ಭಾರ ಹಾಕಿ ಮನೆಬಿಟ್ಟು ಊರುಬಿಟ್ಟು ದೂರ ಬಂದುಬಿಟ್ಟಿದ್ದ.. ಹಾಗೆ ಬರುವಾಗ ತನ್ನ ಮೊಮ್ಮಗಳು ಚಪ್ಪಲಿ ಕೊಡಿಸೆಂದು ತನ್ನ ಅಪ್ಪನನ್ನು ಕಾಡುತ್ತಿದ್ದುದೂ, ಆ ಅಪ್ಪ ನಾಳೆ ನಾಳೆ ಎಂದು ದಿನಗಟ್ಟಲೆ ಮಗುವನ್ನು ಆಸೆಯಿಂದ ಕಾಯುವಂತೆ ಮಾಡುತ್ತಿದ್ದುದೂ, ಆಗ ತನ್ನಲ್ಲಿ ಹಣವಿದ್ದರೆ ತಾನೇ ಅದನ್ನು ಕೊಂಡುತಂದು ಮಗುವಿನ ಕಾಲಿಗೆ ಹಾಕಿ ಆನಂದಪಡಬಹುದಿತ್ತು ಎಂದು ಹಲುಬಿದ್ದೂ ನೆನಪಿಗೆ ಬಂದು ಅವನ ಹೃದಯ ಭಾರವಾಯಿತು.

ಮರುದಿನ ಮಧ್ಯರಾತ್ರಿಯ ಹೊತ್ತಿಗೆ ಮುದುಕ ಅದೇ ಮನೆಯ ಬಳಿ ಬಂದ. ಅದು ನಿನ್ನೆಯಂತೆಯೇ ಬಾಗಿಲು ಹಾಕಿತ್ತು. ದೀಪವಾರಿತ್ತು. ಆ ಮನೆಯೇ ದೇವರಿರುವ ಸ್ಥಾನವೋ ಎಂಬಂತೆ ಕೈಮುಗಿದ. ಅವನ ಕೈಯ್ಯಲ್ಲೊಂದು ಪೊಟ್ಟಣವಿತ್ತು. ನಿಧಾನಕ್ಕೆ ಪೊಟ್ಟಣ ಬಿಚ್ಚಿದ. ಅದರೊಳಗೆ ಫಳ ಫಳ ಹೊಳೆವ ಒಂದು ಜೊತೆ ಪುಟಾಣಿ ಚಪ್ಪಲಿಗಳಿದ್ದವು. ತಾನು ಇದುವರೆಗೆ ಕೂಡಿಟ್ಟಿದ್ದ ಹಣವನ್ನೆಲ್ಲ ಕೊಟ್ಟು, ಹಲವು ಅಂಗಡಿಗಳ ಅಲೆದು ಹೊಸ ಚಪ್ಪಲಿ ಕೊಂಡು ತಂದಿದ್ದ. ಅಂಗಡಿಯವರು ತಿರುಪೆ ಮುದುಕನ ಬಳಿ ದುಡ್ಡು ಇರಲಾರದೆಂದು ಚಪ್ಪಲಿ ತೋರಿಸಲು ತಾತ್ಸಾರ ಮಾಡುತ್ತಿದ್ದರು. ಜೀವನದಲ್ಲಿ ಎಂದೂ ಚಪ್ಪಲಿ ಹಾಕಿ ಗೊತ್ತಿಲ್ಲದ ಅವನಿಗೆ ಚಪ್ಪಲಿಯ ದರ ಗೊತ್ತಿರಲಿಲ್ಲ. ಅದಕ್ಕೆ ಮುದುಕ ಮೊದಲೇ ತನ್ನಲ್ಲಿದ್ದ ದುಡ್ಡು ತೋರಿಸಬೇಕಿತ್ತು. ಅಂಗಡಿಯವರು ಸಾಧಾರಣವಾದಂತಹ ಚಪ್ಪಲಿ ತೋರಿಸುತ್ತಿದ್ದರು. ಮುದುಕ ಒಳ್ಳೆಯ ಚಪ್ಪಲಿಗಾಗಿ ಜಗ್ಗಾಡುತ್ತಿದ್ದ. ಕೊನೆಗೆ ತನ್ನಲ್ಲಿದ್ದ ಹಣವನ್ನೆಲ್ಲ ಕೊಟ್ಟು ನಿಬ್ಬೆರಗಾಗುವಂತಹ ಚಪ್ಪಲಿಗಳನ್ನು ಒಪ್ಪಿ ತಂದಿದ್ದ. ಅವುಗಳನ್ನು ನಿನ್ನೆ ನೋಡಿದ್ದ ಕಿತ್ತು ಹೋಗಿದ್ದ ಪುಟ್ಟ ಚಪ್ಪಲಿಗಳ ಪಕ್ಕದಲ್ಲಿಟ್ಟ. "ಇವು ಪುಟಾಣಿಗೆ. ಎಳೆಯ ಪುಟಾಣಿ ಪಾದಗಳಿಗೆ. ಇವು ರಕ್ಷಿಸಲಿ ಪುಟಾಣಿಯನ್ನು ಏಳುಬೀಳುಗಳಲ್ಲಿ. ಇವು ಒಯ್ಯಲಿ ಪುಟಾಣಿಯನ್ನು ಋಜುಮಾರ್ಗದಲ್ಲಿ. ಇವು ಸಾಗಿಸಲಿ ಪುಟಾಣಿಯ ತಂಪಲ್ಲಿ ನೆರಳಲ್ಲಿ. ಎಂದೆಂದಿಗೂ ಸಾಗಲಿ ದೇವರ ನೆರಳಲ್ಲಿ" ಮುಂತಾಗಿ ಮಣಮಣಿಸುತ್ತ ಮುದುಕ ಅಲ್ಲಿಂದ ಹೊರಟ. ಅವನ ಜೀವ ತುಂಬಿಬಂದಿತ್ತು. ಅವನ ಕಣ್ಣಲ್ಲಿ ನೀರಿತ್ತು. ಸಾರ್ಥಕತೆಯಿತ್ತು.



**(ವೃತ್ತಿಯಿಂದ ಪಶುವೈದ್ಯರಾಗಿದ್ದ ಲೇಖಕರು ಕಥೆಗಾರ ಮತ್ತು ಕವಿಯಾಗಿಯೂ ಹೆಸರು ಮಾಡಿದ್ದು ತುಮಕೂರಿನಲ್ಲಿ ನೆಲೆಸಿದ್ದಾರೆ.)**

---

## ನವಿಲುಗರಿ

### ಆ ಹಕ್ಕಿ ಕೂಗನು ಕೇಳುತಿರುವೆ

ಆ ಹಕ್ಕಿ ಕೂಗನು ಕೇಳುತಿರುವೆ...
ಮಣ್ಣು ಸೇರಿರುವ ಅಮ್ಮನ
ಕೈಗೂಡದೇ ಹೋದ ಕನಸನ್ನ
ಅದು ಬಿತ್ತರಿಸುತ್ತಿದೆ
ಮತ್ತು ಬಿಟ್ಟು ಹೋಗುವಾಗ
ನಮಗೆ ಹೇಳಲಾಗದೇ ಹೋದ
ಕೊನೆಯ ನುಡಿಯನ್ನ
ಅದು ಪ್ರಸ್ತುತ ಪಡಿಸುತ್ತಿದೆ .
ಎದುರಿಗಿದೆ ಬಾಳೆ
ದೊಡ್ಡ ದೊಡ್ಡ ಎಲೆ !
ಆ ಕನಸನ್ನ
ಆ ನುಡಿಯನ್ನ
ಆ ಬಾಳೆಲೆ ಮೇಲೆ
ಇಟ್ಟು ನೋಡುವೆ ; ಮಾತಾಡುವೆ
ತಿರುಗಿ ಬರುವುದು ಯಾವಾಗೆಂದು
ಹೇಳದೇ ಹೋದ ಅಮ್ಮನ ಚೊಕ್ಕ ನಗುವನು
ಎಲ್ಲಿಕ್ಕಿಕೊಳುವುದೆಂದು
ಹೊಳೆಯದೆ
ಹೃದಯದ ಕದವ
ಇಗೋ ತೆರೆದು ಬಿಡುವೆ.



**–ಕೆ.ಪಿ. ಮೃತ್ಯುಂಜಯ**



ಚಿತ್ರ: ವಿಜಯಶ್ರೀ ಹಾಲಾಡಿ

### ನಾನು-ನೀನು

ವಿಶ್ವವ್ಯಾಪಕ ದೃಷ್ಟಿಯ
ನಿನ್ನಲೇ ನೆಲೆಗೊಳಿಸಿರುವೆ
ನೀರು ನೆರಳು ಹೂವು ಹಕ್ಕಿ ಎಲ್ಲವನು
ಕಾಯುವ
ಕೈಗಳನ್ನಲ್ಲವೇ ನಾನು ಈವರೆಗೂ
ಹಂಬಲಿಸಿದ್ದು?

ನೋಟವೀಗ ಚಂಚಲವಿಲ್ಲ
ಬಾಳ ಪಯಣದ ಗುರಿಗೆ
ಸನ್ನದ್ಧವಾಗಿರುವ ಕಾಲುಗಳು
ಚರ್ಮದ ಹೊದಿಕೆ ಬಣ್ಣ ಕಳೆದುಕೊಂಡು
ಸುಕ್ಕಾಗಿ ಕಪ್ಪಾಗಿ ಕಲೆಯಾಗಿ ಜೋತು
ಬಿದ್ದರೂ
ಅದರೊಳಗಿರುವ ಹೃದಯವನ್ನು
ಅದರೊಳಗಿರುವ ಪ್ರೀತಿಯನ್ನು
ನೀನು ಪ್ರೀತಿಸುವೆ ಎಂಬ ಭರವಸೆ ನನ್ನದು
ಬದುಕಿ ಉಳಿದಿರುವೆ.

**–ಆರ್. ಜ್ಯೋತಿ**





# ಶಂಕರಾಚಾರ್ಯರ ಅದ್ವೈತ ತತ್ವ ವಿಚಾರ

–ಕೆ.ವಿ. ಅಕ್ಷರ



ಭಾರತದ ದಾರ್ಶನಿಕ ಪರಂಪರೆಯ ಹೃದಯ ಸ್ಥಾನದಲ್ಲಿರುವ ಅದ್ವೈತ (ಎರಡಿಲ್ಲ) ತತ್ವದ ಮೂಲಬೇರು ನಮ್ಮ ವೇದೋಪನಿಷತ್ತುಗಳಲ್ಲೇ ಕಾಣಬರುವುದಾದರೂ ಅದನ್ನು ಕುರಿತ ಆಳದ ಜಿಜ್ಞಾಸೆ ಮತ್ತು ಪ್ರತಿಪಾದನೆ ಬಂದದ್ದು ಏಳನೇ ಶತಮಾನದ ಮಹಾ ಸಂನ್ಯಾಸಿ ಶಂಕರರಿಂದ. ಹಾಗೆ ನೋಡಿದರೆ ಈ ಅದ್ವೈತವು ಬೌದ್ಧವೂ ಸೇರಿದಂತೆ ನಮ್ಮ ಎಲ್ಲ ದಾರ್ಶನಿಕ ಚಿಂತನಾ ಕ್ರಮಗಳಲ್ಲೂ ಹಾಸುಹೊಕ್ಕಾಗಿದ್ದು, ಒಟ್ಟಾರೆ ಭಾರತೀಯ ದರ್ಶನದ ತಿರುಳೇ ಟೀಕೆ, ವಿರೋಧ, ವಿಸ್ತರಣೆಗಳೂ ಸೇರಿದಂತೆ ಅದ್ವೈತ ತತ್ವದ ವಿಮರ್ಶೆಯೇ ಆಗಿದೆ ಎಂದು ಹೇಳಬಹುದು.

ಈ ಅದ್ವೈತ ತತ್ವದ ಒಂದು ಸೂಕ್ಷ್ಮ ಪರಿಚಯವನ್ನು ನಾವಿಲ್ಲಿ ಇತ್ತೀಚೆಗೆ ಕೆ.ವಿ. ಅಕ್ಷರ ಅವರು ಬರೆದಿರುವ 'ಶಂಕರ ವಿಹಾರ' ಎಂಬ ಪುಸ್ತಕದಿಂದ ಆಯ್ದ ಒಂದು ಭಾಗವನ್ನು ಪ್ರಕಟಿಸುವ ಮೂಲಕ ಪ್ರಸ್ತುತಪಡಿಸುತ್ತಿದ್ದೇವೆ–ಸಂ

ತತ್ವಶಾಸ್ತ್ರದ ನಿಖರ ಪರಿಭಾಷೆಯಲ್ಲಿ ಹೇಳುವುದಾದರೆ, ಶಂಕರಾದ್ವೈತವನ್ನು ನಾವು 'ಬ್ರಹ್ಮವಿವರ್ತವಾದ' ಎಂಬ ಹೆಸರಿನಿಂದ ಕರೆಯಬೇಕು. 'ವಿವರ್ತ' ಎಂದರೆ ಒಂದಿದ್ದದ್ದು ಗಿರಗಿರನೆ ತಿರುಗುತ್ತ ಹಲವು ರೂಪಗಳಾಗಿ ತೋರಿಕೆಯಾಗುವ ವಿದ್ಯಮಾನ. ಇಂಥ ವಿ–ವರ್ತದಿಂದಾಗಿ, ಬ್ರಹ್ಮವು ಬಹುರೂಪದ ಲೋಕವಾಗಿ ನಮ್ಮೆದುರು ಕಾಣಿಸಿಕೊಳ್ಳುತ್ತದೆ; ಆದರೆ, ನಮ್ಮ ಅವಿದ್ಯೆಯ (ತಪ್ಪು ಕಲಿಕೆ) ಕಾರಣದಿಂದ ನಮ್ಮೊಳಗೆ ಅಧ್ಯಾಸ (ತಪ್ಪು ಗ್ರಹಿಕೆ) ಉಂಟಾಗಿ, ಲೋಕದ ಬಹುರೂಪಗಳ ಹಿಂದಿರುವ 'ಅದು' (ತತ್) ನಮಗೆ ಕಾಣದೆ, ಮೋಸ (ಮಾಯೆ) ಆಗುತ್ತದೆ. ಹೀಗೆ, ಲೋಕಸಮಸ್ತವೂ ಬ್ರಹ್ಮವಸ್ತುವಿನ ಬೇರೆಬೇರೆ ರೂಪಾಂತರಗಳೇ ಸರಿ ಎಂಬುದನ್ನು ಸಾಧಿಸಲು ಈ ವಾದವು ಯತ್ನಿಸುವುದರಿಂದ ಇದು – ಬ್ರಹ್ಮವಿವರ್ತವಾದ. ರೂಪಕದಲ್ಲಿ ಹೇಳುವುದಾದರೆ, ಈ ಸಿದ್ಧಾಂತವು ಲೋಕದ ಮೂರ್ತ ಮತ್ತು ವ್ಯಕ್ತರೂಪಗಳ ಹಿಂದಿರುವ ಅಮೂರ್ತ ಅವ್ಯಕ್ತಶಕ್ತಿಯ ಅವತಾರಗಳನ್ನು ಕಾಣಿಸುವ ದರ್ಶನ–ನಾಟಕ. ರಾಮಾಯಣ–ಮಹಾಭಾರತಗಳು ಅಂಥ ಅವತಾರಗಳನ್ನು ಪಾತ್ರ–ಪಾತ್ರಾಂತರಗಳಲ್ಲಿ ಮೂರ್ತೀಕರಿಸಿ ಕಾಣಿಸುವ ಮಾಧ್ಯಮಗಳಾದರೆ ದರ್ಶನಜಿಜ್ಞಾಸೆಯು ಅದನ್ನು ಚಿಂತನಾಕೃತಿಗಳ ಅಮೂರ್ತ ವಿಭಾವಾನುಭಾವದಲ್ಲಿ ಪ್ರಸ್ತುತಪಡಿಸುವ ಪ್ರಯೋಗ. ಅಂಥ ದರ್ಶನಪ್ರಯೋಗದ ಆಯ್ದ ಕೆಲವು ದೃಶ್ಯಗಳ ಕಿರುಪ್ರಸ್ತುತಿಗೆ ನಾವೀಗ ತೆರೆ ಸರಿಸೋಣ.

ಬದಲಾವಣೆಯೆಂದರೆ ಏನು? ಒಂದಿದ್ದದ್ದು ಇನ್ನೊಂದಾಗುವುದು. ಅಂದರೆ, ಬದಲಾವಣೆಗೆ ಎರಡು ಮುಖ □ ಇದ್ದದ್ದು (ಕಾರಣ) ಮತ್ತು ಆಗುವುದು (ಕಾರ್ಯ). ಮಣ್ಣು ಗಡಿಗೆಯಾಗುವುದು, ಹಾಲು ಮೊಸರಾಗುವುದು ಮತ್ತು ನೂಲು ಬಟ್ಟೆಯಾಗುವುದು – ಇಂಥ ಬದಲಾವಣೆಯ ದೃಷ್ಟಾಂತಗಳು. ಇದರಲ್ಲಿ ಮಣ್ಣು–ಹಾಲು–ನೂಲುಗಳು 'ಕಾರಣ'ವಾದರೆ ಗಡಿಗೆ–ಮೊಸರು–ಬಟ್ಟೆಗಳು 'ಕಾರ್ಯ'. ಆದರೆ ಕುಂಬಾರ–ಹೆಪ್ಪು–ಮಗ್ಗ ಮೊದಲಾದ ಮಧ್ಯವರ್ತಿಗಳಿಲ್ಲದೆ ಮಣ್ಣು–ಹಾಲು–ನೂಲುಗಳು ತಂತಾನೇ ಗಡಿಗೆ–ಮೊಸರು–ಬಟ್ಟೆಗಳಾಗಿ ಬದಲಾಗುವುದಿಲ್ಲವಾದ್ದರಿಂದ ಕಾರಣವು ಎರಡು ಬಗೆಯದು ಎಂದು ಹೇಳಬೇಕಾಗುತ್ತದೆ. ಭಾರತೀಯ ದರ್ಶನಗಳ ಪ್ರಕಾರ, ಅವೆರಡು ಕಾರಣವರ್ಗಗಳು – ಉಪಾದಾನ ಕಾರಣ, ಅಂದರೆ ಬದಲಾವಣೆಗೆ ಮೂಲನೆಲೆ (ಮಣ್ಣು–ಹಾಲು–ನೂಲು); ಮತ್ತು, ನಿಮಿತ್ತಕಾರಣ, ಬದಲಾವಣೆಗೆ ಅಗತ್ಯ ಸಹಾಯಕ (ಕುಂಬಾರ–ಹೆಪ್ಪು–ಮಗ್ಗ). ಸರಿ. ಈ ಎರಡೇ ಪಾತ್ರಗಳನ್ನು ಇಟ್ಟುಕೊಂಡು ಬದಲಾವಣೆಯ ಏನೆಲ್ಲ ಸಿದ್ಧಾಂತದ ವೈವಿಧ್ಯಗಳನ್ನು ಕಟ್ಟಬಹುದು – ಎಂಬುದನ್ನು ನಾಟಕದ ರೂಪಕಗಳಲ್ಲಿಯೇ ನಾವೀಗ ನೋಡೋಣ.

ನ್ಯಾಯದರ್ಶನದ ಪ್ರಕಾರ, ಈ ನಾಟಕದ ಹೆಸರು 'ಅಸತ್ಕಾರ್ಯವಾದ'. ಅಂದರೆ, ಬದಲಾವಣೆಯ ಈ ನಾಟಕದ ಕಥನದಲ್ಲಿ ಮಣ್ಣು–ಹಾಲು–ನೂಲು ಎಂಬ ಪಾತ್ರಗಳು ಗಡಿಗೆ–ಮೊಸರು–ಬಟ್ಟೆ ಎಂಬ ಸಂಪೂರ್ಣ ಬೇರೆಯೇ ಸ್ವರೂಪದ ಪಾತ್ರಗಳಾಗಿ ಬದಲಾಗುತ್ತವೆ. ವಾಸ್ತವಾನುಭವದ ದೃಷ್ಟಿಯಿಂದ ಈ ವಾದವು ನಿಜವೆಂದು ತೋರುತ್ತದೆ – ಹಾಲು ಮತ್ತು ಮೊಸರುಗಳೆರಡೂ ಬೇರೆಬೇರೆ ರುಚಿಯುಳ್ಳವು; ಮತ್ತು ಅದಕ್ಕಿಂತ ಮುಖ್ಯವಾಗಿ, ಹಾಲನ್ನು ಮೊಸರು ಮಾಡಿದಂತೆ ಮೊಸರನ್ನು ತಿರುಗಿ ಹಾಲು ಮಾಡಲಿಕ್ಕೆ ಬರುವುದಿಲ್ಲ. ಆದ್ದರಿಂದ, ಹಾಲು ಮೊಸರುಗಳೆರಡೂ ಬೇರೆಬೇರೆ ವಸ್ತುಗಳು; ಮತ್ತು, ಬದಲಾವಣೆಯೆಂಬುದು ಒಂದು ವಸ್ತುವನ್ನು ಸಂಪೂರ್ಣವಾಗಿ, ಅದರ ಗುಣಧರ್ಮಸಮೇತ ಪಲ್ಲಟಗೊಳಿಸುವ ಕೆಲಸ. ಆದರೆ, 'ಸತ್ಕಾರ್ಯವಾದ' ಎಂಬ ಹೆಸರಿನ ಈ ನಾಟಕದ ಸಾಂಖ್ಯ ಆವೃತ್ತಿಯು ಅದನ್ನು ಒಪ್ಪುವುದಿಲ್ಲ. ಆ ನಾಟಕಪ್ರಸ್ತುತಿಯ ಪ್ರಕಾರ, ಇದು ವಾಸ್ತವದ ಚಿತ್ರಣವಲ್ಲ. ಕಾರಣ, ಹಾಲಿನಿಂದ ಮೊಸರು ಮಾಡಬಹುದೇ ಹೊರತು ಮಣ್ಣಿನಿಂದ ಮೊಸರು ಮಾಡಲಿಕ್ಕೆ ಬರುವುದಿಲ್ಲ. ಆದ್ದರಿಂದ ಹಾಲಿನಲ್ಲಿ ಮೂಲತಃ ಮೊಸರಾಗುವ ಒಂದು ಗುಣವೇನೋ ಇದ್ದಿರಲೇಬೇಕು. ಅರ್ಥಾತ್, ಕಾರಣದೊಳಗೇ ಕಾರ್ಯವು ಅಡಗಿಲ್ಲವಾದರೆ, ಅಂಥ ಬದಲಾವಣೆ ಆಗುವುದು ಅಶಕ್ಯ. ಹಾಗಿದ್ದರೂ, ಹಾಲು–ಮೊಸರು ಬೇರೆಬೇರೆ ವಸ್ತುಗಳು ಎಂಬುದನ್ನೂ ಮತ್ತು ಮೊಸರನ್ನು ತಿರುಗಿ ಹಾಲು ಮಾಡಲಿಕ್ಕೆ ಬರುವುದಿಲ್ಲವೆಂಬುದನ್ನೂ ಸಾಂಖ್ಯರೂ ಒಪ್ಪುವುದರಿಂದ, ಅವರ ವಾದವನ್ನು 'ಪರಿಣಾಮವಾದ' ಎಂದೂ ಕರೆಯಲಾಗಿದೆ. ಈ ಎರಡೂ ಪ್ರಸ್ತುತಿಗಳ ಪ್ರಕಾರ ಬದಲಾವಣೆ ನಿಜ. ಆದರೆ, ಈ ಪಾತ್ರಪಲ್ಲಟಕ್ಕೆ ಕಾರಣವಾಗುವ ಸಂಬಂಧದ ಸಂವಿಧಾನದಲ್ಲಿ ಮಾತ್ರ ಈ ಇಬ್ಬರು ನಾಟಕಕಾರರ ನಡುವೆ ಭಿನ್ನಾಭಿಪ್ರಾಯ.

ಈಗ ಈ ನಾಟಕದ ಆದಿಶಂಕರರ ಆವೃತ್ತಿಯನ್ನು ನೋಡೋಣ. ಅವರ ಪ್ರಕಾರ, ಈ ಎರಡು ನಾಟಕಗಳ ಚಿತ್ರಣವೂ ಸರಿಯಿಲ್ಲ. ಮೊದಲಿಗೆ, ಅಸತ್ಕಾರ್ಯವಾದದ ಸಮಸ್ಯೆಯೇನು ಎಂಬುದನ್ನು ಸಾಂಖ್ಯರೇ ಸರಿಯಾಗಿ ತೋರಿಸಿಯಾಗಿದೆ. ಪ್ರತ್ಯಕ್ಷಪ್ರಮಾಣದಲ್ಲಿಯೇ ಕಾಣುವ ಹಾಗೆ, ಮಣ್ಣು ಮತ್ತು ಗಡಿಗೆಗಳೆರಡೂ ಮೂಲತಃ ಮಣ್ಣೇ ಆಗಿರುವುದರಿಂದ, ಅವುಗಳ ನಡುವೆ ವಸ್ತುಧರ್ಮದ ಬದಲಾವಣೆಯಾಯಿತು ಎಂದು ಹೇಳುವುದಕ್ಕೆ ಬರುವುದಿಲ್ಲ. ಅಥವಾ ಅನುಮಾನ ಪ್ರಮಾಣದಲ್ಲಿ ನೋಡಿದರೆ, ಎಳ್ಳಿನಿಂದ ಎಣ್ಣೆ ಮಾಡಬಹುದೆ ಹೊರತು ಮರಳಿನಿಂದ ಎಣ್ಣೆ ಮಾಡಲಾಗದು; ಆದ್ದರಿಂದ ಕಾರ್ಯದೊಳಗೆ ಕಾರಣವೂ ಇರಲೇಬೇಕು. ಮಾತ್ರವಲ್ಲ, ಏನೂ ಇಲ್ಲದ್ದರಿಂದ ಏನನ್ನೂ ಸೃಷ್ಟಿ ಮಾಡಲು ಸಾಧ್ಯವಿಲ್ಲ – ಯಾವುದೇ ಅಸತ್‌ನಿಂದ ಸತ್ ಹುಟ್ಟಲಾರದು – ಎಂಬುದಕ್ಕೆ ಪುರಾವೆಯೇ ಬೇಡ. ನಮಗೆ ಗೊತ್ತು : ಎಷ್ಟು ಕಸರತ್ತು ಮಾಡಿದರೂ ಬಂಜೆಯ ಮಗ, ಮೊಲದ ಕೋಡು ಮೊದಲಾದ ಅಸದ್ವಸ್ತುಗಳನ್ನು ಕುಂಬಾರ–ಹೆಪ್ಪು–ಮಗ್ಗ ಮೊದಲಾದ ಯಾವ ನಿಮಿತ್ತಕಾರಣವೂ ಸೃಷ್ಟಿಸಲಾರದು. ಹಾಗಾಗಿ, ಅಸತ್ಕಾರ್ಯವಾದವನ್ನು ಸರಿಯಲ್ಲವೆಂದು ಹೇಳಬಹುದು. ಆದರೆ, ಆದಿಶಂಕರರ ಪ್ರಕಾರ, ಸಾಂಖ್ಯರ ಸತ್ಕಾರ್ಯವಾದ ಯಾ ಪರಿಣಾಮವಾದದಲ್ಲೂ ಒಂದು ತಾರ್ಕಿಕ ವಿರೋಧಾಭಾಸವಿದೆ. ಒಂದು ಕಡೆಗೆ ಈ ವಾದವು ಹಾಲು ಎಂಬ ವಸ್ತುವು ಮೊಸರು ಎಂಬ ವಸ್ತುವಾಗಿ ಬದಲಾಯಿತು ಎಂದು ವಾದಿಸುತ್ತದೆ; ಮತ್ತೊಂದು ಕಡೆಗೆ, ಹಾಲಿನಲ್ಲಿ ಮೊಸರು ಇತ್ತು ಎಂದೂ ಹೇಳುತ್ತದೆ. ಇದು ಹೇಗೆ ಸಾಧ್ಯ? ಹಾಲು ಮತ್ತು ಮೊಸರು ಒಂದೇ ವಸ್ತು ಅಥವಾ ಬೇರೆಬೇರೆ ಪದಾರ್ಥ □ ಇವೆರಡು ಸಾಧ್ಯತೆಗಳಲ್ಲಿ ಒಂದು ಮಾತ್ರ ಆಗಿರಬೇಕಲ್ಲವೆ?

ಈ ಶಂಕರವ್ಯಾಖ್ಯಾನ ನಾಟಕದ ಮುಂದಿನ ಅಂಕಕ್ಕೆ ಹೋಗುವ ಮೊದಲು, ಒಂದು ರಂಗಸೂಚನೆಯನ್ನು ನೆನಪಿಡಬೇಕು □ ನ್ಯಾಯ–ಸಾಂಖ್ಯ–ಶಾಂಕರ ಯಾವ ಸಿದ್ಧಾಂತವೂ ಹಾಲು ಮೊಸರಾಗುತ್ತದೆ ಎಂಬ ಪ್ರತ್ಯಕ್ಷ ಸಂಗತಿಯನ್ನು ಸುಳ್ಳೆನ್ನುತ್ತಿಲ್ಲ; ಅದು ಹೇಗಾಗುತ್ತದೆ ಎಂಬುದರ ವ್ಯಾಖ್ಯಾನದಲ್ಲಿ ಮಾತ್ರ ಅವರ ಭಿನ್ನಾಭಿಪ್ರಾಯವಿದೆ. ಇರಲಿ, ಈಗ ಶಂಕರವ್ಯಾಖ್ಯಾನದ ಮುಂದಿನ ಅಂಕಕ್ಕೆ ಹೋಗೋಣ. ಶಂಕರರು ಊಹಿಸುತ್ತಾರೆ: ಪೂರ್ವಪಕ್ಷ, ರೂಪ ಬದಲಾಗಿದೆ ಎನ್ನುವುದು ವಸ್ತು ಬದಲಾಗಿದೆ ಎಂಬುದಕ್ಕೆ ಪುರಾವೆ – ಎಂದು ಸಾಂಖ್ಯರು ಹೇಳುತ್ತಿರಬಹುದೆ? ಹಾಗೆ ಹೇಳಿದ್ದಾಗಿದ್ದರೆ, ಅದೂ ಸರಿಯಲ್ಲ. ಉದಾಹರಣೆಗೆ, ದೇವದತ್ತನೆಂಬ ಮನುಷ್ಯ ಕೂತಿರಲಿ ನಿಂತಿರಲಿ ಯಾವುದೇ ಬಟ್ಟೆ ಹಾಕಿರಲಿ – ಅಂದರೆ, ಅವನ ರೂಪ–ಆಕಾರಗಳಲ್ಲಿ ಏನೇ ಬದಲಾವಣೆ ಆಗಿರಲಿ – ಅವನು ದೇವದತ್ತನೇ ಸರಿ ಎಂದು ನಾವು ಗುರುತಿಸುತ್ತೇವೆ. ಆದ್ದರಿಂದ ರೂಪಬದಲಾವಣೆಯು ವಸ್ತು ಬದಲಾವಣೆಯ ಸೂಚಕವಾಗದು. ಅಥವಾ, ಇನ್ನೊಂದು ರೀತಿಯಿಂದ ಯೋಚಿಸೋಣ ಎನ್ನುತ್ತಾರೆ ಶಂಕರರು: ಒಂದು ವಸ್ತು ಮತ್ತು ಅದರ ರೂಪ ಅಥವಾ ಗುಣ – ಎರಡೂ ಬೇರೆಬೇರೆ 'ವಸ್ತು' ಎಂದೇ ಸದ್ಯಕ್ಕೆ ಒಪ್ಪಿಕೊಳ್ಳೋಣ. ಒಮ್ಮೆ ಅದು ಹೌದಾಗಿದ್ದರೆ, ಅವೆರಡೂ ಬೇರೆಬೇರೆ 'ವಸ್ತು'ಗಳಾದ್ದರಿಂದ ಇವುಗಳ ನಡುವೆ

ಸಂಬಂಧವೇರ್ಪಡಿಸಲಿಕ್ಕೆ – ಅಂದರೆ, ಆ 'ವಸ್ತು'ವಿಗೆ ಆ 'ಗುಣ'ವಿದೆ ಎಂದು ಜೋಡಿಸಲಿಕ್ಕೆ – ಇನ್ನೊಂದು ಮಾಧ್ಯಮದ ಅಗತ್ಯ ಬೀಳುತ್ತದೆ. ಒಮ್ಮೆ ಅಂಥ ಮಾಧ್ಯಮವಸ್ತುವೊಂದನ್ನು ಕಲ್ಪಿಸಿಕೊಂಡರೂ ಅದಕ್ಕೂ ಅದರ ಹಿಂದಿನ ಕಲ್ಪಿತ ವಸ್ತುವಿಗೂ ನಡುವೆ ಸಂಬಂಧ ಕಟ್ಟಲು ಮತ್ತೊಂದು ವಸ್ತು ಬೇಕಾಗುತ್ತದೆ – ಹೀಗೆ ಎಷ್ಟುದ್ದ ತರ್ಕಿಸಿದರೂ ಮುಗಿಯದಂಥ 'ಅನವಸ್ಥಾ ದೋಷ' ಈ ಸಿದ್ಧಾಂತದಲ್ಲಿ ಸಂಭವಿಸುತ್ತದೆ! ಆದ್ದರಿಂದ, ಶಂಕರರ ಪ್ರಕಾರ, ಸತ್ಕಾರ್ಯವಾದ ಮತ್ತು ಅಸತ್ಕಾರ್ಯವಾದ – ಎರಡೂ ಕ್ರಮವಾಗಿ, ತಾರ್ಕಿಕವಾಗಿಯೇ ಸಾಧಿಸಲು ಸಾಧ್ಯವಿಲ್ಲದ ಅಸಮರ್ಪಕ ಮತ್ತು ಅಪೂರ್ಣ ಸಿದ್ಧಾಂತಗಳು.

ಹಾಗಿದ್ದರೆ, ಇಂಥ ಬದಲಾವಣೆಯನ್ನು ಹೇಗೆ ವಿವರಿಸಬೇಕು? – ಇದು ಶಂಕರನಾಟಕದ ಉತ್ತುಂಗದ ಅಂಕ. ಶಂಕರರು ಹೇಳುತ್ತಾರೆ: ನಿಜ, ಮಣ್ಣು ಗಡಿಗೆಯಾಯಿತು ಎಂಬ ಬದಲಾವಣೆಯೂ ನಮಗೆ ಕಾಣುತ್ತದೆ; ಒಮ್ಮೆ ಆ ಗಡಿಗೆ ಬಿದ್ದು ಒಡೆದರೆ ಮತ್ತೆ ಅದು ಮಣ್ಣಾಗುವುದೂ ನಮ್ಮ ಗ್ರಹಿಕೆಗೆ ಸಿಗುತ್ತದೆ. ಮಾತ್ರವಲ್ಲ, ಗಡಿಗೆಗೆ ಮೂಲವಾಗಿದ್ದ ಮಣ್ಣೂ ಮೊದಲು ಕಲ್ಲೋ ಇನ್ನೊಂದೇನೋ ಆಗಿದ್ದು, ಈಗ ನಮಗೆ ಮಣ್ಣಾಗಿ ತೋರುತ್ತಿದೆ. ಆ ಕಲ್ಲು ಮೊದಲೇನಾಗಿತ್ತು? ಅದಕ್ಕೂ ಮೊದಲೇನಾಗಿತ್ತು? ಅದಕ್ಕೂ ಮೊದಲು? – ಹೀಗೆ ಈ ರೂಪರೂಪಾಂತರದ ಕಥನವನ್ನು ಗಡಿಗೆಯ ಹಿಂದೂ ಮುಂದೂ ಬೇಕೆನ್ನಿಸುವಷ್ಟು ಬೆಳೆಸಬಹುದು; ಆಗ ಒಂದಲ್ಲ ಒಂದು ಹಂತದಲ್ಲಿ ನಾವು – ಅನಾದಿಯೂ ಅನಂತವೂ ಆಗಿರುವ ವಿಶ್ವವು ಮೂಲತಃ ಒಂದೇ ವಸ್ತುವಿನಿಂದ ಮಾಡಲ್ಪಟ್ಟಿದೆ; ಅದರ ವಿರೂಪವು ಬೇರೆಬೇರೆ ವಸ್ತುಗಳಾಗಿ ತೋರ್ಪಡಿಸಿಕೊಳ್ಳುತ್ತಿದೆ ಎಂದು ತರ್ಕಿಸಬೇಕಾಗುತ್ತದೆ. ಮತ್ತು, ಈ ತರ್ಕಸೂತ್ರವನ್ನೇ ಮುಂದಿಟ್ಟುಕೊಂಡು, ಇಡೀ ವಿಶ್ವನಾಟಕವನ್ನು ಗ್ರಹಿಸಲಾರಂಭಿಸಿದರೆ, ಹೊಸ ಸತ್ಯ ಕಾಣತೊಡಗುತ್ತದೆ – ಈ ವಿಶಾಲವಿಶ್ವದಲ್ಲಿ ಕ್ಷಣಕ್ಷಣವೂ ಒಂದಿದ್ದದ್ದು ಇನ್ನೊಂದು ಆಗುತ್ತಲೇ ಇದೆ; ಯಾವುದೂ ಸ್ಥಿರವಾಗಿ ನಿಲ್ಲುವ ರೂಪವಲ್ಲ. ಆದರೆ, 'ಕಲ್ಲಾಗಿದೆ', 'ಮಣ್ಣಾಗಿದೆ', 'ಗಡಿಗೆಯಾಗಿದೆ', ಮತ್ತೆ 'ತುಂಡಾಗಿದೆ', ಕಡೆಗೆ 'ಮಣ್ಣಾಗಿದೆ' – ಎಂಬ ರೂಪಾಂತರಗಳ ಅನಂತ ಸರಣಿಯ ನಡುವೆ ಬದಲಾಗದ ಒಂದು ವಾಸ್ತವ ಇದೆ; ಮತ್ತು ಅದು ಅದನ್ನು ಹೇಳುತ್ತಿರುವ ಮಾತಿನಲ್ಲೇ ಅಡಗಿದೆ – 'ಇದೆ' ಎಂಬ ಒಂದೇ ಸಂಗತಿ ಮಾತ್ರ ಈ ಎಲ್ಲ ರೂಪಬದಲಾವಣೆಯ ಹಿಂದಿರುವ ಬದಲಾಗದ ವಾಸ್ತವ! ಆದ್ದರಿಂದ, ಇದೆ ಎಂಬುದನ್ನು ಸಂಸ್ಕೃತದಲ್ಲಿ ಸೂಚಿಸುವ 'ಸತ್' ಮಾತ್ರ ಸತ್ಯ; ಉಳಿದ ಅನಂತ ರೂಪಾಂತರಗಳೆಲ್ಲವೂ ಇರುವ ಆ ಒಂದೇ 'ಸತ್' ಜೋರಾಗಿ ತಿರುಗುತ್ತಿರುವುದರಿಂದ ನಮ್ಮ ಮನಸ್ಸಿನಲ್ಲಿ ಹುಟ್ಟುವ ಬಗೆಬಗೆಯ ವಿವರ್ತದ ದರ್ಶನ ಮಾತ್ರ!

ಈಗ ಕಡೆಯ ಅಂಕ: ಹಾಗಿದ್ದರೆ, ಮಣ್ಣು ಗಡಿಗೆಯಾಯಿತು, ಮತ್ತು ಕಾಲಾಂತರದಲ್ಲಿ ಆ ಗಡಿಗೆ ಮತ್ತೆ ಮಣ್ಣಾಯಿತು ಎಂಬಿತ್ಯಾದಿ ಲೋಕದ ಬದಲಾವಣೆಯ ಕಥನಗಳನ್ನು ವಿವರ್ತ ದರ್ಶನದ ಅಡಿಯಲ್ಲಿ ವಿವರಿಸುವುದು ಹೇಗೆ? ಕೇವಲ ವ್ಯಾವಹಾರಿಕ ಸ್ತರದಲ್ಲಿ ನೀವದನ್ನು ಹೇಳುತ್ತೀರಾದರೆ, ಈಗ ಹೇಳಿದ್ದನ್ನೇ ಮತ್ತೆ ಹೇಳಿದರೆ ಸಾಕು! ಆದರೆ, ಪಾರಮಾರ್ಥಿಕ ನೆಲೆಯಲ್ಲಿ ನೀವದನ್ನು ವಿವರಿಸುತ್ತೀರಿ ಎಂದಾದರೆ ಹೀಗೆ ಹೇಳಬೇಕು – ಮಣ್ಣು–ಗಡಿಗೆ–ಮಣ್ಣು ಎಂಬ ಈ ಸರಣಿಯಲ್ಲಿ ಕಾಣುವ ಎಲ್ಲ ರೂಪಾಂತರಗಳೂ ಸತ್‌ನಲ್ಲಿ ಆಗಿದ್ದಲ್ಲ; ನಮ್ಮ ಬುದ್ಧಿಯಲ್ಲಿ ಆಗಿದ್ದು; ಗ್ರಹಿಕೆಯಲ್ಲಿ ಆಗಿದ್ದು. ಆದ್ದರಿಂದ, ವಿವರ್ತವಾದಿ ಪರಿಭಾಷೆಯಲ್ಲಿ – ಮಣ್ಣು ಗಡಿಗೆಯಾಯಿತು ಎಂದು ಹೇಳುವ ಬದಲು ಮಣ್ಣು–ಗ್ರಹಿಕೆಯು (ಮೃತ್–ಬುದ್ಧಿ) ಗಡಿಗೆ–ಗ್ರಹಿಕೆ (ಘಟ–ಬುದ್ಧಿ) ಆಗಿ ಮಾರ್ಪಟ್ಟಿತು ಎನ್ನಬೇಕು!

ಭರತವಾಕ್ಯ: ಸತ್ ಕೂಡಾ ಒಂದೇ; ಚಿತ್ ಕೂಡಾ ಒಂದೇ; ಸತ್–ಚಿತ್ ಎರಡೂ ಕೂಡಿ ಎರಡಲ್ಲದ ಬ್ರಹ್ಮ ಕೂಡಾ ಒಂದೇ. ಆದರೆ ಸತ್ ಚಿತ್‌ಗಳ ವಿವರ್ತದಿಂದ ಉಂಟಾಗುವ ವ್ಯಾವಹಾರಿಕ ಲೋಕದ ಭಾವರೂಪಗಳು ಮಾತ್ರ ಅನಂತಾನಂತ – ಇದು ಬ್ರಹ್ಮವಿವರ್ತವಾದ.



**(ಹೆಗ್ಗೋಡಿನ ಕೆ.ವಿ. ಅಕ್ಷರ ಅವರು ನಮ್ಮ ಹಿರಿಯ ರಂಗಕರ್ಮಿಗಳಲ್ಲದೆ ವಿಶಿಷ್ಟ ಚಿಂತಕರೂ ಹೌದು)**

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ದೇಶದ ಪ್ರಸಕ್ತ ರಾಜಕೀಯ ಹಾಗೂ ಸಾಂಸ್ಕೃತಿಕ ವಿದ್ಯಮಾನಗಳನ್ನು ತಲಸ್ಪರ್ಶಿಯಾಗಿ ವಿಮರ್ಶಿಸುತ್ತಾ ಬರುತ್ತಿರುವ ಹಾಗೂ ಮೌಲ್ಯಯುತ ಶಿಕ್ಷಣ ನೀಡುತ್ತಿರುವ ನಿಮ್ಮ ಸಂಪಾದಕೀಯಗಳಿಗಾಗಿ ನಾನು ಪ್ರತಿ ತಿಂಗಳೂ ಕಾಯುತ್ತೇನೆ. ಈ ದೃಷ್ಟಿಯಿಂದ ಮೇ ತಿಂಗಳ ಸಂಚಿಕೆ ನನಗೆ ವಿಶೇಷ ಖುಷಿ ಕೊಟ್ಟಿತೆಂದೇ ಹೇಳಬೇಕು. ರಾಷ್ಟ್ರೀಯತೆ, ಹಿಂದೂ ಧರ್ಮ ಇತ್ಯಾದಿ ಪರಿಕಲ್ಪನೆಗಳನ್ನು ತಿರುಚಿ ವಿರೂಪಿಗೊಳಿಸಿ ಜನರ ಮನಸ್ಸನ್ನು ಹಾಳು ಮಾಡಲಾಗುತ್ತಿರುವ ಈ ದಿನಮಾನಗಳಲ್ಲಿ ಕಳೆದ ಸಂಚಿಕೆ ಈ ಪರಿಕಲ್ಪನೆಗಳ ಹುಟ್ಟು ಮತ್ತು ಇತಿಹಾಸ ಕುರಿತ ಸಮಗ್ರ ಮಾಹಿತಿ ನೀಡಿರುವುದು ಸಕಾಲಿಕವಾಗಿದೆ.

ಸಾಹಿತ್ಯ, ಸಂಗೀತ, ನಾಟಕ ಮತ್ತು ಪುಸ್ತಕಾವಲೋಕನಗಳಂತಹ ಸಾಂಸ್ಕೃತಿಕ ಸಂಗತಿಗಳಿಗೂ 'ಹೊಸ ಮನುಷ್ಯ' ಪುಟಗಳನ್ನು ಮೀಸಡಲಿಡುವ ಮೂಲಕ ಓದುಗರು ಬದುಕಿನ ಸಮಗ್ರ ನೋಟ ಪಡೆಯಲೂ ನೆರವಾಗುತ್ತಿದೆ. ಪತ್ರಿಕೆ ನಾಡಿನ ಸಾಕ್ಷಿ ಪ್ರಜ್ಞೆಯಾಗಿ ನಿರಂತರವಾಗಿ ಬಾಳಲಿ ಎಂದು ಹಾರೈಸುತ್ತೇನೆ.

**–ಎಚ್.ಎಂ. ಶಿವಾನಂದ,** ಹಂಸಗಾರು(ಸಾಗರ ತಾ,)

ಧಾರವಾಡದಲ್ಲಿ ನಾಲ್ಕು ತಿಂಗಳುಗಳ ಹಿಂದೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಕುರಿತು ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 'ಹೊಸ ಮನುಷ್ಯ'ಕ್ಕೆ ಚಂದಾದಾರನಾದೆ. ಅಂದಿನಿಂದ ಪತ್ರಿಕೆಯನ್ನು ಓದುತ್ತಾ ಬಂದಿರುವ ನನಗೆ ಇಂಥದೊಂದು ಪತ್ರಿಕೆ ನನ್ನ ಗಮನಕ್ಕೆ ಬಾರದ ನನ್ನ ಅಜ್ಞಾನಕ್ಕೆ ನಾನೇ ವಿಷಾದ ಪಡುವಷ್ಟು ಪತ್ರಿಕೆಯ ಗುಣಮಟ್ಟ ಶ್ರೇಷ್ಠವಾಗಿದೆ. ಪತ್ರಿಕೆಯಲ್ಲಿ ಸಮಾಜವಾದಿ ವಿಚಾರಗಳು ಹೆಚ್ಚಿಗೆ ಕಾಣಿಸಿಕೊಂಡು ಓದುಗರ ವಿಚಾರವಂತಿಕೆ ಬೆಳೆಯುವಂತಾಗಬೇಕು.

**–ಶಿವಶಂಕರ ಹಿರೇಮಠ,** ಧಾರವಾಡ

ಮೇ ಸಂಚಿಕೆಯ ಸಂಪಾದಕೀಯ ಇಂದಿನ ರಾಜಕೀಯ ಪರಿದೃಶ್ಯದ ಸಕಲ ಜಟಿಲತೆಗಳನ್ನೂ ಓದುಗರ ಮುಂದಿಟ್ಟು ದೇಶದ ಮುಂದಿರುವ ಇಂದಿನ ಸವಾಲುಗಳನ್ನು ಪರಿಚಯ ಮಾಡಿಕೊಡುವಲ್ಲಿ ಯಶಸ್ವಿಯಾಗಿದೆ. ಹನೂರು ಕೃಷ್ಣಮೂರ್ತಿಯವರ ಲೇಖನ ವಿಶ್ವವಿದ್ಯಾಲಯದ ಮಟ್ಟದಲ್ಲಿ ಭಾಷೆ–ಸಾಹಿತ್ಯದ ಅಧ್ಯಯನ ಅಧ್ಯಾಪಕರ ಗುಣಮಟ್ಟದ ಅವನತಿಯೊಂದಿಗೆ ಹೇಗೆ ತಾನೂ ಅವನತಿಗೊಳ್ಳುತ್ತಿದೆ ಎಂಬುದನ್ನು ಚೆನ್ನಾಗಿ ವಿಶ್ಲೇಷಿಸಿದೆ. 'ನವಿಲುಗರಿ' ಎರಡೂ ಕವಿತೆಗಳು ತಮ್ಮ ಧ್ವನ್ಯಾರ್ಥ–ರೂಪ ಶಕ್ತಿಗಳಿಂದ ಗಮನ ಸೆಳೆಯುವಂತಿವೆ. ಹಾಗೇ 'ಅಹಿಂದ ಕಥೆಗಾರಿಕೆ' ಕುರಿತ ನಿಮ್ಮ ಟಿಪ್ಪಣಿಗಳು ಜಾತಿಭೂತ ಆವಾಹಿಸಿಕೊಂಡ ಸಾಹಿತ್ಯ ಸಂಶೋಧಕರ ಕಣ್ಣು ತೆರೆಸಬೇಕು.

**–ಪ್ರೊ. ಎಚ್. ಸಿದ್ದೇಗೌಡ,** ಚನ್ನರಾಯಪಟ್ಟಣ

'ಹೊಸ ಮನುಷ್ಯ'ದ ಮೇ ಸಂಚಿಕೆಯ ನಿಮ್ಮ ಸಂಪಾದಕೀಯ ಬಹು ನಿಷ್ಠುರವೂ, ಆಳವಾದ ವಿಶ್ಲೇಷಣೆಯಿಂದ ಕೂಡಿದೆ. ಆದರೆ ಪ್ರಸಕ್ತ ರಾಜಕಾರಣಕ್ಕೆ ಪ್ರತಿರೋಧ ಮತ್ತು ಪರ್ಯಾಯಗಳೇ ಇಲ್ಲದೆ ಪರಿಸ್ಥಿತಿ ಅಧೋಗತಿಗೆ ಇಳಿಯುತ್ತಿರುವುದು ವಿಷಾದಕರ.

ಕೃಷ್ಣಮೂರ್ತಿ ಹನೂರರ ಹಳೆಗನ್ನಡ ಕಲಿಕೆ ಕುರಿತ ಲೇಖನ ಭಾಷೆ ಮತ್ತು ಸಾಹಿತ್ಯ ಅಧ್ಯಯನ ಕುರಿತಂತೆ ಹಲವು ಪ್ರಶ್ನೆಗಳನ್ನು ಎತ್ತುತ್ತಾ ಗಮನಾರ್ಹವಾಗಿದೆ. ಪ್ರಾಥಮಿಕ ಹಂತದ ಶಿಕ್ಷಣದಲ್ಲೇ ಭಾಷೆಯ ಕಲಿಕೆಗೆ ಮಹತ್ವವಿಲ್ಲದೇ ಹೋಗಿರುವುದರಿಂದ ಉನ್ನತ ಹಂತದ ಶಿಕ್ಷಣದಲ್ಲಿ ಸಾಹಿತ್ಯ ಬೋಧನೆಯ ವಿಷಯ ಸಮಸ್ಯೆಗಳನ್ನು ಎದುರಿಸುವಂತಾಗಿದ್ದು ಇದರ ಭಾಗವಾಗಯೇ ಹಳೆಗನ್ನಡ ಕಲಿಕೆಯ ಪ್ರಶ್ನೆಯನ್ನು ಪರಿಶೀಲಿಸಬೇಕಾಗಿದೆ.

**–ವೆಂಕಟೇಶ ಮಾಚಕನೂರ,** ಧಾರವಾಡ

'ಹೊಸ ಮನುಷ್ಯ' ಸಂಚಿಕೆಯಲ್ಲಿ ಪ್ರತಿ ತಿಂಗಳು ವಿಭಿನ್ನವಾಗಿ ಮೂಡಿ ಬರುತ್ತಿದೆ. ರಾಷ್ಟ್ರೀಯತೆಯನ್ನು ಕುರಿತ ಬರಹಗಳು ನಮ್ಮ ಅರಿವನ್ನು ವಿಸ್ತರಿಸುವಂತವು.

**–ಬಿ.ಸುಧಾಕರ ದೇವಾಡಿಗ,** ಕೋಟೇಶ್ವರ

ವ ೀ ಸಂಚಿಕೆಯ ನಿಮ್ಮ ಸಂಪಾದಕೀಯ ವಿಸ್ತಾರ ಮತ್ತು ಆಳಗಳೆರಡರಲ್ಲೂ ಅತ್ಯುತ್ತಮ ವಿಶ್ಲೇಷಣೆಗಳಿಂದ ಕೂಡಿದ್ದು ನಮ್ಮನ್ನು ಚಿಂತನೆಗೆ ಹಚ್ಚುವಂತಿದೆ.

**–ಡಾ. ನಾಗಭೂಷಣ್ ಪಟೇಲ್,** ಬೋಸ್ಟನ್ (ಅಮೆರಿಕಾ)

ಮೇ ಸಂಚಿಕೆಯಲ್ಲಿನ ದಲೈಲಾಮಾ ಅವರ ಬೌದ್ಧ ವಿಚಾರಗಳನ್ನು ಓದಿದಾಗ ಬೌದ್ಧ ಧರ್ಮಕ್ಕೂ ಹಿಂದೂ ಧರ್ಮದ ಅದ್ವೈತ ತತ್ವಕ್ಕೂ ಎಷ್ಟು ಸಾಮ್ಯವಿದೆ ಎಂದು ತಿಳಿದು ಶಂಕರಾಚಾರ್ಯರನ್ನೇಕೆ ಪ್ರಚ್ಛನ್ನ ಬುದ್ಧ ಎನ್ನುತ್ತಾರೆ ರಂಬುದು ಅರ್ಥವಾಯಿತು.

**–ಅನಸೂಯಾ ರಾಮಕೃಷ್ಣನ್** ಹುಬ್ಬಳ್ಳಿ

ಪ್ರತಿ ತಿಂಗಳೂ ಒಂದು ಅಥವಾ ಎರಡನೆಯ ತಾರೀಖು 'ಹೊಸ ಮನುಷ್ಯ;ಕ್ಕಾಗಿ ಕಾಯುತ್ತೇವೆ, ಬರದಿದ್ದರೆ ಏನೋ ಕಸಿವಿಸಿ. ಆ ಮಟ್ಟಿಗೆ ಅದೊಂದು ಚಟವಾಗಿ ಹೋಗಿಬಿಟ್ಟಿದೆ!

**–ಎನ್.ಜಿ. ಸ್ವಾಮಿ,** ಬೆಂಗಳೂರು

# ಸಾಹಿತ್ಯ-ಸಂಸ್ಕೃತಿ-ನಾಟಕ ಇತ್ಯಾದಿ: ನೀನಾಸಂನಲ್ಲಿ ಎರಡು ದಿನಗಳು





**ಹೆ**ಗ್ಗೋಡಿನ ನೀನಾಸಂ ರಂಗಶಿಕ್ಷಣ ಕೇಂದ್ರ ಈ ವರ್ಷದ ತನ್ನ ವಿದ್ಯಾರ್ಥಿಗಳಿಗೆ ರಂಗಕಲೆಯ ಎಲ್ಲ ಸಾಧ್ಯ ಆಯಾಮಗಳನ್ನೂ ಪರಿಚಯಿಸಲು ಅವಕಾಶವಿರುವಂತೆ ಆಯ್ದು ಕಲಿಸಿದ ಆರು ವೈವಿಧ್ಯಮಯ ನಾಟಕಗಳ ಸರಣಿಯೊಂದನ್ನು ಇತ್ತೀಚೆಗೆ ಸಾರ್ವಜನಿಕರ ಮುಂದೆ ಪ್ರದರ್ಶಿಸಿತು. ಅವುಗಳಲ್ಲಿ ಒಂದು ಪಾಶ್ಚಿಮಾತ್ಯ ಮತ್ತು ಒಂದು ಭಾರತೀಯ ನಾಟಕವನ್ನು ಆಯ್ದುಕೊಂಡು ನಾನು ನೋಡಿದೆ.

ಮೇ ೧೧ರಂದು ಈ ಸರಣಿಯ ಮೊದಲ ನಾಟಕವಾಗಿ ಶಿವರಾಮ ಕಾರಂತ ರಂಗಮಂದಿರದಲ್ಲಿ ಪ್ರದರ್ಶಿತವಾದ ನಾಟಕ 'ಒಳಾಂಗಣ' ಇದು ನೊಬೆಲ್ ಪ್ರಶಸ್ತಿ ಪುರಸ್ಕೃತ ಫ್ರೆಂಚ್ ನಾಟಕಕಾರ ಮಾರಿಸ್ ಮೆಟರ್‌ಲಿಂಕ್‌ನ 'ಇಂಟೀರಿಯರ್' ಎಂಬ ನಾಟಕದ ಕನ್ನಡ ಅವತರಣಿಕೆ. ನಿರ್ದೇಶಕರು ಶಂಕರ ವೆಂಕಟೇಶ್ವರನ್.

ಸಾವಿನ ಥಣ್ಣನೆಯ ಮೌನ ನಿಧಾನವಾಗಿ ನಮ್ಮನ್ನು ತಟ್ಟುವ ಪರಿಯನ್ನು ಹೇಳುವ ಈ ನಾಟಕ ಒಂದು ಗ್ರಾಮದ ಒಂದು ಕುಟುಂಬ ಮತ್ತು ಅದರ ಗ್ರಾಮಸ್ಥರು ತಮ್ಮ ನಡುವಿನ ಒಂದು ಸಾವನ್ನು ನಿರ್ವಹಿಸುವ ಮತ್ತು ಆ ಮೂಲಕ ಗ್ರಹಿಸುವ ಬಗೆಯನ್ನು ಪಾತ್ರಗಳ ನಿಧಾನ ಗತಿಯ ಚಲನೆ ಮತ್ತು ಹಾವಭಾವ ಹಾಗೂ ಮೇಳ ರೂಪದ ಸಮೂಹದಿಂದ ಪಡೆಯುವ ಪೂರಕ ಮಾತುಗಳ ಮೂಲಕ ನಿರೂಪಿಸಲು ಮಾಡುವ ಪ್ರಯತ್ನ ಅನನ್ಯವಾದದ್ದು.. ವಸ್ತುವಿನ ಈ ಸೂಕ್ಷ್ಮ ಮತ್ತು ನಿಧಾನ ಲಯದ ಚಲನೆಗೆ ಸಮಗ್ರತೆಯ ಒಂದು ದಿಕ್ಕು ತೋರಿಸುವಂತಹ ಸಂಗೀತವನ್ನು ಹದವರಿತು ಬಳಸಿರುವುದು ಈ ಪ್ರಯೋಗದ ಒಂದು ಹೆಗ್ಗಳಿಕೆ. ಇಡೀ ನಾಟಕ ಅಂತಿಮವಾಗಿ ಒಂದು ಧ್ವನಿಯನ್ನು ಪಡೆಯುವುದೂ ಈ ಸಂಗೀತದ ಪರಿಣಾಮದಿಂದಲೇ ಎಂದು ಹೇಳಬಹುದು.

ಈ ನಾಟಕದ  ವಸ್ತು ಮತ್ತು ಅದರ ನಿರೂಪಣೆಯ ಶೈಲಿ ನಮ್ಮ ಸಂವೇದನಾ ಕೋಶಕ್ಕೆ ಹೊರಗಿನದೆನಿಸಿದರೂ, ಇದರ ಪ್ರಯೋಗಶೀಲತೆಗಾಗಿ ನಮ್ಮ ಮೆಚ್ಚುಗೆ ಪಡೆಯುತ್ತದೆ. ಜೊತೆಗೆ ಎಳೆಯ ನಟರಿಗೆ ತಮ್ಮ ಅಭಿನಯದ ಭಾಗವಾದ ಅನೈಚ್ಛಿಕ ಚಲನೆಗಳ ಒಡಲಲ್ಲಿ ಅಡಗಿರುವ ಒಳ ಮತ್ತು ಸೂಕ್ಷ್ಮ ಚಲನೆಗಳ ಅನುಭವವನ್ನೂ ಈ ಪ್ರಯೋಗ ತುಂಬಿ ಕೊಟ್ಟಿರಬಹುದು.

ಇನ್ನು ಮೇ ೧೨ರಂದು ನೀನಾಸಂ ಸಭಾ ಭವನದಲ್ಲಿ ಆತ್ಮೀಯ ರಂಗಭೂಮಿ ಶೈಲಿಯಲ್ಲಿ ಪ್ರೇಕ್ಷಕರಿಂದ ಸುತ್ತುವರೆಯಲ್ಪಟ್ಟ ರಂಗಸ್ಥಳದಲ್ಲಿ ಪ್ರದರ್ಶಿತವಾದ ನಾಟಕ 'ತಾವರೆಕೋಟೆ'. ಕುಮಾರವ್ಯಾಸನ ಗದುಗಿನ ಭಾರತದ ದ್ರೋಣ ಪರ್ವದಿಂದ ಆಯ್ದ ಪದ್ಯಗಳನ್ನು ಆಧರಿಸಿ ವೆಂಕಟರಮಣ ಐತಾಳರು ಸಂಯೋಜಿಸಿದ್ದ ಈ ಪ್ರಯೋಗ ಅಭಿಮನ್ಯುವನ್ನು ಕೊಲ್ಲುವ ಪದ್ಮವ್ಯೂಹ ರಚನೆಯ ಪ್ರಸಂಗವನ್ನು ಆಧರಿಸಿದ್ದು. ವಿದ್ಯಾರ್ಥಿ ನಟ-ನಟಿಯರನ್ನು ಎದುರುಬದುರಾದ ಎರಡು ಮೇಳಗಳನ್ನಾಗಿ ವಿಭಾಗಿಸಿ ಅವರ ಮಧ್ಯದಿದಂಲೇ ಕುರುಕ್ಷೇತ್ರದ ಪಾತ್ರಗಳು ಎದ್ದುಬಂದು ತಮ್ಮ ನಾಟಕವಾಡಿ ಹೋಗುವಂತೆ ವಿನ್ಯಾಸಗೊಳಿಸಲಾಗಿದ್ದ ಈ ಪ್ರಯೋಗ ಪ್ರಧಾನವಾಗಿ ಯಕ್ಷಗಾನ ಮತ್ತು ಕೂಡಿಯಾಟ್ಟುಂಗಳ ಚಲನೆ, ಗತಿ ಲಯಗಳನ್ನು ಅನುಸರಿಸುತ್ತಾ ಒಂದು ದೃಶ್ಯ ಮತ್ತು ಧ್ವನಿ ಸಂಭ್ರಮವನ್ನೇ ಸೃಷ್ಟಿಸುತ್ತದೆ. ಶಂಖ, ನಗಾರಿ, ಕೊಂಬು ಕಹಳೆ  ಭೇರಿ ಢಕ್ಕೆ,  ಮಿಳಾವ್ ಮತ್ತು ತಾಳಗಳೊಂದಿಗೆ ಕೂಡಿದ ಈ ಅದ್ಭುತ ಮೇಳ ಸುಗಮ, ಗಮಕ, ಕಂದ ಪದ್ಯ,  ಮುಂತಾದ ವೈವಿಧ್ಯಮಯ ಶೈಲಿಗಳಲ್ಲಿ ಸಾಮೂಹಿಕವಾಗಿ ಹಾಡಲ್ಪಡುವ ನಾರಣಪ್ಪನ ಪದ್ಯಗಳ ಸಾಹಿತ್ಯ ಶ್ರೀಮಂತಿಕೆಯೊಂದಿಗೆ ಬೆರೆತು ಒಂದು ವಿಶಿಷ್ಟ ನಾಟಕೀಯ ಅನುಭವವನ್ನು ಸೃಷ್ಟಿಸುತ್ತದೆ. ಇದರ ಹಿಂದೆ 'ಶ್ರೀವನಿತೆಯರಸನೆ...' ಎಂದು ಆರಂಭವಾಗುವ ನಾಂದಿ ಪದ್ಯ ಮತ್ತು 'ಅರಸುಗಳಿಗಿದು ವೀರ...' ಎಂದು ಆರಂಭವಾಗುವ ಪೀಠಿಕಾ ಪದ್ಯಗಳನ್ನೊಳಗೊಂಡಂತೆ ಕುಮಾರವ್ಯಾಸನ ಕಾವ್ಯ ಸೌಂದರ್ಯದ ಒಂದು ಒಟ್ಟು ಪರಿಣಾಮಕಾರಿ ಸೀಳು ನೋಟವನ್ನು ಒದಗಿಸುವ ಸಾಹಿತ್ಯಿಕ ನೆಲೆಯ ಪ್ರಯತ್ನವೂ ಕೆಲಸ ಮಾಡಿರಬಹುದು

ಐತಾಳರೇನೋ ಯುದ್ಧದ ದುರಂತವನ್ನು ಸೂಚ್ಯವಾಗಿ ಹೇಳುವ ಪದ್ಯಗಳನ್ನು ಆರಿಸಿ ಈ ನಾಟಕಕ್ಕೊಂದು ವಸ್ತು ವಿಶೇಷವನ್ನು ಅಳವಡಿಸಲು ಪ್ರಯತ್ನ ಮಾಡಿದ್ದಾರಾದರೂ, ಕರ್ಣನಿಗೆ ಅಭಿಮನ್ಯುವನ್ನು ಕೊಲ್ಲಲು ನೀಡುವ ನಿರ್ಮಮ ಸಲಹೆಯ ಸಂದರ್ಭದ ಹೊರತಾಗಿ ಅದರ ಸೂಕ್ಷ್ಮತೆಗಳು ಪ್ರದರ್ಶನದ ಅಬ್ಬರದಲ್ಲಿ ಮುಳುಗಿಹೋದವೇನೋ ಎನಿಸುತ್ತದೆ. ಜೊತೆಗೆ ಪದ್ಯಗಳ ಹಳೆ/ನಡುಗನ್ನಡದ ಅಪರಿಚಿತತೆಯೂ ಬಹುತೇಕ ಪ್ರೇಕ್ಷಕರನ್ನು ಕಾಡಿದ್ದರಲ್ಲಿ ಆಶ್ಚರ್ಯವಿಲ್ಲ.

ಈ ಎರಡೂ ನಾಟಕಗಳು ವಿದ್ಯಾರ್ಥಿಗಳ ತರಬೇತಿಗಾಗಿ ನಡೆಸಿದ ಪ್ರಯೋಗಗಳಾದ್ದರಿಂದ ಇವುಗಳ ಮಿತಿಗಳನ್ನು ವಿವರವಾಗಿ ಚರ್ಚಿಸುವ ಅಗತ್ಯವಿಲ್ಲ. ಆದರೆ ಒಂದು ಮಾತನ್ನಂತೂ ಹೇಳಬೇಕು: ಈ ಪ್ರಯೋಗಗಲ್ಲಿ ಭಾಗವಹಿಸಿದ ಎಲ್ಲ ವಿದ್ಯಾರ್ಥಿ ನಟ-ನಟಿಯರೂ ಮತ್ತು ನೇಪಥ್ಯದ ಕೆಲಸಗಾರರೂ ತಮ್ಮ ಅತ್ಯುತ್ತಮ ಪ್ರತಿಭೆ-ಸಾಮರ್ಥ್ಯಗಳನ್ನು ಇಲ್ಲಿ ಪ್ರದರ್ಶಿಸಿ ಪ್ರೇಕ್ಷಕರ ಮನ ಗೆದ್ದರು. ಇಂದಿನ ಸ್ಪರ್ಧಾತ್ಮಕ ವ್ಯಾಪಾರಿ ದಿನಗಳಲ್ಲಿ ಈ ತರುಣ ತರುಣಿಯರು ತಮ್ಮ ವ್ಯಕ್ತಿತ್ವಗಳ ಅಭಿವ್ಯಕ್ತಿಗಾಗಿ ರಂಗಭೂಮಿಯನ್ನು ಹುಡುಕಿಕೊಂಡು ಬಂದಿರುವುದನ್ನು ಕಂಡು ನನಗೆ ಬಹಳ ಖುಷಿಯಾಯಿತು. ಹಾಗೇ ನೀನಾಸಂ ಕೂಡ ಈ ತರುಣ ತರುಣಿಯರಿಗೆ ತನ್ನೆಲ್ಲ ಸಂಪನ್ಮೂಲಗಳನ್ನು ಬಹು ಸಮರ್ಥವಾಗಿ ಹಂಚಿ ಹರಸಿದೆ ಎಂಬುದು ಈ ಪ್ರಯೋಗಗಳಿಂದ ಯಾರಿಗಾದರೂ ಅರಿವಾದೀತು



ಈ ಮೇಲಿನ ಮಾತುಗಳಿಗೆ ಸಾಕ್ಷಿ ಎಂಬಂತೆ ಈ ಎರಡೂ ನಾಟಕಗಳ ಮಧ್ಯೆ ಅಂದರೆ ಮೇ ೧೨ರ ಬೆಳಿಗ್ಗೆ ಶಿವರಾಮ ಕಾರಂತ ರಂಗಮಂದಿರದಲ್ಲಿ ನೀನಾಸಂ ಹಳೆಯ ವಿದ್ಯಾರ್ಥಿ ಸಂಘವು ಸಂಸ್ಥೆಯ ನಿವೃತ್ತ ಪ್ರಾಂಶುಪಾಲರುಗಳಾದ ಕೆ.ಜಿ. ಮಹಾಬಲೇಶ್ವರ್ ಮತ್ತು ವೆಂಕಟರಮಣ ಐತಾಳ ಹಾಗೂ ಸಿಬ್ಬಂದಿಯಾದ ಬಂಗಾರಣ್ಣ ಮತ್ತು ಹಿರಿಯಣ್ಣ ಭಟ್‌ರಿಗೆ (ಇವರೆಲ್ಲ ಈಗ ನೀನಾಸಂನ ಅವಿಭಾಜ್ಯ ಅಂಗಗಳೇ; ಆದರೆ ಗೌರವ ರೂಪದಲ್ಲಿ.) ಅಭಿನಂದನೆ ಏರ್ಪಡಿಸಿತ್ತು. ೧೯೮೦-೮೧ರಲ್ಲಿ ಕೆ.ವಿ. ಸುಬ್ಬಣ್ಣ ಅವರ ಮುಂದಾಳತ್ವದಲ್ಲಿ ಆರಂಭವಾದ ರಂಗಶಿಕ್ಷಣ ಕೇಂದ್ರ ಈವರೆಗೆ ಆರು ನೂರಕ್ಕೂ ಹೆಚ್ಚು ರಂಗಕರ್ಮಿಗಳನ್ನು ತಯಾರಿಸಿ ಸಮಾಜಕ್ಕೆ ನೀಡಿದೆ. ಅವರಲ್ಲಿ ಅರ್ಧ ಪಾಲು ಆಂದು ಅಲ್ಲಿ ನರೆದಂತಿದ್ದು ಚಪ್ಪಾಳೆ-ಶಿಳ್ಳೆ-ಹೋ ಕೂಗುಗಳ ಮೂಲಕ ಅಭಿನಂದಿತರನ್ನು ಪ್ರೀತಿ-ಉತ್ಸಾಹಗಳಿಂದ ನೇವರಿಸಿದ ದೃಶ್ಯ ಅಮೋಘವಾಗಿತ್ತು.


ನೀನಾಸಂನ ಸದ್ಯದ ವರ್ಷದ ವಿದ್ಯಾರ್ಥಿಗಳಿಂದ ಭೋರ್ಗರೆದು ಬಂದ ರಂಗ ಪ್ರಾರ್ಥನಾ ಗೀತೆಯಿಂದ ಆರಂಭವಾದ ಈ ಸಮಾರಂಭ ಬರೀ ರಂಗಭೂಮಿ ಮಾತ್ರವಲ್ಲದೆ; ಟಿವಿ, ಸಿನಿಮಾ ಹೀಗೆ ಬಹು ಮಾಧ್ಯಮ ರಂಗಗಳಲ್ಲಿ ಹಂಚಿ ಹೋಗಿರುವ ಪ್ರತಿಭೆಗಳಿಂದ ತುಂಬಿರುವ ನೀನಾಸಂನ ವಿಸ್ತೃತ ಕುಟುಂಬದ ಸಂಭ್ರಮದ ಪ್ರದರ್ಶನವನ್ನು ಅಲ್ಲಿ ನಾವು ನೋಡಿದಾಗ ನೀನಾಸಂ ಬಗ್ಗೆ ನಮ್ಮ ಮನವೂ ತುಂಬಿಬರದಿರಲಿಲ್ಲ.

**-ಡಿಎಸ್ಸೆನ್**

## ಪುಸ್ತಕಾವಲೋಕನ

ಪು: **ಜರ್ಮನಿಯ ಒಳಗಿನಿಂದ** ಲೇ: **ಬಿ.ಎ. ವಿವೇಕ ರೈ** ಪ್ರ: **ಆಕೃತಿ ಆಶಯ ಪಬ್ಲಿಕೇಷನ್ಸ್**, ಮಂಗಳೂರು ಪು: ೧೫೨ ಬೆಲೆ: ರೂ. ೧೫೦/-

### ಕನ್ನಡ-ಜರ್ಮನ್ ನಂಟಿನ ನೋಟ




**ಕ**ನ್ನಡದ ಮೊತ್ತ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ'ವನ್ನು ಆರಂಭಿಸಿದವನು ಜರ್ಮನಿಯ ಹರ್ಮನ್ ಮೊಗ್ಲಿಂಗ್. ಇದಲ್ಲದೆ ಕಿಟ್ಟೆಲ್ ಸೇರಿದಂತೆ ಭಾರತದಲ್ಲಿದ್ದ ಜರ್ಮನ್ ಮಿಷನರಿಗಳು ಕನ್ನಡದ ಕೆಲಸ ಮಾಡಿದ್ದು ಇತಿಹಾಸ. ಆ ಕೊಂಡಿ ಇಂದಿಗೂ ಮುಂದುವರಿದಿದೆ ಎಂಬುದು ವಿವೇಕ ರೈ ಮತ್ತು ಎಚ್.ಎಸ್. ಶಿವಪ್ರಕಾಶ್‌ರು ಜರ್ಮನಿಯ ವಿಶ್ವವಿದ್ಯಾಲಯಗಳಲ್ಲಿ ಅತಿಥಿ ಪ್ರಾಧ್ಯಾಪಕರಾಗಿ ಹೋಗಿ ಬಂದಿರುವುದರಲ್ಲಿ ತಿಳಿಯುತ್ತದೆ. ಇದಕ್ಕೆ ಕಾರಣ ಅಲ್ಲಿನ ಇಂಡೋಲಜಿ ವಿಭಾಗಗಳಲ್ಲಿ ವಿದ್ಯಾರ್ಥಿಗಳಿಗೆ ಕನ್ನಡ ಕಲಿಕೆಯ ಅವಕಾಶ ಇರುವುದು.

ವ್ಯೂರ್ತ್ಸ್‌ಬುರ್ಗ್ ವಿಶ್ವವಿದ್ಯಾಲದಲ್ಲಿನ ತಮ್ಮ ಅನುಭವಗಳ ಮೂಲಕ ಬೇರೆ ಬೇರೆ ಸಂದರ್ಭದ ಸಂಗತಿಗಳನ್ನು ವಿಶ್ಲೇಷಣೆ ಮಾಡುವ ಕ್ರಮವನ್ನು ಈ ಪುಸ್ತಕದಲ್ಲಿ ಅನುಸರಿಸಲಾಗಿದೆ. ವಿವೇಕ ರೈಯವರು ಮೂಲತಃ ಸಂಶೋಧಕರು ಎಂಬುದಕ್ಕೆ ಪುರಾವೆ ಎಂಬಂತೆ, ಯಾವ ವಿಷಯದ ಬಗೆಗೆ ಬರೆದರೂ ಅದರ ಕುರಿತು ಮೂಲ ಮಾಹಿತಿ ಮತ್ತು ಅಂಕಿ ಅಂಶಗಳನ್ನು ಕಲೆಹಾಕಿ ಹಂಚಿಕೊಳ್ಳುತ್ತಾರೆ. ಇದು ಹೆಚ್ಚೂ ಕಡಿಮೆ ಇಲ್ಲಿನ ಎಲ್ಲಾ ಬರಹಗಳ ಸಾಮಾನ್ಯ ಲಕ್ಷಣ. ಬಹಳ ಸರಳ ಮತ್ತು ಸಹಜವಾದ ಮಂಡನೆ ಇರುವ ಈ ಪುಸ್ತಕದಲ್ಲಿ ಜರ್ಮನಿಯಲ್ಲಿ ಅವರು ಭಾಗವಹಿಸಿದ ಸಾಂಸ್ಕೃತಿಕ ಸಮಾರಂಭಗಳು, ಅಲ್ಲಿನ ರಂಗಭೂಮಿ ಚಟುವಟಿಕೆಗಳು, ಕೆಲವು ವಿಶಿಷ್ಟ ವ್ಯಕ್ತಿಗಳ ಕುರಿತ ಬರಹಗಳು ಹೆಚ್ಚಿವೆ. ಇನ್ನುಳಿದಂತೆ ತಮ್ಮ ಕೆಲವು ಸೂಕ್ಷ್ಮ ಅವಲೋಕನಗಳ ಬರಹಗಳಿವೆ. ಈ ಬರಹಗಳೇ ಹೆಚ್ಚು ಆತ್ಮೀಯವೆನಿಸುತ್ತವೆ.


'ಹೆಣ್ಣಿಗೊಂದು ಕೋಣೆ, ಕೋಣೆಯೊಳಗೆ ಹೆಣ್ಣು: ಜರ್ಮನಿಯ ಮ್ಯೂಸಿಯಂನಲ್ಲಿ ಹೆಣ್ಣು' ಎಂಬ ಬರಹದಲ್ಲಿ ಇದನ್ನು ಗಮನಿಸಬಹುದು. ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದ ಊರೊಂದರ ಹೆಂಗಸರ ಬದುಕಿನ ವಿವರಗಳಿಂದ ತುಂಬಿರುವ ಮ್ಯೂಸಿಯಂ ಇದಾಗಿದ್ದು, ಹೆಣ್ಣನ್ನು ನಿರ್ಬಂಧಿಸುವ ಮತ್ತು ನಿರೂಪಿಸುವ ಇತಿಹಾಸದ ಸಾಕ್ಷಿಗಳಾಗಿ ಇದನ್ನು ಲೇಖಕರು ಗಮನಿಸುತ್ತಾರೆ. ಮಕ್ಕಳಿಗೆ ಕೊಡುವ ಆಟಿಕೆಗಳಿಂದ ಹಿಡಿದು ಅವರು ತೊಡಬೇಕಾಗಿರುವ ಬಟ್ಟೆಗಳ ತನಕ ಅವಳನ್ನು ಗಂಡಸನ್ನು ಮೆಚ್ಚಿಸುವ ಹೆಂಗಸಾಗಿ ರೂಪಿಸುವುದನ್ನೂ, ಬಡತನ ಇದ್ದರೂ ಅವಳು ಸುಂದರವಾಗಿ ಅಲಂಕಾರ ಮಾಡಿಕೊಳ್ಳುವಂತೆ ಅವಳ ಮೇಲೆ ಇರುವ ಒತ್ತಡವನ್ನೂ, ಅವಳ ಅವಿರತ ದುಡಿಮೆಯು ನಗಣ್ಯ ವಿಷಯವಾಗಿ ಬಿಂಬಿತವಾಗುವುದನ್ನು ಸೂಚಿಸುತ್ತಾ, ಅಧ್ಯಯನ ಸಾಧ್ಯತೆಯನ್ನು ಹೇಳುತ್ತಾರೆ. ಹಾಗೆಯೇ ಆಧುನಿಕ ಜರ್ಮನಿಯಲ್ಲಿ ಒಂದೆಡೆ ಸವಲತ್ತುಗಳು ಮೋಜುಗಳಾಗಿದ್ದರೆ ಇನ್ನೊಂದೆಡೆ ಬಡತನದ ಬವಣೆಯ ಚಿತ್ರವನ್ನು ನೀಡುವ 'ಮಾಯಿನ್ ನದಿಯ ತೀರದಲ್ಲಿ ಬಾಟಲಿ ಹೆಕ್ಕುವ ಎಮ್ಲಿನ್' ಮನಕಲಕುತ್ತದೆ. ಇನ್ನೊಂದು ಬಹಳ ಮುಖ್ಯವಾಗಿ ಗಮನ ಸೆಳೆದದ್ದೆಂದರೆ, ಅಲ್ಲಿನ ಮಂತ್ರಿಗಳು ಸಮಾರಂಭಗಳಿಗೆ ಏಕಾಂಗಿಯಾಗಿ ಬಂದು ವಿಶೇಷ ಆತಿಥ್ಯ ಇಲ್ಲದೆ ಎಲ್ಲರೊಂದಿಗೆ ಸರಳವಾಗಿ ಬೆರೆತು ಸಾಮಾನ್ಯರಂತೆ ಇರುವುದು.

ಲೋಹಿಯಾ ಜರ್ಮನಿಯಲ್ಲಿ ವ್ಯಾಸಂಗ ಮಾಡಿದ್ದರ ಕುರಿತು ಇಲ್ಲಿ ಮೂರು ಲೇಖನಗಳಿವೆ. ಅವರ ಪಿಎಚ್.ಡಿ ಪ್ರಬಂಧ ಇಂದಿಗೂ ಸಿಕ್ಕಿಲ್ಲ. ಅವರ ಕುರಿತು ವಿಷಯ ಸಂಗ್ರಹಿಸುವಲ್ಲಿ ರೈಯವರು ತೋರುವ ಆಸಕ್ತಿ, ಉತ್ಸಾಹ ಗಮನಾರ್ಹ. ಒಬ್ಬ ಅತ್ಯುತ್ತಮ ಪ್ರಾಧ್ಯಾಪಕರಾದ ರೈಯವರು ಲೋಹಿಯಾ ವಾಸಿಸಿದ್ದ ಮನೆಯನ್ನು ಹುಡುಕಿ ಹೇಳುವ, "ಕೆಲವು ಕಾಗದ ಪತ್ರಗಳು, ಒಂದೆರಡು ವಾಸದ ಮನೆಗಳು- ಕೇವಲ ಪಳಿಯುಳಿಕೆಗಳು ಆಗಿ ಉಳಿದುಬಿಡಬಹುದು. ಆದರೆ ಅವು ಕಳೆದುಹೋದ ಅಥವಾ ಹೂತುಹೋದ ಬದುಕಿನ ಚಿಂತನೆಗಳನ್ನು ಮತ್ತೆ ನೆನಪಿಸಿ ಕಟ್ಟಿಕೊಡುವುದಾದರೆ, ಅವು ನಮ್ಮ ಬೆಳಕಿನ ಬೀಜಗಳು ಆಗಬಹುದು. ಪತ್ರವೊಂದು ಪಂಥ ಆಗಬಹುದು, ಬೀದಿಯೊಂದು ಬದುಕಿನ ಹೆದ್ದಾರಿ ಆಗಬಹುದು" ಎಂಬ ಮಾತಿನಂತೆ ಆ ಕನಸು ಮತ್ತು ಭರವಸೆಗಳನ್ನು ತಮ್ಮ ದಾರಿಯಾಗಿಸಿಕೊಂಡವರು.

**-ಡಾ. ಸಬಿತಾ ಬನ್ನಾಡಿ**

ಪು: **ದೇವರಿಗೆ ಹೋದೆವು** (ಕವನ ಸಂಕಲನ) ಲೇ: **ಸವಿತಾ ನಾಗಭೂಷಣ** ಪ್ರ: **ರೂಪ ಪ್ರಕಾಶನ**, ಮೈಸೂರು ಪು; ೧೪೦ ಬೆಲೆ ರೂ. ೧೦೦/-

### ಬೇಲಿಯ ಹಂಗಿಲ್ಲದೇ ಹರಡುವ ಪರಿಮಳ...




**ತಿ**ಳಿದಂತೆ ಮಾಡು, ನಡೆದಂತೆ ಜಾಡು ಎಂಬ ನಂಬಿಕೆಯಲ್ಲಿ ನಿರುಮ್ಮಳವಾಗಿ ಹರಿವ ನದಿಯಂತೆ ಸವಿತಾ ನಾಗಭೂಷಣ ಅವರ ಕವಿತೆಗಳು ಕನ್ನಡ ಕಾವ್ಯಸಂದರ್ಭದಲ್ಲಿ ತಮ್ಮ ಅನನ್ಯ ಚಹರೆಗಳನ್ನು ಬಿಂಬಿಸಿವೆ. ಸವಿತಾರ ಕವಿತೆಗಳಲ್ಲಿ ಆಶಯ ಮತ್ತು ಆಕೃತಿಗಳು ಬೇರೆಯಲ್ಲ. ಉಸಿರಾಟಕ್ಕೊಂದು ಸಹಜ ಲಯವಿರುವಂತೆ, ಹೆಜ್ಜೆಯಿಡುವ ಕ್ರಿಯೆಯಲ್ಲೇ ತಾಳ ಬೆರೆತಿರುವಂತೆ, ಅವರ 'ದೇವರಿಗೆ ಬಂದೆವು ಎಂಬ ಇತ್ತೀಚಿನ ಸಂಕಲನದ ಕವಿತೆಗಳಿವೆ. ಕಾವ್ಯದ ಸಿದ್ಧಮಾದರಿಗಳನ್ನು ಸದ್ದಿಲ್ಲದೆ ಮೀರುವುದು ಈ ಕಾವ್ಯದ ಅಭಿವ್ಯಕ್ತಿಯ ಶಕ್ತಿ. ಸಿದ್ಧಾಂತಗಳ ಒಜ್ಜೆಯಿಲ್ಲದೆ ಸಹಜ ಹರಿವಿನಲ್ಲಿ ಹಗುರವೂ ಸೂಕ್ಷ್ಮವೂ ಆದ ಕವಿತೆಗಳು ಒಳನೋಟದ ತಿಳಿವನ್ನು ಮೆಲ್ಲಗೆ ಅರುಹುತ್ತವೆ : **'ಕಲ್ಲು ಕರಗುವ ಸಮಯ ಕಾಣಬಲ್ಲವನು / ಇರುವೆಯ ಕಾಲ ಸಪ್ಪಳ ಕೇಳಬಲ್ಲವನು'**

ಪಂಚಭೂತಗಳನ್ನು ತನ್ನ ಸಂವೇದನೆಯೊಳಗಿಟ್ಟುಕೊಂಡು ಸಲಹುವ ಅಕ್ಷರದಮ್ಮನಂತೆ ಇಲ್ಲಿನ ಕವಿತೆಗಳು ಭಾಸವಾಗುತ್ತವೆ. ಸೂರ್ಯ, ಚಂದ್ರ, ತಾರೆ, ನದಿ, ಬೆಟ್ಟ, ಬೇಲಿಹೂ, ಹುಲ್ಲು, ಎಲ್ಲವೂ ಕವಯಿತ್ರಿಯ ಸಂವೇದನೆಯ ಭಾಗವಾಗಿ ಮಿಡಿಯುತ್ತವೆ. ಜಾತಿ-ಮತ, ಧರ್ಮ-ಸಿದ್ಧಾಂತಗಳ ಮಿತಿಯಾಚೆ ಜಿಗಿಯಲು ಇಲ್ಲಿನ ಕವಿತೆಗಳಿಗೆ ಯಾವ ತಾಲಿಮೂ ಬೇಕಾಗಿಲ್ಲ. ಮೇಲೆ-ಕೆಳಗೆ, ಎಡ-ಬಲಗಳಲ್ಲಿ ಎಲ್ಲವನ್ನೂ ವಿಭಜಿತವಾಗಿ ಪರಿಭಾವಿಸುವ ಈ ಪ್ರಕ್ಷುಬ್ಧ ಕಾಲದಲ್ಲಿ ಬೇಲಿಯ ಹಂಗಿಲ್ಲದೇ ಹರಡುವ ಪರಿಮಳದಂತೆ ಈ ಕವಿತೆಗಳು ಕಾಲದೇಶಗಳ ಕಟ್ಟು ಮೀರುತ್ತವೆ. ತಮ್ಮೊಳಗೇ ಬೆರೆತಿರುವ ವಿಶ್ವಾತ್ಮಕ ಸಂವೇದನೆಯೊಂದಿಗೆ ಸುಮ್ಮನೇ ಹರಿಯುತ್ತ ಹೋಗುವ ಕವಿತೆಗಳಿಗೆ ಕಟ್ಟುವ ಹಠವಿಲ್ಲ, ಬಿದ್ದುಹೋಗುವ ಭಯವೂ ಇಲ್ಲ.

ಮಮತೆ ಮತ್ತು ಸಮತೆಗಳು ಸವಿತಾರ ಕಾವ್ಯದ ಎರಡು ಕಣ್ಣುಗಳು. ಸಮಾಜವಾದಿ ಪರಿಸರದಲ್ಲಿ ಅರಳಿದ ಅವರ ಕಾವ್ಯ ತಾಯ್ತನದ ಸಂವೇದನೆಯನ್ನು ತನ್ನ ಲೋಕದೃಷ್ಟಿಯಾಗಿ ವಿಸ್ತರಿಸಿಕೊಂಡಿದೆ. ಸಮಾಜವಾದ ಹಾಗೂ ಸ್ತ್ರೀವಾದಗಳು ಸಿದ್ಧಾಂತ ಮಾತ್ರವಾಗದೆ ಜೀವನಧರ್ಮವೇ ಆಗುವ ಹದಗೊಂಡ ಪಕ್ವ ಮನಸ್ಥಿತಿ ಇಲ್ಲಿನ ಕವಿತೆಗಳ ಜೀವಾಳ. ಆದ್ದರಿಂದಲೇ ಗಾಂಧಿ, ಅಂಬೇಡ್ಕರ್, ಇರೋಂ ಶರ್ಮಿಳಾ ಕುರಿತ ಕವಿತೆಗಳು ಇಂದಿನ ಕಾವ್ಯಧೋರಣೆಗಳಿಗಿಂತ ಭಿನ್ನವಾಗಿ ಧ್ವನಿಸುತ್ತವೆ. 'ನಗರ ನಕ್ಸಲರು' ಎಂಬ ಕವಿತೆ ಆಧುನಿಕತೆಯ ಹಳವಂಡಗಳನ್ನು ತನ್ನ ಕಾಳಜಿ ಭರಿತ ವ್ಯಂಗ್ಯದಲ್ಲಿ ಕಂಡರಿಸುತ್ತದೆ. ಯಂತ್ರನಾಗರಿಕತೆ ಕಟ್ಟಿಕೊಟ್ಟ ಸರಕು ಸಂಸ್ಕೃತಿಯ ವಿರೋಧಾಭಾಸಗಳನ್ನು ಕಾಣಿಸುವಾಗಲೆಲ್ಲ ಮೃದು ಲೇಖನಿ ಮೊನಚಾಗುತ್ತದೆ.

ಎಲ್ಲಕ್ಕಿಂತ ಮಿಗಿಲಾಗಿ ಈ ಕವನ ಸಂಕಲನ ಹೃದಯಕ್ಕೆ ಹತ್ತಿರವಾಗುವುದು ಒಳಗೊಳಗೆ ಹರಿವ ಅಪರಿಮಿತ ಪ್ರೇಮದಿಂದಾಗಿ. ಎಲ್ಲೂ ದ್ವೇಷ ಮೊಳೆಯದಿರಲಿ, ಯುದ್ಧಗಳು ಸಂಭವಿಸದಿರಲಿ ಎಂಬ ಆರ್ತಮೊರೆ ಕವಿತೆಗಳನ್ನು ಮಾತೃಹೃದಯದ ಸೊಲ್ಲುಗಳನ್ನಾಗಿಸಿದೆ. 'ರಕ್ತ ದೇಹದಲ್ಲಿ ಹರಿಯಬೇಕು ಬೀದಿಯಲ್ಲಿ ಚೆಲ್ಲಬಾರದು' ಎಂಬ ಎಚ್ಚರ ಚೂರಾದ ಜಗತ್ತನ್ನು ಜೋಡಿಸುವ ಕಾಳಜಿಯಲ್ಲಿ ಮೂಡಿದ್ದು.


'ಸ್ತ್ರೀಲೋಕ'ದಂತಹ ವಿಶಿಷ್ಟ ಕಥನವನ್ನು ಕನ್ನಡಕ್ಕೆ ಕೊಟ್ಟ ಸವಿತಾರ ಪ್ರಸ್ತುತ ಸಂಕಲನದಲ್ಲಿನ ದೇವಿ, ಸರಸಕ್ಕನ ಸದ್ದು, ಕುರುಹು ಮುಂತಾದ ಕವಿತೆಗಳು ಹೆಣ್ತನದ ಜೊತೆ ನಡೆಸುವ ಅನುಸಂಧಾನ ವಿಶಿಷ್ಟ ಬಗೆಯದು. ತಾಯ್ತನವೆಂಬ ಸತ್ಯ ದೇವರು ಎಂಬ ಕಲ್ಪನೆಗಿಂತ ಹಿರಿದು ಎಂಬುದನ್ನು 'ಸ್ವಾಮಿಯೇ..' ಕವಿತೆ ಮಿಂಚಿನಂತೆ ಹೊಳೆಯಿಸುತ್ತದೆ: **'ಬಾ ಕಂದ / ಕಳ್ಳುಬಳ್ಳಿಯಿಂದ ಸುತ್ತಿ ಒತ್ತಿ ಒಡಲೊಳಗಿರಿಸಿ / ಉರಿಸುವೆ ಹೊತ್ತಿಕೋ...'**

ಪರಮ ಲೌಕಿಕ ಕ್ಷಣಗಳಲ್ಲೇ ಅಲೌಕಿವನ್ನು ಮೂಡಿಸುವ ಬೆರಗು ಇಲ್ಲಿ ಸಂಭವಿಸಿದೆ. ಇದು ಆಶಯವೂ ಹೌದು, ಕಾವ್ಯತಂತ್ರವೂ ಹೌದು. ಸವಿತಾರ ಕವಿತೆಗಳು ಕಾಣಿಸುವ ದೇವರು ನಿರಚನೆಯಿಂದಲೇ ದಕ್ಕುವಂಥವನು/ಳು. ಮನುಷ್ಯರೊಳಗೇ ಇರುವ ದೈವಿಕತೆಯ ಸಾಕ್ಷಾತ್ಕಾರವು ಕೃತಕವಾಗಿ ಕಟ್ಟಿಕೊಂಡ ವೇಷಗಳು ಕಳಚಿದಾಗಲೇ ಆಗುವುದು. ತಾನು ಮಾಡುತ್ತಿರುವುದು ಅಂಥ ಮಹತ್ತರವಾದ ನಿರಚನೆಯನ್ನು ಎಂಬ ಠೇಂಕಾರವಿಲ್ಲದೇ ತನ್ನಪಾಡಿಗೆ ಗುನುಗಿಕೊಳ್ಳುವ ಹಾಡಿನಂತೆ ಇಲ್ಲಿನ ಕವಿತೆಗಳು ಎದೆಗಿಳಿಯುತ್ತವೆ.

**-ಡಾ. ಗೀತಾ ವಸಂತ**

ಪು :ರೈತರ ಆತ್ಮ ಹತ್ಯೆ: ಸಂ: **ಅಲ್ಲಮಪ್ರಭು ಬೆಟ್ಟದೂರು, ಬಸವರಾಜ ಆಕಳವಾಡಿ**
ಪ್ರ: **ಸಹಕಾರ ಪ್ರತಿಭಾ ಪ್ರಕಾಶನ,** ಕೊಪ್ಪಳ ಪು: **೪೪೦** ಬೆಲೆ: **ರೂ. ೪೦೦/-**

## ರೈತರ ಆತ್ಮಹತ್ಯೆ ಸಮಸ್ಯೆ: ಬೆಳಕು ಚೆಲ್ಲುವ ಕೃತಿ



**ರೈ**ತರ ಆತ್ಮಹತ್ಯೆ ನಡೆದ ಸಂದರ್ಭಗಳಲ್ಲಿ ಪತ್ರಿಕೆಗಳಲ್ಲಿ ವರದಿಯಾಗುವುದು ನಂತರ ಸಾರ್ವಜನಿಕರ ಸ್ಮೃತಿಯಿಂದ ಈ ವಿಷಯ ಮರೆಯಾಗುವುದು ಮಾಮೂಲು ಎನ್ನುವಂತಾಗಿದೆ. ಸರ್ಕಾರ ಈ ಹಿಂದೆ ನೇಮಿಸಿದ್ದ ಹಲವು ಸಮಿತಿಗಳ ವರದಿ, ಶಿಫಾರಸ್ಸು ದೂಳು ಹಿಡಿಯುತ್ತ ಕೂತಿದೆ. ಹೀಗಿರುವಾಗ ರೈತರ ಆತ್ಮಹತ್ಯೆ ಕುರಿತು ಈವರೆಗೆ ಪ್ರಕಟವಾಗಿರುವ ಲೇಖನಗಳ ಸಮಗ್ರವಾದ ಕೃತಿಯೊಂದನ್ನು ಸಂಪಾದಿಸುವ ಸಾಹಸಕ್ಕೆ ಅಲ್ಲಮಪ್ರಭು ಬೆಟ್ಟದೂರು ಹಾಗೂ ಬಸವರಾಜ ಆಕಳವಾಡಿ ಮುಂದಾಗಿದ್ದಾರೆ.

ಈ ಕೃತಿಯು ರೈತರ ಆತ್ಮಹತ್ಯೆಯು 'ನಾಗರಿಕತೆಗೊಂದು ಕಳಂಕ' ಎಂಬ ಅರ್ಥಪೂರ್ಣ ಉಪ ಶೀರ್ಷಿಕೆಯನ್ನು ಹೊಂದಿದೆ. ನಾಡಿನ ವಿವಿಧ ಲೇಖಕರು ಬರೆದಿರುವ ೬೧ ಲೇಖನಗಳು, ೬೦ ಕವಿತೆಗಳು ಈ ಕೃತಿಯಲ್ಲಿವೆ. ಹಿರಿಯ ಕವಿ ಚೆನ್ನವೀರ ಕಣವಿ ಅವರು ೩೦ರ ದಶಕದಲ್ಲಿ ತಾವು ಕಂಡ ಗ್ರಾಮೀಣ ಬದುಕಿನ ಸುಂದರ ಚಿತ್ರಣವನ್ನು ತಮ್ಮ ಬರಹದಲ್ಲಿ ಕಟ್ಟಿಕೊಟ್ಟಿದ್ದಾರೆ. ಕೃಷಿ, ಗ್ರಾಮ ಬದುಕು ಎಷ್ಟು ಸರಳವಾಗಿತ್ತು, ಬರ ಬರುತ್ತ ಅದೆಷ್ಟು ಸಂಕೀರ್ಣವಾಯಿತು ಎಂಬ ಸೂಕ್ಷ್ಮ ಹೊಳಹು ಅವರ ಲೇಖನದಲ್ಲಿದೆ. ಡಾ.ಜಿ.ರಾಮಕೃಷ್ಣ ಅವರು ರೈತರ ಸಾಲ ಮನ್ನಾಕ್ಕೆ ಹಿಂದೇಟು ಹಾಕುವ ಸರ್ಕಾರಗಳು ಉದ್ಯಮಿಗಳಿಗೆ ದೊಡ್ಡ ಮೊತ್ತದ ರಿಯಾಯಿತಿ, ಸೌಲಭ್ಯ ನೀಡಲು ಉತ್ಸುಕತೆ ತೋರುವ ವಾಸ್ತವವನ್ನು ತೆರೆದಿಟ್ಟಿದ್ದಾರೆ. ಕೃಷಿ ಕ್ಷೇತ್ರದ ಸುಧಾರಣೆಗೆ ಸಹಕಾರಿ ಕ್ಷೇತ್ರದ ಬಲವರ್ಧನೆ, ಮಧ್ಯವರ್ತಿಗಳ ಹಾವಳಿ ಇಲ್ಲದ ಮಾರುಕಟ್ಟೆ ಸೇರಿದಂತೆ ಹಲವು ಪರಿಹಾರಗಳನ್ನು ಕೂಡ ಅವರು ಸೂಚಿಸಿದ್ದಾರೆ. ಮಾನಸಿಕ ತಜ್ಞ ಡಾ.ಸಿ.ಆರ್.ಚಂದ್ರಶೇಖರ್ ೨೦೧೪ನೇ ಸಾಲಿನಲ್ಲಿ ೧೨,೪೧೦ ರೈತರು ಆತ್ಮಹತ್ಯೆಗೆ ಶರಣಾದ ಅಂಕಿ ಅಂಶಗಳೊಂದಿಗೆ ಆತ್ಮಹತ್ಯೆ ಪ್ರವೃತ್ತಿಗೆ ಕಾರಣವಾಗುವ ಮನೋವೈಜ್ಞಾನಿಕ ಸಂಗತಿಗಳನ್ನು ತಮ್ಮ ಬರಹದಲ್ಲಿ ವಿಶ್ಲೇಷಿಸಿದ್ದಾರೆ. ರೈತ ಮುಖಂಡರಾದ ಕೆ.ಎಸ್.ಪುಟ್ಟಣ್ಣಯ್ಯ, ಚಾಮರಸ ಮಾಲಿಪಾಟೀಲ್, ಗ್ರಾಮಗಳನ್ನು ಅವುಗಳ ಕೃಷಿ ಸ್ಥಿತಿ ಆಧರಿಸಿ ವರ್ಗೀಕರಣ ಮಾಡುವ, ಬರ ನಿರ್ವಹಣೆ ಮಾರ್ಗಗಳ, ರೈತರು ಸಂಘಟಿತರಾಗುವ ಅನಿವಾರ್ಯತೆಯ ಕುರಿತು ಬೆಳಕು ಚೆಲ್ಲಿದ್ದಾರೆ.


ಕೃತಿಯಲ್ಲಿನ ಹೆಚ್ಚಿನ ಲೇಖಕರು ಮುಕ್ತ ಆರ್ಥಿಕ ನೀತಿ ಹೇಗೆ ಕೃಷಿ ಕ್ಷೇತ್ರಕ್ಕೆ ಮಾರಕವಾಗಿದೆ ಎಂಬುದನ್ನು ವಿಶ್ಲೇಷಿಸಿದ್ದಾರೆ. ರೈತರ ಸಾಲ ಮನ್ನಾ ಯೋಜನೆ ಬೇಕೆ, ಒಂದು ವೇಳೆ ಬೇಕಿದ್ದರೆ ಎಲ್ಲಿವರೆಗೆ ಎಂಬ ಪ್ರಶ್ನೆಗಳನ್ನು ಎತ್ತುವ ಬರಹಗಳೂ ಕೃತಿಯಲ್ಲಿವೆ. ಕೃಷಿಯ ವೆಚ್ಚ ಹೆಚ್ಚುತ್ತಿರುವುದು, ನೀರಿನ ನಿರ್ವಹಣೆಯಲ್ಲಿ ಸೋಲುತ್ತಿರುವುದು, ಪ್ರಾಕೃತಿಕ ವಿಕೋಪ, ಅಂತರ್ಜಲ ಬತ್ತುತ್ತಿರುವುದು, ರೈತರ ಬೆಳೆಗೆ ನಿಗದಿತ ಬೆಲೆ ಇಲ್ಲದಿರುವುದು, ಮಾರುಕಟ್ಟೆ ಅವ್ಯವಸ್ಥೆ, ಖಾಸಗಿ ಲೇವಾದೇವಿಗಾರರ ಉಪಟಳ ಹೀಗೆ ಹತ್ತು ಹಲವು ಸಮಸ್ಯೆಗಳ ಬಗ್ಗೆ ಇಲ್ಲಿನ ಬರಹಗಳಲ್ಲಿ ಚರ್ಚೆಯಾಗಿವೆ. ವಿಮರ್ಶಕ ಡಿ.ಎಸ್.ನಾಗಭೂಷಣ ಅವರು ಸಂದರ್ಶನವೊಂದರಲ್ಲಿ ರೈತ ಮುಖಂಡ ಕಡಿದಾಳು ಶಾಮಣ್ಣ ಅವರಿಗೆ ಕೇಳಿರುವ ಪ್ರಶ್ನೆ ಮತ್ತು ಅವರು ನೀಡಿರುವ ಉತ್ತರ ಕುತೂಹಲಕಾರಿಯಾಗಿದೆ. 'ನಾನು ಗೊಬ್ಬರ, ಕೀಟನಾಶಕ, ಟಿಲ್ಲರ್, ಟ್ರ್ಯಾಕ್ಟರ್ ಎಂದು ಹೋಗಲಿಲ್ಲ. ಅಧಿಕ ಇಳುವರಿಯ ಬೆನ್ನು ಹತ್ತಲಿಲ್ಲ. ನನಗೆ ಬೇಕಾದುದ್ದನ್ನೆಲ್ಲಾ ನಾನೇ ಬೆಳೆದು ಮಿಕ್ಕಿದ್ದನ್ನು ಮಾರಿ ಬದುಕುತ್ತಿದ್ದೇನೆ' ಎಂಬ ಶಾಮಣ್ಣ ಅವರ ಮಾತುಗಳು ರೈತ ಸರಳ ಮಾರ್ಗದಲ್ಲಿ ಕೃಷಿ ಕೈಗೊಂಡರೆ ಸಾಲದ ಸುಳಿಗೆ ಬೀಳಲಾರ ಎಂಬುದರ ಚಿತ್ರಣ ಕಟ್ಟಿಕೊಡುತ್ತದೆ. ಮುಂದುವರೆದು ಶಾಮಣ್ಣ ಅವರು ಮದುವೆ, ಮುಂಜಿ, ಹಬ್ಬ, ಜಾತ್ರೆ, ಹರಕೆ, ವಾಸ್ತು ಮೊದಲಾದವುಗಳಿಗೆ ರೈತರು ಹೆಚ್ಚಿನ ಹಣ ಖರ್ಚು ಮಾಡುವ 'ತರಲೆ ತಾಪತ್ರಯ' ಗಳಿಗೆ ಸಿಕ್ಕಿ ಬೀಳುವುದು ಎಂದು ಹೇಳಿರುವುದು ಕೂಡ ಅರ್ಥವತ್ತಾಗಿದೆ.

ರೈತರ ಆತ್ಮಹತ್ಯೆಯನ್ನು ಮಾಧ್ಯಮಗಳು ಅತಿರಂಜಿತವಾಗಿ ಬಿಂಬಿಸುವ ಅಪಾಯಗಳ ಕುರಿತ ಲೇಖನವೂ ಕೃತಿಯಲ್ಲಿದೆ. ಇಂತಹ ಒಂದು ಲೇಖನದಲ್ಲಿ ಆತ್ಮಹತ್ಯೆಯ ವಿಧಾನ ವಿವರಿಸಬಾರದು ಎಂದು ಹೇಳಲಾಗಿದೆ. ಆದರೆ ಕೃತಿಯ ಮತ್ತೊಂದು ಲೇಖನದಲ್ಲಿ ಓರ್ವ ರೈತ ಇಂತಹದ್ದೆ ಕೀಟನಾಶಕ ಬಳಸಿ ಆತ್ಮಹತ್ಯೆ ಮಾಡಿಕೊಂಡ ಬಗ್ಗೆ ವಿವರಗಳಿವೆ. ಈ ರೀತಿಯ ವೈರುಧ್ಯಗಳನ್ನು ಸಂಪಾದಕರಾದವರು ಗಮನಿಸಬೇಕಿತ್ತು. ಆದರೂ, ರೈತರ ಆತ್ಮಹತ್ಯೆ ಸಹಜ ಎನ್ನುವಂತಾಗಿರುವ ಈ ದಿನಗಳಲ್ಲಿ ಈ ವಿಷಯದ ಮೇಲೆ ಗಂಭೀರವಾಗಿ ಚಿಂತಿಸಲು ಕೃತಿ ದಾರಿ ಮಾಡಿಕೊಡುವಂತಿದೆ.

**-ಎಂ. ರಾಘವೇಂದ್ರ**

ಪು: **ಉಡಿಯಕ್ಕಿ** (ಅಂಕಣ ಬರಹಗಳು) ಲೇ: **ವಿನಯಾ** ಪ್ರ: **ಪಲ್ಲವ ಪ್ರಕಾಶನ,** ಚನ್ನಪಟ್ಟಣ ಪು: **೨೨೬** ಬೆಲೆ: **ರೂ. ೨೦೦/-**

## ಅನುಭವ ನಿಷ್ಠ ಅಂಕಣ ಬರಹಗಳು



. **ಬ**ರವಣಿಗೆಯ ಕಾಯಕ ನಮಗರಿವಿಲ್ಲದಂತೆಯೇ ಮಾರುಕಟ್ಟೆಯ ಸರಕಿನ ಮಟ್ಟಿಗೆ ಇಳಿದಿರುವ ಈ ದಿನಮಾನಗಳಲ್ಲಿ ಅಂಕಣ-ಪಂಕಣಗಳು ಸೃಜನಶೀಲ ಲೇಖಕ-ಲೇಖಕಿಯರನ್ನು ಬಲಿ ತೆಗೆದುಕೊಳ್ಳುತ್ತಿವೆಯೇನೋ ಎಂಬ ಅನುಮಾನ ಸಹಜ. ಏಕೆಂದರೆ, ಕಾಲ ಮಿತಿಯಲ್ಲಿ ತಯಾರಿಸಿ ಒದಗಿಸಬೇಕಾದ ಅನಿವಾರ್ಯತೆ-ಪತ್ರಕರ್ತರು 'ಸ್ಟೋರಿ' ಹುಡುಕುವಂತೆ-ಲೇಖಕರೂ ಯಾವ ವಿಷಯದ ಬಗ್ಗೆ ಬರೆಯಲಿ, ಹೇಗೆ ಬರೆಯಲಿ, ಯಾವ ವಿಷಯ ಆರಿಸಿಕೊಳ್ಳಲಿ? ಎಂಬ ಗೊಂದಲದಲ್ಲಿ ಸಿಲುಕಿ ಬರವಣಿಗೆಯ ಸಂತೋಷವೇ ಲೇಖಕನಿಗೆ ಇಲ್ಲದಂತಾಗಿ ಸಮಯಕ್ಕೆ ಸರಿಯಾಗಿ ಏನನ್ನಾದರೂ ಬರೆದುಕೊಡುವುದೇ ದೊಡ್ಡ ಸಾಹಸವೆನ್ನುವಂತಾಗಿದೆ. ಇಷ್ಟಾದರೂ, ಅಪರೂಪಕ್ಕೆ ಒಳನೋಟಗಳಿರುವ ಬದುಕಿನ ಬವಣೆ-ಸಂಕಟ-ವಿಷಾದ-ಸಂತೋಷಗಳನ್ನು ಮುನ್ನೆಲೆಗೆ ತರುವಂತೆ ಬರೆಯುವ ಲೇಖಕ-ಲೇಖಕಿಯರು ಇಲ್ಲ ಎನ್ನುವಂತಿಲ್ಲ. ಅಂತಹ ಲೇಖಕಿಯರಲ್ಲಿ ವಿನಯಾ ಕೂಡ ಒಬ್ಬರು,

ಇವರ ಇತ್ತೀಚಿನ ಅಂಕಣ ಬರಹಗಳ ಸಂಕಲನ 'ಉಡಿಯಕ್ಕಿ', ಅದರ ಹೆಸರಿನಿಂದಲೂ ಅದು ಜತನದಿಂದ ಸೆರಗಲ್ಲಿ ಕಟ್ಟಿಕೊಂಡಿರುವ ಜೀವದ್ರವ್ಯದಿಂದಲೂ ಗಮನಾರ್ಹವಾದದ್ದು. ಈ ಸಂಗ್ರಹ ಅವರು ಸತತವಾಗಿ ಎರಡು ವರ್ಷಗಳವರೆಗೆ 'ಕನ್ನಡ ಪ್ರಭ' ಪತ್ರಿಕೆಯಲಲ್ಲಿ ಬರೆದ ೪೪ ಬರಹಗಳನ್ನು ಒಳಗೊಂಡಿದೆ. ಶೈಕ್ಷಣಿಕ ಪರಿಸರ, ತಾನು ಒಡನಾಡಿದ ವಿದ್ಯಾರ್ಥಿ ಸಮುದಾಯದ ಆಶೋತ್ತರ-ಆತಂಕ-ಗೊಂದಲ-ಕೀಳರಿಮೆ, ತನ್ನ ಸುತ್ತಣದ ಪರಿಸರದಲ್ಲಿರುವ ಮತೀಯ ದ್ವೇಷದ ನಂಜು-ಅಪಾಯಗಳ ಕುರಿತು ವಿನಯಾ ಅಪಾರ ಕಳಕಳಿಯಿಂದ ಇಲ್ಲಿ ಪದೇ ಪದೇ ಚರ್ಚಿಸುತ್ತಾರೆ. ತಮಗೆ ಒದಗಿಬಂದಿರುವ ಚಿಕ್ಕ ಅವಕಾಶಗಳನ್ನೇ ಮೆಟ್ಟಿಲಾಗಿ ಉಪಯೋಗಿಸಕೊಂಡು ಬದುಕಿನಲ್ಲಿ ಅರ್ಥ ಕಂಡುಕೊಳ್ಳುವ ಹೆಣ್ಣು ಮಕ್ಕಳ ವ್ಯಕ್ತಿ ಚಿತ್ರಗಳೂ ಇಲ್ಲಿವೆ. ಮಾರುಕಟ್ಟೆ ಸಂಸ್ಕೃತಿ, ಕೋಮುವಾದ, ಮನುಷ್ಯನ ಒಟ್ಟಾರೆ ಸಮಾಜ-ಸಮುದಾಯದ ವಿವೇಕವನ್ನು ವಿನಾಶಕ್ಕೆ ಒಯ್ಯುತ್ತಿರುವ ಈ ತಲ್ಲಣಗಳೂ ಇಲ್ಲಿ ಕಾಣಸಿಗುತ್ತವೆ.

ವಿನಯಾ ಕವಿಯೂ ಆಗಿರುವುದರಿಂದ ಯಥೇಚ್ಛವಾಗಿ ಕನ್ನಡ ಕವಿತೆಗಳ ಸಾಲುಗಳನ್ನೂ, ನುಡಿಗಟ್ಟು-ಗಾದೆಗಳನ್ನು ತಮ್ಮ ಬರಹಗಳಲ್ಲಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಾರೆ. 'ಆಡಿಕೊಳ್ಳುಬ್ಯಾಡಿ ಬಡವರ ಬದುಕ', 'ಹೆಣ್ಣು ಮಗುವಿಗೆ ನೆಮ್ಮದಿಯ ನಿದ್ದೆಯೂ ಇಲ್ಲದ ಊರಲ್ಲಿ', ;ನಿಂತಿರಬಹುದು ನೀಚು ಬಾಗಿಲಾಚೆಗೆ ಬೆಳಕಿನಕೋಲಂತೆ' ಮುಂತಾದ ಬರಹಗಳು ಪ್ರತ್ಯಕ್ಷ ಅನುಭವಗಳ, ಮಾತುಕತೆಗಳ ಒರೆಗಲ್ಲಿಗೆ ಹಚ್ಚಿಯೇ ಬರೆಯುವ ವಿನಯಾ ಅವರ ಬರವಣಿಗೆಯ ಬದ್ಧತೆ, ಪ್ರಾಮಾಣಿಕತೆಗಳಿಗೆ ಮಾತ್ರವಲ್ಲದೆ ಇವುಗಳಿಂದ ಹುಟ್ಟುವ ಬರಹಗಳ ತೀವ್ರತೆಗೂ ಸಾಕ್ಷಿಯಂತಿವೆ. ವಿನಯಾ ಅವರು ಲೇಖಕಿ ಮಾತ್ರವಲ್ಲದೆ, ಅಧ್ಯಾಪಕಿ ಮತ್ತು ಹೋರಾಟಗಾರ್ತಿಯೂ ಆಗಿರುವುದರಿಂದ ಅವರ ಬರಹಗಳ ಈ ಗುಣಗಳು, ವಿಶೇಷ ಮೆಚ್ಚುಗೆಗೆ ಪಾತ್ರವಾಗುತ್ತವೆ.

ಆದರೆ. ವಿನಯಾ ಅವರ ಕಥೆ, ಕವನ, ವಿಮರ್ಶೆಮತ್ತು ಅಂಕಣ ಬರಹಗಳನ್ನು ಬಹು ಕಾಲದಿಂದ ಗಮನಿಸುತ್ತಾ ಬಂದಿರುವ ನನಗೆ ಇತ್ತೀಚೆಗೆ ಅವರ ಬರಹಗಳಲ್ಲಿ ವಿಚಾರಗಳ ಪುನರಾವರ್ತನೆ, ಅಭಿವ್ಯಕ್ತಿ ಕ್ರಮದ ಏಕತಾನತೆ ಮತ್ತು ಕೆಲವೆಡೆ ತಾರ್ಕಿಕ ವೈಚಾರಿಕತೆಯ ಅತಿ ಭಾರಗಳು ಕಾಣಿಸಿಕೊಳ್ಳುತ್ತಿದೆ ಎನ್ನಿಸುತ್ತಿದೆ. ಬಹುಶಃ ಬರಹದ ಆಯಾಸದ ಸೂಚನೆಗಳಿವು ಮತ್ತು ಲೇಖಕಿಯೊಬ್ಬಳು ಹೋರಾಟಗಾರ್ತಿಯೂ ಆದಾಗ ಎದುರಿಸಬೇಕಾಗಿ ಬರುವ ಸವಾಲುಗಳು ಕೂಡ. ವ್ಯಕ್ತಿತ್ವದ ಈ ಎರಡೂ ಮಗ್ಗಲುಗಳನ್ನು ತಮ್ಮೊಳಗಿನ ಸೃಜನಶೀಲತೆಯ ಹದ ತಪ್ಪದಂತೆ ಹೇಗೆ ಸರಿದೂಗಿಸಿಕೊಂಡು ಹೋಗಬೇಕೆಂಬುದನ್ನು ಸ್ವತಃ ವಿನಯಾ ಅವರೇ ತೀರ್ಮಾನಿಸಬೇಕಿದೆ.

**-ಸವಿತಾ ನಾಗಭೂಷಣ**

‘ಹೊಸ ಮನುಷ್ಯ’ದ ಓದುಗರೆಲ್ಲರಿಗೆ

ಹಾರ್ದಿಕ ಶುಭಾಶಯಗಳು



–ಕೆ. ಸತ್ಯನಾರಾಯಣ
ಮತ್ತು ಕುಟುಂಬ
ಬೆಂಗಳೂರು

‘ಹೊಸ ಮನುಷ್ಯ’ದ ಓದುಗರೆಲ್ಲರಿಗೆ

ಹಾರ್ದಿಕ ಶುಭಾಶಯಗಳು



–ಪ್ರೊ. ಜಿ.ಕೆ. ಗೋವಿಂದರಾವ್
ಮತ್ತು ಕುಟುಂಬ
ಬೆಂಗಳೂರು

‘ಹೊಸ ಮನುಷ್ಯ’ದ ಓದುಗರೆಲ್ಲರಿಗೂ

ಹಾರ್ದಿಕ ಶುಭಾಶಯಗಳು





**-ಡಾ, ಯು. ಅರುಣಾಚಲ**

ಮತ್ತು ಕುಟುಂಬ

**ತೀರ್ಥಹಳ್ಳಿ**

## ತಿಂಗಳ ಸಾಲುಗಳು...



ಎಲ್ಲರೂ ಉಚ್ಚರೆಂದು ಹೇಳಿರಿ, ನೀಚನು ಎಲ್ಲಿಯೂ ಕಾಣುವುದಿಲ್ಲ. ಒಬ್ಬನೇ ಸರ್ವ ಪಾತ್ರಗಳನ್ನು ಉಂಟು ಮಾಡಿದ್ದಾನೆ, ಮೂರು ಲೋಕಗಳಲ್ಲಿ ಒಂದೇ ಪ್ರಕಾಶ ಪಸರಿಸುವುದು.

–ಗುರು ನಾನಕ್

*ಶುಭಾಶಯಗಳೊಂದಿಗೆ,*

**ಆರ್. ಉಮೇಶ್ ಅಂಡ್ ಅಸೋಸಿಯೇಟ್ಸ್**

**ಲೆಕ್ಕ ಪರಿಶೋಧಕರು, ಮೈಸೂರು**

ಮೊಬೈಲ್ : ೯೪೪೮೦೮೪೭೯೩

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper** RNI No. KARKAN/2012/47568

Rgd No. KA/SK/SMG-1209/2019-21

ಇವರಿಗೆ \ To

If undelivered, please return to D.S. Nagabhushana, Editor, ‘Hosa Manushya’, ’HIG-5, ‘Nudi’, Kallahalli Extension, Vinoba Nagara, Shivamogga -577204 ( Karnataka)